

ಕಲ್ಯಾಣ ಕಿರಣ

ಡಿಸೆಂಬರ್ - 2006

ಬೆಲೆ-6/-



ಶಿವಶರಣ ಕುಂಬಾರ ಗುಂಡಯ್ಯ



|| ಓಂ ಶ್ರೀ ಗುರು ಬಸವ ಲಿಂಗಾಯ ನಮಃ ||
866666

ಸಂಪುಟ-35	ಬಸವ ಶಕೆ-873	ಆಜೀವ ಸದಸ್ಯತ್ವ 600 ರೂ.
ಸಂಚಿಕೆ-4	ಡಿಸೆಂಬರ್-2006	ವಾರ್ಷಿಕ ಚಂದಾ 60/- ರೂ.

★ ಬಸವ ಧರ್ಮದ ಕಿರಣವಾಗಲು ಬಾ ★

ಬಾ ಭಕ್ತ ಶರಣಾಗು ಹೊಂದು ಬಸವನ ಒಲುಮೆ
ಈ ಬಸವ ಮಹಾಮನೆಯು ದಿವ್ಯ ಸ್ಫೂರ್ತಿಯ ಚಿಲುಮೆ || ಪ ||

ಕೂಡಲ ಸಂಗಮನ ದಿವ್ಯ ಸನ್ನಿಧಿಯೊಳು
ಮಂತ್ರಧ್ಯಾವ ಗೈದು ಹರಿಯುತಿಹಳೀ ಕೃಷ್ಣೆ
ಗುರು ಬಸವನ ಚರಣ ಭಕ್ತಿಯಿಂ ತೊಳೆಯುತ
ಮಲಪ್ರಭೆಯು ಸಾಗಿಹಳು ಓಂಕಾರ ಶ್ರುತಿ ಹಿಡಿದು || 1 ||

ಅಂಗವನೆ ಜೀವಾತ್ಮ ಲಿಂಗವನೆ ಪರಮಾತ್ಮ
ಲಿಂಗಾಂಗ ಸಮರಸವೆ ಜೀವನದ ಗುರಿಯು
ಬಸವ ಗೀತೆಯ ಸಾರ ಇದುವೆ ಆಗಿಹುದು
ಲಿಂಗದೇವನ ಎಡೆಗೆ ಕರೆದೊಯ್ಯುತಿರುವುದು || 2 ||

ಕಲ್ಯಾಣ ಪ್ರಣತೆಯಲಿ ಭಕ್ತಿ ತೈಲವ ಉಂಡು
ಬಸವ ಜ್ಯೋತಿಯು ಅಂದು ಜನಮನವ ಬೆಳಗಿತು
ಸಂಗಮದ ಹಣತೆಯಲಿ ತ್ಯಾಗ ತೈಲವನೆರೆದು
ಬಸವ ಜ್ಯೋತಿಯ ಬೆಳಕ ಜಗಕ್ಕೆಲ್ಲ ಪಸರಿಸುವಾ || 3 ||

ಬಸವ ಕ್ರಾಂತಿಯ ದಿನದಿ ಸಂಗಮಕ ನೀ ಬಂದು
ಬಸವ ಸಾಗರದೊಳಗೆ ಮಿಂದು ಪುಳುಕಿತನಾಗು
ಶರಣ ಮೇಳಕೆ ಬಂದು ಶರಣರೊಡನೆ ಆಡಿ
ಬಸವ ಧರ್ಮದ ಕಿರಣ ನೀನಾಗಿ ಸಾಗು || 4 ||

ರಚನೆ : ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ

1. ದಕ್ಷಿಣದ ಕೃಷ್ಣೆಗೆ ಕರೆವರ್ರೈಯ್ಯಾ ಜನ ನೆರೆವರಯ್ಯ

2. ಉತ್ತರ ದಕ್ಷಿಣ ಪೂರ್ವ ಪಶ್ಚಿಮ ಹರನಾಜ್ಞೆಯಿಂದ ಬಂತು
   ಜರಿಯಲು ಬೇಡ ।ಅರಿದು ನೋಡುವುದು

3. ಪರಿಧಾವಿಯೆಂಬ ಕಟ್ಟಳೆಗೆ ಉಳಿದವರು ಬರುವರು
   ಒಬ್ಬರುಳಿಯದ ಹಾಗೆ ನೆರೆದು ಕೂಡುವರು
   ಧರೆಯ ಭಕರಿಗಿನ್ನು ಅರಿಕೆ ಮಾಡುತಲಿ
   ಬರೆದಿಟ್ಟ ಪತ್ರಗಳು ಜರಿಯಲು ಬೇಡ

-ಮಡಿವಾಳ ಮಾಚಿದೇವರ ಕಾಲಜ್ಞಾನ

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666

ಸಂಪುಟ 35 ಬಸವ ಶಕೆ 873 ಆಜೀವ ಸದಸ್ಯತ್ವ 600ರೂ
ಸಂಚಿಕೆ 4 ಡಿಸೆಂಬರ್- 2006 ವಾರ್ಷಿಕ ಚಂದಾ 60/ರೂ.

ಲೇಖನಗಳು ಕಿರಣ ಗನ್ನಡಿ ಪುಟ


KALYANA KIRANA-Reg No.19988/70. Monthly Magazine Edited by Pujya Mate Kasturidevi and Published by Pujya Allama Prabhu Swamiji, on behalf of Vishwakalyana Mission Charitable Trust, Basava Mantapa, at Padmashri Printers, Rajaji Nagara, 2nd Block, Bangalore-560010

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ
ವಿಳಾಸಕ್ಕೆ ಬರೆಯಿರಿ :
ದೂರವಾಣಿ: 23325335/22923736

ಬಸವ ಮಂಟಪ, 2035
20ನೆಯ ಮುಖ್ಯ ರಸ್ತೆ, ಎರಡನೆಯ ಬ್ಲಾಕು
ರಾಜಾಜಿ ನಗರ, ಬೆಂಗಳೂರು-560010

॥ ಓಂ ಶ್ರೀ ಗುರು ಬಸವ ಲಿಂಗಾಯ ನಮಃ ॥
866666




ಗಣ ಧ್ವಜ

ಕೂಡಲ ಸಂಗಮ ಸುಕ್ಷೇತ್ರದಲ್ಲಿ
ಲಿಂಗಾಯತ ಧರ್ಮ ಸಂಸ್ಥಾಪನಾ ದಿನದ
ಅಂಗವಾಗಿ ಇಪ್ಪತ್ತನೆಯ

ಶರಣ ಮೇಳ

2007ರ ಜನವರಿ 11, 12, 13, 14 ಮತ್ತು 15 ರಂದು

ಮಹಾಮಾನವತಾವಾದಿ ಲಿಂಗಾಯತ ಧರ್ಮ ಸಂಸ್ಥಾಪಕ, ಧರ್ಮ ಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವ ತತ್ತ್ವಾಭಿಮಾನಿಗಳು ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತ್ವ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು. ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ಶರಣ ಮೇಳವನ್ನು ನಡೆಸಲಾಗುತ್ತದೆ. ಧರ್ಮಕರ್ತ ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ ಕೂಡಲ ಸಂಗಮದಲ್ಲಿ ಲಿಂಗಾಯತ (ಬಸವ) ಧರ್ಮೀಯರು ಧರ್ಮಕ್ಷೇತ್ರ ಎಂದು ಗುರುತಿಸಿಕೊಂಡು 1988ರ ಜನವರಿ 14 ,15 ಮತ್ತು 16 ರಂದು ಪ್ರಥಮ ಚಾರಿತ್ರಿಕ ಶರಣ ಮೇಳವನ್ನು ನಡೆಸಲಾಯಿತು. ಮೊಟ್ಟಮೊದಲನೆಯ ಚಾರಿತ್ರಿಕ ಶರಣ ಮೇಳವು ಎರಡೂವರೆ ಲಕ್ಷಕ್ಕೂ ಮಿಕ್ಕಿದ ಜನ ಸಮೂಹ ಆಕರ್ಷಿಸಿತು.

ಇಂತಹ ಶರಣ ಮೇಳವು ಪ್ರತಿ ವರ್ಷವೂ ಬಸವ ಧರ್ಮ ಸಂಸ್ಥಾಪನಾ ದಿನದ ಅಂಗವಾಗಿ ನಡೆಯುತ್ತಲಿದ್ದು ಇಪ್ಪತ್ತನೆಯ ಶರಣ ಮೇಳವು 2007ರ ಜನವರಿ 11,12,13,14, ಮತ್ತು 15 ರಂದು ನಡೆಯುವುದು. ಸಾಮೂಹಿಕ ಪ್ರಾರ್ಥನೆ, ಸಾಮೂಹಿಕ ಲಿಂಗ ಪೂಜೆ, ಗಣ ಲಿಂಗ ದರ್ಶನ ಶರಣ ಮೇಳದ ಪ್ರಮುಖ ಧಾರ್ಮಿಕ ವಿಧಿಗಳು. ಜನವರಿ 14ರಂದು ಬೆಳಗ್ಗೆ 10 ರಿಂದ ಧ್ವಜಾರೋಹಣ, ಪಥ ಸಂಚಲನ, ಸಮುದಾಯ ಪ್ರಾರ್ಥನೆ ಇರುತ್ತದೆ.(ಐದು ದಿನ ಭಾಗವಹಿಸಲು ಆಗದೆ ಇದ್ದವರು ಸಮುದಾಯ ಪ್ರಾರ್ಥನೆಯಲ್ಲಿ ಭಾಗವಹಿಸುವುದು ಕಡ್ಡಾಯವಾಗಿರುತ್ತದೆ.) ಸಂಜೆ 7 ಗಂಟೆಗೆ ಸಾಮೂಹಿಕ ಇಷ್ಟಲಿಂಗಾರ್ಚನೆ ಇರುತ್ತದೆ. ಇವುಗಳಲ್ಲಿ ಶರಣ ವ್ರತಿಗಳು ಭಾಗವಹಿಸುವುದು ಕಡ್ಡಾಯವಾಗಿರುತ್ತದೆ. 40,30,20 ಮತ್ತು 10ದಿವಸಗಳ 'ಶರಣ ವ್ರತ'ವನ್ನು ಅವರವರ ಸಮಯಾವಕಾಶಕ್ಕೆ ತಕ್ಕಂತೆ ಸ್ವೀಕರಿಸಿ, ಆಚರಿಸಿ ಯಾರು ಬೇಕಾದರೂ ಶರಣ ಮೇಳದಲ್ಲಿ ಭಾಗಿಗಳಾಗಬಹುದು. ಚಿಂತನ ಗೋಷ್ಠಿ, ಉಪನ್ಯಾಸ, ಧಾರ್ಮಿಕ ರಸ ಪ್ರಶ್ನೆ ಮುಂತಾದ ಕಾರ್ಯಕ್ರಮಗಳಿಂದ ಕೂಡಿದ ಶರಣ ಮೇಳವು ಉತ್ತಮ ಜ್ಞಾನ ದಾಸೋಹದೊಡನೆ, ಅನ್ನದಾಸೋಹವನ್ನು ಅಚ್ಚುಕಟ್ಟಾಗಿ ಮಾಡುತ್ತಿದೆ. ದಿ.11 ಮತ್ತು 12ರಂದು ಧರ್ಮಚಿಂತನ ಗೋಷ್ಠಿ ನಡೆಯುತ್ತಿದ್ದು ಸಮಾಜ - ಧರ್ಮಗಳಿಗೆ ಸಂಬಂಧ ಪಟ್ಟಂತೆ ಮುಕ್ತ ಚರ್ಚೆಗೆ ಅವಕಾಶ ವಿರುತ್ತದೆ. ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪಾಲ್ಗೊಳ್ಳಿರಿ.

ಶರಣ ಮೇಳಕ್ಕೆ ಧನ ಸಹಾಯ

ಶರಣ ಮೇಳವು ಬಸವ ಧರ್ಮೀಯರು ಜಾಗತಿಕ ಉತ್ಸವವಾಗಿರುವುದರಿಂದ ವರ್ಷದಿಂದ ವರ್ಷಕ್ಕೆ ವಿಸ್ತಾರಗೊಳ್ಳುತ್ತಿದೆ. ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಮಾತ್ರವಲ್ಲದೆ,ಹೊರ ರಾಜ್ಯಗಳಿಂದಲೂ ಶರಣ ಪತ್ರಿಗಳು ಆಗಮಿಸುವರು. ಜನವರಿ 10 ನೆಯ ದಿನಾಂಕ ರಾತ್ರಿಯಿಂದ 15ನೆಯ ದಿನಾಂಕದ ರಾತ್ರಿಯವರೆಗೆ ಭಾಗಿಗಳಾಗುವ ಎಲ್ಲರಿಗೂ ಪ್ರಸಾದದ ವ್ಯವಸ್ಥೆ ಮಾಡಲಾಗುತ್ತದೆ. ಬೆಳಗಿನ ಉಪಹಾರ, ಮಧ್ಯಾಹ್ನದ ಊಟ ಮತ್ತು ರಾತ್ರಿಯ ಊಟಗಳನ್ನು ವ್ಯವಸ್ಥೆ ಮಾಡಲು ಅಪಾರವಾದ ಹಣದ ಅವಶ್ಯಕತೆ ಇರುತ್ತದೆ. ದಾನಿಗಳು ಕೆಳಗಿನಂತೆ ಧನ ಸಹಾಯ ಮಾಡಬಹುದು.

1. ಮಹಾಪೋಷಕರು : 5000 ರೂ. ಮತ್ತು ಮೇಲೆ ಕೊಟ್ಟವರು.
2. ಪೋಷಕರು : 2000 ರೂ. ಮತ್ತು ಮೇಲೆ ಕೊಟ್ಟವರು.
3. ದಾನಿಗಳು : 1000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು : 500 ರೂ.
5. ಸ್ವಾಗತ ಸಮಿತಿ ಸದಸ್ಯತ್ವ : 250 ರೂ.
6. ಪ್ರತಿನಿಧಿ ಶುಲ್ಕ : 125 ರೂ.

ಅನ್ನ ದಾಸೋಹಕ್ಕಾಗಿ ಎಷ್ಟಾದರೂ ಭಕ್ತಿಪೂರ್ವಕ ಕಾಣಿಕೆಯನ್ನು ಕೊಡಬಹುದು.

ಶರಣ ಮೇಳಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 5000/ 10000 ರೂಪಾಯಿಗಳ ಪುದುವಟ್ಟು(F.D.)ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಶರಣ ಮೇಳದ ದಾಸೋಹಕ್ಕೆ ವಿನಿಯೋಗಿಸಲಾಗುವುದು.

ಜನರು ತಮ್ಮ ಕೈಲಾದಷ್ಟು ದೇಣಿಗೆ ಸಲ್ಲಿಸಬಹುದು. ದವಸ-ಧಾನ್ಯಗಳ ರೂಪದಲ್ಲಿ ಕೊಡಬಹುದು. ಬ್ಯಾಂಕ್ ಡ್ರಾಫ್ಟ್, ಚೆಕ್ಕುಗಳನ್ನು ''ಶರಣ ಮೇಳ ಉತ್ಸವ ಸಮಿತಿ, ಕೂಡಲ ಸಂಗಮ'' ದ ಹೆಸರಿನಲ್ಲಾಗಲೀ, (ಕೂಡಲ ಸಂಗಮಕ್ಕೆ ಡಿ.ಡಿ. ತೆಗೆಸುವವರು ಕೇವಲ State Bank of India, Koodala Sangama ಶಾಖೆಗೆ ಡಿ.ಡಿ. ತೆಗೆಸಬೇಕು.) ಬೆಂಗಳೂರಿನ ಯಾವುದೇ ಬ್ಯಾಂಕ್ ಶಾಖೆಯ ಡಿ.ಡಿ.ಯನ್ನಾಗಲೀ ತೆಗೆಸಿ ಕಳಿಸಬಹುದು. ಎರಡೂ ವಿಳಾಸಗಳನ್ನು ಕೆಳಗೆ ಕೊಡಲಾಗಿದೆ.

ಮುಸಲ್ಮಾನ್ ಧರ್ಮೀಯರಿಗೆ ಮೆಕ್ಕಾ , ಸಿಖ್ಖರಿಗೆ ಅಮೃತಸರ, ಬೌದ್ಧರಿಗೆ ಬುದ್ಧಗಯೆ ಧರ್ಮಕ್ಷೇತ್ರಗಳಾಗಿರುವಂತೆ ಲಿಂಗಾಯತ ಧರ್ಮಾನುಯಾಯಿಗಳಿಗೆ ವಿಶ್ವಗುರು ಬಸವಣ್ಣನವರ ಐಕ್ಯಸ್ಥಾನ ಕೂಡಲ ಸಂಗಮವೇ ಧರ್ಮಕ್ಷೇತ್ರ. ತನ್ನ ಜೀವಮಾನದಲ್ಲಿ ಆಯುಷ್ಯ , ಆರೋಗ್ಯ ಇರುವವರೆಗೆ ಎಷ್ಟು ಸಲ ಒಬ್ಬ ವ್ಯಕ್ತಿ ಶರಣ ಮೇಳದಲ್ಲಿ ಭಾಗಿಯಾಗುತ್ತಾನೋ ಆತ ನಿಜಕ್ಕೂ ಹೆಚ್ಚು ಪುಣ್ಯವಂತ ಪ್ರತಿಯೊಬ್ಬ ಬಸವ ಧರ್ಮಾನುಯಾಯಿಯು ತನ್ನ ಜೀವಮಾನದಲ್ಲಿ ಎಷ್ಟೇ ಅನಾನುಕೂಲತೆ ಇದ್ದರೂ ಶರಣ ಮೇಳದ (ಜನವರಿ 14 ರಂದು ನಡೆಯುವ) ಸಮುದಾಯ ಪ್ರಾರ್ಥನೆಯಲ್ಲಿ ಭಾಗಿಯಾಗಿ , ಗಣಲಿಂಗ ದರ್ಶನ ಪಡದು ತನ್ನ ಧಾರ್ಮಿಕ ಅನುಯಾಯಿತ್ವವನ್ನು ಸ್ಥಿರೀಕರಿಸದೇ ಇದ್ದರೆ ಅವನು ಪ್ರಾಮಾಣಿಕ ಲಿಂಗಾಯತನಾಗನು. ಇಂತಹ ಪವಿತ್ರ ಶರಣ ಮೇಳಕ್ಕೆ ಸಹೋದರ ಭಾವನೆಯಿಂದ ಎಲ್ಲರೂ ಲಕ್ಷಗಟ್ಟಳೆ ಸಂಖ್ಯೆಯಲ್ಲಿ ಬನ್ನಿರಿ.

ಶರಣರ ಬರುವೆಮಗೆ ಪ್ರಾಣ ಜೀವಾಳ

1. ಶರಣ ಮೇಳ ಉತ್ಸವ ಸಮಿತಿ (ರಿ.)
ಬಸವ ಮಂಟಪ, 2035, 20ನೆಯ ಮೇನ್
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
ದೂ : 080: 23325335/ 22923736

2. ಪೂಜ್ಯ ಶ್ರೀ ಮಹಾಜಗದ್ಗುರು
ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ
ಕೂಡಲ ಸಂಗಮ-587115
ತಾ-ಹುನಗುಂದ, ಜಿ-ಬಾಗಲಕೋಟೆ

ಸಂಪಾದಕೀಯ

ಪಂಚ ಪೀಠಾಧೀಶರಿಂದ ತಾತ್ತ್ವಿಕ ಉತ್ತರವಿಲ್ಲ

-ಮಾತಾಜಿ

ಶಿವಮೊಗ್ಗ ನಗರದಲ್ಲಿ ಈ ಬಾರಿ ಪಂಚಪೀಠಾಧೀಶರಲ್ಲಿ ಒಬ್ಬರಾದ ರಂಭಾಪುರಿ ಶ್ರೀಗಳ ದಸರಾ ದರ್ಬಾರ್ ನಡೆಯಿತು. ಅದನ್ನು ಸ್ಥಳೀಯ ಚಾನೆಲ್‌ನವರು ಪೂರ್ತಿಯಾಗಿ ತೋರಿಸಿದರಂತೆ. ದಸರಾ ದರ್ಬಾರಿನ ರಾಜ ವೈಭವವನ್ನು ಅನೇಕ ಬಸವ ಭಕ್ತರು ವಿವರವಾಗಿ ವರ್ಣಿಸಿದರು. ನಾನು ಶಿವಮೊಗ್ಗ- ಭದ್ರಾವತಿ- ತರೀಕೆರೆಗೆ ಕೆಲವು ಕಾರ್ಯಕ್ರಮಗಳಿಗಾಗಿ ಹೋಗಿದ್ದೆ. ಶಿವಮೊಗ್ಗ ರಾಷ್ಟ್ರೀಯ ಬಸವ ದಳದವರು ಕುವೆಂಪು ಕಲಾಮಂದಿರದಲ್ಲಿ ಬಹುದೊಡ್ಡ ಕಾರ್ಯಕ್ರಮ ಏರ್ಪಡಿಸಿದ್ದರು. ಅಂದು ಮತ್ತು ಮರು ದಿವಸ ಭದ್ರಾವತಿ ರಾಷ್ಟ್ರೀಯ ಬಸವ ದಳದವರು ಏರ್ಪಡಿಸಿದ್ದ ಬಸವ ಜ್ಯೋತಿ ಕಾರ್ಯಕ್ರಮದಲ್ಲಿ ಪಂಚಪೀಠಾಧೀಶರ ದಸರಾ ದರ್ಬಾರನ್ನು ಖಂಡಿಸಿ, ಮಾತನಾಡಿದೆ. ಸಂಯುಕ್ತ ಕರ್ನಾಟಕದವರು ಬಹಳ ಚನ್ನಾಗಿ ನನ್ನ ಹೇಳಿಕೆಯನ್ನು ಪ್ರಕಟಿಸಿದ್ದರು.

ದಸರಾ ದರ್ಬಾರ, ಸಿಂಹಾಸನಾರೋಹಣ, ನಜರ್ ಸಮರ್ಪಣೆ ಈ ಪದಗಳಲ್ಲ ಧಾರ್ಮಿಕತೆ ಇದೆಯೆ? ದರ್ಬಾರ್ ಮಾಡಬೇಕಾದವರು ಮಹಾರಾಜರು ಸ್ವಾಮಿಗಳಲ್ಲ. ಗುರುಗಳು,ಮಠಾಧೀಶರು ಮಾಡಬೇಕಾದುದು ಧರ್ಮ ಸಭೆ, ಧರ್ಮ ಚಿಂತನ ಗೋಷ್ಠಿ. ರಾಜರು ಏರುವುದು ಸಿಂಹಾಸನ ಗುರುಗಳು ಏರುವುದು ಪೀಠ. ವೈದಿಕ ಸ್ವಾಮಿಗಳು ಸಹಿತ ಇಂಥ ಅನವಶ್ಯಕ ಆಡಂಬರಗಳಿಗೆ ದೂರವಾಗುತ್ತಿದ್ದಾರೆ. ವೈಭವದ ಸಂಕೇತವಾದ ವಿಷ್ಣುವಿನ ಪರಂಪರೆಯವರು ಸಹ ಬದಲಾಗುತ್ತಿರುವ ಕಾಲಕ್ಕೆ ಹೊಂದಿಕೊಂಡು ಸರಳವಾಗುತ್ತಿದ್ದಾರೆ. ಹೀಗಿದ್ದಾಗ ಶಿವ ಪರಂಪರೆಯಲ್ಲಿ ಸಾಗಿ ಬಂದಿರುವ (ಇವರಿಗೆ ಬಸವಾದಿ ಪ್ರಮಥರ ಶರಣ ಪರಂಪರೆಯಂತೂ ಬಲು ದೂರ) ಪಂಚ ಪೀಠಾಧೀಶರು ಅವರ ಪ್ರಥಮ ಗುರು ಯೋಗಿರಾಜ ಶಿವನೇ ಏರದಿರುವ ಸಿಂಹಾಸನ ಏರಿ, ದರ್ಬಾರ್ ನಡೆಸುವುದು ಎಷ್ಟು ಸೂಕ್ತ? ನಜರ್ ಅರ್ಪಿಸುವುದ, ಅರ್ಪಿಸಿದವರು ಬೆನ್ನು ತೋರಿಸದೆ ಹಿಂದುಹಿಂದಕ್ಕೆ ನಡೆದು ಹೋಗುವುದು ಇವೆಲ್ಲ ಪೌರಾಣಿಕ ಯುಗದ ರಾಜರ ದರ್ಬಾರಿನಂತೆ ತೋರುತ್ತಿವೆ. ಇನ್ನೂ ಅವರು ಉಡುವ ಬಣ್ಣ ಬಣ್ಣದ ಪಿತಾಂಬರಗಳು,ಬಂಗಾರ-ವಜ್ರದ ಕಿರೀಟ, ಉಂಗುರಗಳು ಎಷ್ಟು ಹಾಸ್ಯಸ್ಪದ ಎಂದರೆ ವೈಚಾರಿಕ ಜನರಲ್ಲಿ ಗುರು-ಧರ್ಮ-ದೇವರಲ್ಲಿ ಶ್ರದ್ಧೆಯೇ ಹೋಗುವಂತೆ ಮಾಡುತ್ತಿವೆ.

'ರಂಭಾ'ಪುರಿ ಎಂಬ ಹೆಸರು ಏಕೆ ಬಂದಿತೊ ? ರಂಭೆಯು ನೆಲೆಸಿದ್ದ ಇಂದ್ರಲೋಕದ ವೈಭವದಂತಹ ದಸರಾ ದರ್ಬಾರಿಗೆ ಆದ ಖರ್ಚು ಒಂದು ಕೋಟಿ ಎಂದು ಯಾರೋ ಹೇಳಿದರು ಕೇಳಿ ಬಹಳ ಆಘಾತವಾಯಿತು. ಒಂದು ತತ್ತ್ವ ಚಿಂತನೆ ಇಲ್ಲ, ಭಕ್ತಿಯ ಬಿತ್ತುವಿಕೆ ಇಲ್ಲ, ಜಾತ್ರೆಗೆ ಬರುವಂತೆ ಜನ ಬಂದು ಬಂದು ಇಂದ್ರ ವೈಭವ ನೋಡಿ ಬೆರಗಾಗಿ ಹೋಗುತ್ತಿದ್ದರಂತೆ. ಪಂಚ ಪೀಠಾಧೀಶರು ಆತ್ಮಾವಲೋಕನ ಮಾಡಿಕೊಳ್ಳಬೇಕು. ನಮ್ಮ ದೇಶದಲ್ಲಿ ದಿನ ದಿನಕ್ಕೂ ಬಡತನ ಅಧಿಕವಾಗುತ್ತಿದೆ. ಅನಾಥರು ದೀನರುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಧರ್ಮದ ಹೆಸರಿನಲ್ಲಿ ಕೋಟಿಗಟ್ಟಳೆ, ಲಕ್ಷಗಟ್ಟಳೆ ಹಣ ಅಪವ್ಯಯವಾಗುತ್ತಿದ್ದರೆ ಇವರು ಅದಕ್ಕೆ ಏಕೆ ಪ್ರೋತ್ಸಾಹ ಕೊಡಬೇಕು? ಇವರನ್ನು ಮೆರೆಸಿದರೆ ಸಾಕು; ವೈಭವಿಸಿ ಹೊಗಳಿದರೆ ಸಾಕು ಸಮಾಜದ ಅಥವಾ ಸಂಘ - ಸಂಸ್ಥೆಗಳ ಸಮಿತಿಗಳ ಹಣ ದುರುಪಯೋಗವಾದರೆ ಆಗಲಿ ಎಂಬ ಧೋರಣೆ ಒಳ್ಳೆಯದಲ್ಲ. ಸಂಘ-ಸಂಸ್ಥೆಗಳ ಸಮಿತಿಗಳವರು ಹಣವನ್ನು ಸೂರೆ ಮಾಡುವಂತೆ ನಟಿಸಿ, ಸಿಕ್ಕಷ್ಟು ಬಾಚಿಕೊಳ್ಳಲು ದರ್ಬಾರು, ಗುರು ವಂದನೆಗಳು, ಅಡ್ಡ ಪಲ್ಲಕಿಗಳನ್ನು ಏರ್ಪಡಿಸುವರು. ನಿಜ ಜ್ಞಾನಿಗಳು ಇಂಥ ಅಪವ್ಯಯವನ್ನು, ತಮ್ಮನ್ನು ವೈಭವೀಕರಿಸಲು ಮಾಡಿದರೂ, ಖಂಡಿಸಿ ತಡೆಗಟ್ಟಬೇಕು. ಮಹಾತ್ಮಾ ಗಾಂಧೀಜಿಯಂಥವರು ನಮಗೆ ಸರಳತೆಯ ಪಾಠ ಕಲಿಸುವ ಆದರ್ಶ ಮೂರ್ತಿಗಳಾಗಬೇಕು.

ಕ್ರೈಸ್ತರು ಓಣಿ ಓಣಿಗಳಲ್ಲಿ ಅನಾಥಾಶ್ರಮಗಳನ್ನು ತೆರೆದಿರುತ್ತಿದ್ದಾರೆ. ಕುಡುಕ ತಂದೆ, ನೀತಿಗೆಟ್ಟ ತಾಯಂದಿರ ಹೆಚ್ಚಳದಿಂದ ಅನಾಥ ಮಕ್ಕಳ ಸಂಖ್ಯೆ ದಿನ ದಿನಕ್ಕೂ ಬೆಳೆಯುತ್ತಿದೆ. ಅವರಿಗೆ ಆಶ್ರಯ ನೀಡಿದರೆ ಅವರು ಕ್ರೈಸ್ತರಾಗುವುದು ಖಚಿತ, ಅಂಥವರಿಂದ ಕ್ರೈಸ್ತ ಧರ್ಮ ಹಬ್ಬುತ್ತದೆ. ಎಂದು ತಿಳಿದು ಲೆಕ್ಕವಿಲ್ಲದಷ್ಟು ಅನಾಥಾಶ್ರಮ ತೆರೆಯುತ್ತಿದ್ದಾರೆ. ಚಿಕ್ಕಮಗಳೂರು, ಹಾಸನ ಮುಂತಾದ ಕಡೆ ಘಟ್ಟ ಪ್ರದೇಶಗಳಲ್ಲಿ ಬಡವರಾದ ಲಿಂಗಾಯತರು ಆರ್ಥಿಕ ಸೌಲಭ್ಯದ ಆಮಿಷಕ್ಕೆ ಒಳಗಾಗಿ ಕ್ರೈಸ್ತರಾಗುತ್ತಿದ್ದಾರೆ ಎಂದು ವರದಿಗಳು ನಿತ್ಯವು ಬರುತ್ತಿವೆ. ಬಡತನ, ಅಸ್ಪೃಶ್ಯತೆ ಕಾರಣದಿಂದ ದಲಿತರು, ಹಿಂದುಳಿದ ವರ್ಗದವರು ಕ್ರೈಸ್ತ, ಇಸ್ಲಾಂಗಳಿಗೆ ನಿತ್ಯವೂ ಮತಾಂತರಗೊಳ್ಳುತ್ತಿದ್ದಾರೆ. ಇದು ರಾಷ್ಟ್ರೀಯ ಭದ್ರತೆಗೂ ಗಂಡಾಂತರ ತರುತ್ತಿದೆ ಎಂಬುದು,

ಕಾಶ್ಮೀರ, ಮೀಜೋರಾಂ, ನಾಗಾಲ್ಯಾಂಡ್ ಇತ್ಯಾದಿ ನೋಡಿದಾಗ ಅರಿವಾಗದೇ ಇರದು. ಇಂಥದೊಂದನ್ನೂ ಚಿಂತಿಸದೆ ತಮ್ಮನ್ನು ವೈಭವೀಕರಿಸಲು ಕೆಲವು ಧನದಾಹಿ ಮುಂದಾಳುಗಳು, ರಾಜಕಾರಣಿಗಳು ಮುಂದಾದಾಗ ಅದನ್ನು ಪ್ರೋತ್ಸಾಹಿಸುವುದು ಎಷ್ಟರ ಮಟ್ಟಿಗೆ ಮಾನವೀಯ? ಪ್ರಜಾ ಪ್ರಭುತ್ವ ಒಂದು ಹುಚ್ಚು ಕುದುರೆ; ಅದನ್ನು ಹತ್ತಿ ಯಾರು ಬೇಕಾದರೂ ಹೇಗೆ ಬೇಕಾದರೂ ಕುಣಿಯಲು ಸ್ವಾತಂತ್ರ್ಯ ನೀಡುತ್ತದೆ. ಆದರೆ ತ್ಯಾಗಿಗಳು, ಜ್ಞಾನಿಗಳು, ಆದರ್ಶವಂತರು ವೈಭವವನ್ನು ನಿರಾಕರಿಸಬೇಕು. ಹೆಣ್ಣು-ಹೊನ್ನು-ಮಣ್ಣಿನಂತೆ ಅದೊಂದು ಮಾಯೆ? ಕೀರ್ತಿಯ ಹುಚ್ಚು ಎಂಬ ಮಾಯೆಯಿಂದ ಹೊರಬರುವುದೂ ಮಠಾಧೀಶರಿಗೆ ಅಗತ್ಯ.

ನನ್ನ ಒಂದು ಪ್ರಶ್ನೆಗೂ, ಸವಾಲಿಗೂ ಉತ್ತರ ಕೊಡದೆ ವೈಯಕ್ತಿಕವಾಗಿ ನನ್ನನ್ನು ನಿಂದಿಸುವ ರಂಭಾಪುರಿಯವರ ಟೀಕೆ ಅವರ ತಾತ್ತ್ವಿಕ ಪೊಳ್ಳುತನವನ್ನು ತೋರಿಸುತ್ತದೆ. ಇಂಥ ಹುಚ್ಚು ಆಡಂಬರ, ವೈಭವದ ವೀರಶೈವಕ್ಕೂ, ಸರಳತೆ- ಸಮಾನತೆ-ಸಹೋದರತ್ವ ಬೋಧಿಸುವ ಧರ್ಮಗುರು ಬಸವಣ್ಣನವರು ಬೋಧಿಸುವ ಲಿಂಗಾಯತ ಧರ್ಮಕ್ಕೂ ಅಜ(ಆಡು)ಗಜ(ಆನೆ)ದಷ್ಟು ವ್ಯತ್ಯಾಸ ಇವೆರಡೂ ಕೂಡದ ಹಳಿಗಳು ಎಂಬುದನ್ನು ಲಿಂಗಾಯತ ಧರ್ಮೀಯರು ಎಷ್ಟು ಬೇಗ ಮನಗಂಡರೆ ಅಷ್ಟು ಒಳ್ಳೆಯದು.

ಸ್ವಯಂ ಸೇವಕರಿಗೆ ಕರೆ

-ಮಾತಾಜಿ

ಕಾಯ ಸೇವೆ:

12ನೆಯ ಶತಮಾನದ ಮಹಾಮನೆಯಲ್ಲಿ ನಡೆದಂತಹ ದಾಸೋಹ ಸೇವೆಯನ್ನು ನೆನಪಿಸುವಂತೆ ಶರಣ ಮೇಳದ ದಾಸೋಹ ನಡೆಯಬೇಕು, ನಡೆಯುತ್ತದೆ. ಧರ್ಮಪಿತರ ಆದೇಶ ಹೀಗಿರುತ್ತದೆ.

ಭಕ್ತನ ಭಕ್ತನು ಮನೆಗೆ ಬಂದಡೆ, ಭೃತ್ಯಾಚಾರವ ಮಾಡಬೇಕು;
ಕರ್ತನಾಗಿ ಕಾಲ ತೊಳಯಿಸಿಕೊಂಡಡೆ, ಹಿಂದೆ ಮಾಡಿದ ಭಕ್ತಿಗೆ ಹಾನಿ!
ಲಕ್ಷಗಾವುದ ದಾರಿಯ ಹೋಗಿ, ಭಕ್ತನು ಭಕ್ತನ ಕಾಂಬುದು ಸದಾಚಾರ.
ಅಲ್ಲಿ ಕೂಡ ದಾಸೋಹವ ಮಾಡಿದೊಡೆ
ಕೂಡಿಕೊಂಬನು ನಮ್ಮ ಲಿಂಗದೇವನು. (ಬ.ವ.ದೀ 248)

ಶರಣರು ಶರಣರನ್ನು ಭೇಟಿಯಾದಾಗ ಪರಸ್ಪರ ಉಪಚರಿಸಬೇಕು, ಸೇವೆ ಮಾಡಬೇಕು. ತಾನೇ ಶ್ರೇಷ್ಠ ಎಂಬ ಅಹಂಕಾರ ತಾಳಿ ಇನ್ನಿತರರು ಸೇವೆ ಮಾಡಲೆಂದು ನಿರೀಕ್ಷಿಸಬಾರದು. ಲಕ್ಷಗಾವುದ ದೂರವೇ ಇರಲಿ ಸಹ ಧರ್ಮೀಯ ಶರಣರನ್ನು ಕಾಣಲು ಹೋಗಬೇಕು. ಹಾಗೆ ಹೋದಾಗ ದಾಸೋಹಂ ಭಾವನೆಯಿಂದ ತನು ಸೇವೆ - ಮನ ಸೇವೆ - ಧನ ಸೇವೆ ಮಾಡಬೇಕು. ಅಂಥವರನ್ನು ಲಿಂಗದೇವ ಮೆಚ್ಚಿ, ಒಲಿದು ಕೂಡುವನು. ಧರ್ಮಪಿತರ ಆದೇಶವನ್ನು ಪಾಲಿಸಲು ಇರುವ ಸೂಕ್ತ ಅವಕಾಶ ಶರಣ ಮೇಳ. ಅಲ್ಲಿ ದಾಸೋಹ ಮಾಡಲು ಅವಕಾಶ ಉಂಟು. ಒಬ್ಬೊಬ್ಬ ಶರಣ ಬಂಧುವನ್ನು ಭೇಟಿಯಾಗಲು ಬಹುದೂರ ಕ್ರಮಿಸಬೇಕಿಲ್ಲ. ಎಲ್ಲರೂ ಒಂದೇ ಕಡೆ ಸಿಗುತ್ತಾರೆ. ಜೊತೆಗೆ ಜ್ಞಾನ ದಾಸೋಹವೂ ಇರುತ್ತದೆ. ಆದ್ದರಿಂದ ಅಚ್ಚುಕಟ್ಟಾಗಿ ದಾಸೋಹವು ನಡೆಯಬೇಕಾದರೆ ಹೆಚ್ಚು ಜನ ಶರಣ ಬಂಧುಗಳು ಸ್ವಯಂ ಸೇವಕರಾಗಿ ದುಡಿಯಲು ಸಿದ್ಧರಾಗಬೇಕು. ಶರಣ ಮೇಳವೆಂಬ ತೌರಿನ ಹಬ್ಬಕ್ಕಾಗಿ ರಜೆಗಳನ್ನು, ಸಮಯವನ್ನು ಕಾಯ್ದಿರಿಸಿಕೊಳ್ಳಬೇಕು; ನೀಡಲು ಕಾಣಿಕೆಯನ್ನು ಹೊಂದಿಸಿ ಇಡಬೇಕು. ಶರಣ ಮೇಳ ಪೂರೈಸಿ ಹೋಗುತ್ತಲೇ ಹುಂಡಿಯೊಂದನ್ನು ಇಟ್ಟು ಕಾಣಿಕೆ ಸಂಗ್ರಹಿಸುತ್ತಲಿರಬೇಕು .ತಮ್ಮ ಇಷ್ಟಾರ್ಥಗಳು ಸಿದ್ಧಿಯಾದರೆ ಶರಣ ಮೇಳಕ್ಕೆ ಬಂದು ಸೇವಾ ಕಾರ್ಯ ಕೈಗೊಳ್ಳುತ್ತೇವೆ ಎಂಬ ಹರಕೆಯನ್ನು ಮಾಡಿಕೊಳ್ಳಬೇಕು. ತನು ದಾಸೋಹಿಗಳು ಡಿಸೆಂಬರ್ 15ರಿಂದಲೇ ಬರಲು ಪ್ರಯತ್ನಿಸಬೇಕು. ಅತ್ಯಂತ ಹೆಚ್ಚಿನ ಜನರು ಕನಿಷ್ಠ ಜನವರಿ 1ರಿಂದಲಾದರೂ ಬಂದು ಸೇವಾ ಕಾರ್ಯದಲ್ಲಿ ತೊಡಗಬೇಕು. ಆರ್ಥಿಕ ವಾಗಿ ಅಶಕ್ತರಿದ್ದವರಿಗೆ ರಾಷ್ಟ್ರೀಯ ಬಸವ ದಳದವರು ಗಾಡಿ ಖರ್ಚು ಕೊಟ್ಟು ಕಳಿಸಿಕೊಡಬೇಕು. ಪ್ರತಿ ರಾಷ್ಟ್ರೀಯ ಬಸವ ದಳದವರು ಮತ್ತು ಇನ್ನಿತರ ಶರಣರು ತನು ಸೇವೆಗೆ ಸನ್ನದ್ಧರಾಗಬೇಕು. ಬುದ್ಧಿ ಜೀವಿಗಳಿಗೂ ಸಾಕಷ್ಟು ಕೆಲಸವುರುತ್ತದೆ. ಶರಣೆಯರಿಗೂ ಸೇವಾ ಕಾರ್ಯ ಸಾಕಷ್ಟು ಇರುತ್ತದೆ. ಸಮಯವನ್ನು ಒದಗಿಸಿಕೊಂಡು ಬಂದು ಯಾರು ಬೇಕಾದರೂ ಸೇವೆ ಮಾಡಬಹುದು

ಶರಣ ಮೇಳಕೆ ಬಂದ ಶರಣರಿಗೆ ಮಾಡುವ ಉಪಚಾರ,
ಧರ್ಮಗುರು ಬಸವಣ್ಣನವರಿಗೆ ಮಾಡುವ ಉಪಚಾರ,
ಶರಣ ಮೇಳದ ವಿಸ್ತರಣೆಯಲ್ಲಿದೆ
ಬಸವ ಗುರುವಿನ ಕೀರ್ತಿ, ಲಿಂಗಾಯತ ಧರ್ಮದ ಮಹತಿ ।
ಎಂಬುದು ತಮ್ಮೆಲ್ಲರಲ್ಲಿ ಅರಿವಿತ್ತುತ್ತಿ.

ಛತ್ರಪತಿ ಶಿವಾಜಿ ಮೂಲ ಕನ್ನಡ ನೆಲ

(ಮುಂದುವರಿದ ಭಾಗ) -ಮಾತಾಜಿ

ಭೋಸಲೆ ಮನೆತನದವರ ಮನೆ ದೇವರಾದ ಶಿಖರ ಶಿಂಗಣಾಪುರದ ಶಂಭು ಮಹಾದೇವನ ಎಳೆ ಹಿಡಿದು ಹೊರಟ ಡಾ|| ಢೇರೆಯವರು ತಲುಪಿದ್ದು ಗದಗಿನ ಸೋರಟೂರಿಗೆ. ಅದು ಗಾಗಾ ಭಟ್ಟರ ಕೃತಿಯಲ್ಲಿ ಸೌರಾಷ್ಟ್ರವಾಗಿದೆ. ಯಾದವ (ಗೊಲ್ಲ)ರಾದ ಈ ಜನ ಮೂಲತಃ ಹೊಯ್ಸಳರ ಒಂದು ವಂಶ. ವಿಜಯನಗರ ಸಾಮ್ರಾಜ್ಯದ ಪತನದ ನಂತರ ಚದುರಿದಂತಾಗಿ, ಮಹಾರಾಷ್ಟ್ರಕ್ಕೆ ಹೋದ ಬಳಿಕ ಭೋಸಲೆಯಾದರು.

ಇವರ ಮನೆತನದವರಿಗೆ "ಶಿರಸಾಟ ಎಂಬ ವಿಶೇಷಣವಿದ್ದು ಇವರ ವಂಶದಲ್ಲಿ ದೇವರಿಗೆ ತಲೆ ಕತ್ತರಿಸಿಕೊಟ್ಟ ೬೦ ಜನ ಶೂರರಿದ್ದಾರೆ. ಅಂದರೆ ಇವರು ದೇವರಿಗಾಗಿ ಪ್ರಾಣಕೊಡಲು ಸಿದ್ಧರು. ಧರ್ಮಪಿತ ಬಸವಣ್ಣನವರ ವಚನದಲ್ಲಿ ವೀರವ್ರತಿ ಎಂಬ ಪದ ಬರುತ್ತದೆ. ಪುರದ ನಾಗಣ್ಣನ ವಚನದಲ್ಲಿ ಲಿಂಗವು ಕಳೆದುಹೋದಮೇಲೆ ಜೀವ ಇಟ್ಟುಕೊಂಡಿರುವವರು ಜೀವಗಳ್ಳ ಹೇಡಿ ಎಂಬ ಭಾವ ಬರುತ್ತದೆ. ಲಿಂಗವು ಕಳೆದುಹೋದರೆ, ಜಾರಿಬಿದ್ದರೆ ಆಗ ತಲೆಯನ್ನೇ ಕತ್ತರಿಸಿಕೊಳ್ಳುವ ನಿಷ್ಠಾವಂತ ವೀರಶೈವ ಭಕ್ತರು ಇದ್ದರು. ಅಂಥ ಒಬ್ಬ ಭಕ್ತ ಬಳಿಯಪ್ಪ.

ಇಂಥ ಕ್ರೂರ ಆಚರಣೆಯನ್ನು ಚನ್ನಬಸವಣ್ಣನವರು ಖಂಡಿಸಿರುವುದನ್ನು ಕಾಣಬಹುದು. (ಇಷ್ಟ)ಲಿಂಗವು ಜಾರಿಬಿದ್ದರೇನು, ಕಳೆದುಹೋದರೇನು ಪುನಃ (ಬೇರೊಂದು)ಗುರುವಿನಿಂದ (ಬೇರೊಂದು) ಲಿಂಗವನ್ನು ಪಡೆಯಲು ಬರುವುದಿಲ್ಲವೆ? ಜೀವದಿಂದ ಇದ್ದು ಸಾಧಿಸುವುದು ಮುಖ್ಯವಲ್ಲವೇ? ಎನ್ನುವರು.

ಶಿವಾಜಿ ಮಹಾರಾಜರು ಸಹ ಶ್ರೀಶೈಲದಲ್ಲಿ ತಮ್ಮ ಮನೆತನದ ಸಂಪ್ರದಾಯದಂತೆ ತಲೆಯನ್ನು ಕೊಡಲು ಬಯಸಿದ್ದರು. ಆದರೆ ಭವಾನಿ(ಭ್ರಮರಾಂಬ) ದರ್ಶನ ಕೊಟ್ಟು "ನೀನು ಮಾಡಬೇಕಾದ ಕೆಲಸವು ಬಹಳಷ್ಟಿದೆ ಎಂದು, ಎಚ್ಚರಿಸಿ, ಖಡ್ಗವನ್ನು ದಯಪಾಲಿಸಿದಳಂತೆ" ಎಂದು ಡಾ. ಸೂರಜ್ ಕಾಟಕರ್ ಬರೆದಿದ್ದಾರೆ.

ಲಿಂಗಾಯತ ಧರ್ಮವು ಅತ್ಯಂತ ವೇಗವಾಗಿ ಬೆಳೆಯುತ್ತಿದ್ದ ಸಮಯ ಬಳ್ಳಿಯಪ್ಪನ ಕಾಲ(ಕ್ರಿ.ಶ. ೧೨೫೦) ಉತ್ತರ ಕರ್ನಾಟಕದ ಮೂಲೆ ಮೂಲೆಗೂ ಅದು ಹಬ್ಬಿತ್ತು. ಆದ್ದರಿಂದ ಬಳ್ಳಿಯಪ್ಪನ ಮನೆತನದವರು ಈ ಧರ್ಮವನ್ನು ಸ್ವೀಕರಿಸುವ ಸಾಧ್ಯತೆ ಇದೆ.

ಶಿಖರ ಶಿಂಗಾಣಾಪುರದಲ್ಲಿ ತನ್ನ ಮನೆದೇವರಾದ ಶ್ರೀಶೈಲ ಮಲ್ಲಿಕಾರ್ಜುನನ ಪ್ರತಿರೂಪವಾದ ಶಂಭು ಮಹಾದೇವನ ಗುಡಿಯನ್ನು ಬಳಿಯಪ್ಪ ಕಟ್ಟಿಸಿದನಲ್ಲವೆ? ಆ ದೇವಾಲಯ ಇಂದು ಲಿಂಗಾಯತ ಧರ್ಮೀಯರ ಶ್ರದ್ಧಾಕೇಂದ್ರ. ಅಲ್ಲಿರುವ ಪೂಜಾರಿಗಳು ಬಳಿಯಪ್ಪನ ಕಾಲದಿಂದಲೂ ಲಿಂಗಾಯತ(ಜಂಗಮ)ರು. ಶಸ್ತ್ರಾಭ್ಯಾಸದ ಗುರು ದಾದಾಜಿ ಕೊಂಡದೇವ, ಅಧ್ಯಾತ್ಮಿಕ ಗುರು ಸಮರ್ಥ ರಾಮದಾಸರಾದರೆ ಶಿವಾಜಿ ಮಹಾರಾಜರ ಧಾರ್ಮಿಕ ಸಂಪ್ರದಾಯದ ಗುರು ಜಯಶಾಂತಲಿಂಗ ಸ್ವಾಮಿಗಳು, ಇವರು ಲಿಂಗಾಯತ ವಿರಕ್ತ ಸಂಪ್ರದಾಯದವರಾಗಿದ್ದರು. ಸಾಮನ್ಯವಾಗಿ ಕ್ಷತ್ರಿಯ ಬ್ರಾಹ್ಮಣ ಪುರೋಹಿತರ ಮೇಲೆ ಅವಲಂಬಿತರು. ಇಂದಿಗೂ ಶಿವಾಜಿ ಮಹಾರಾಜರ ಮನೆತನದ ಅನೇಕರ ಮನೆಗಳಲ್ಲಿ ಪೂಜಾದಿ ಕಾರ್ಯ ನೆರವೇರಿಸುವವರು ಲಿಂಗಾಯತರೆ.

ಶಿವಾಜಿ ಮಹಾರಾಜರ ಸುಪುತ್ರ ರಾಜಾರಾಮ ಅವರ ಮೇಲೆ ಔರಂಗಜೇಬನ ಕೆಂಗಣ್ಣು

ಬಿದ್ದು, ಆತನ ಬಂಧನ ಮತ್ತು ಜೀವ ಹರಣಕ್ಕೆ ಔರಂಗಜೇಬ ಪ್ರಯತ್ನಿಸಿದಾಗ ರಾಜಾರಾಮರು ಕೆಳದಿ ಚನ್ನಮ್ಮಾಜಿಯ ರಾಜಕೀಯ ಆಶ್ರಯ ಕೋರುತ್ತಾರೆ. ಆಗ ಮಂತ್ರಿ ಮಹೋದಯರು ಬೇಡವೆಂದು ಸಲಹೆ ನೀಡುತ್ತಾರೆ. ಒಂದನೆಯ ಕಾರಣ ಶಿವಾಜಿ ಮಹಾರಾಜರ ಸೈನಿಕರು ಕೆಳದಿ ಅರಸರ ಆಡಳಿತದಲ್ಲಿದ್ದ ಕಾರವಾರ, ಸದಾಶಿವಗಡ ಮುಂತಾದ ಊರುಗಳ ಹಳ್ಳಿಗಳಲ್ಲಿ ದೌರ್ಜನ್ಯವೆಸಗಿ, ಲೂಟಿ ಮಾಡಿದ್ದು ಮತ್ತು ಎರಡನೆಯದಾಗಿ ಔರಂಗಜೇಬನಂತಹ ಶಕ್ತಿಶಾಲಿ ದೊರೆಯನ್ನು ಎದುರು ಹಾಕಿ ಕೊಳ್ಳುವುದು ಬೇಡ ಎಂಬುದು.

ರಾಜಕಾರಣ ಮುತ್ಸದ್ದಿಯೂ ಮತ್ತು ಧರ್ಮಭೀರುವೂ ಆದ ಕೆಳದಿ ಚನ್ನಮ್ಮ ಆಶ್ರಯಕ್ಕೆ ಬಂದವರಿಗೆ ಆಶ್ರಯ ನೀಡುವುದು ರಾಜಧರ್ಮ ಎನ್ನುತ್ತಾಳೆ. ಮಾತ್ರವಲ್ಲಿ ಸ್ವದೇಶಿಯರು ಒಬ್ಬರಿಗೊಬ್ಬರು ನೆರವಾಗದಿದ್ದರೆ ಹೇಗೆ? ಎಂದು ಆಶ್ರಯ ಕೊಟ್ಟು, ಸನ್ಯಾಸಿಯ ಮಾರುವೇಷದಲ್ಲಿ ಆತನನ್ನು ತಮಿಳುನಾಡಿನ ತಮ್ಮ ಬಂಧುವೊಬ್ಬರ ಮನೆಯಲ್ಲಿ ಇರಿಸುವಳು. ಚನ್ನಮ್ಮಾಜಿ ರಾಜಾರಾಮರಿಗೆ ಆಶ್ರಯಕೊಟ್ಟ ಸಂಗತಿ ತಿಳಿದು ಔರಂಗಜೇಬ ಸೈನ್ಯವನ್ನು ಕಳಿಸಿದಾಗ, ಭುವನಗಿರಿ ದುರ್ಗದ ಬಳಿ ಆ ಸೈನ್ಯವನ್ನು ಸೆದೆಬಡೆದು ಅದಕ್ಕೆ ಸೋಲಿನ ರುಚಿ ತೋರಿಸುವಳು. ನಂತರ ರಾಜರಾಮರಿಗೆ ಪಟ್ಟಾಭಿಷೇಕ ಮಾಡಿಸುವಳು. ಇದಕ್ಕೆ ಸಾಕ್ಷಿಯಾಗಿ ಕೆಳದಿಯಲ್ಲಿ ವಿಜಯ ಸ್ತಂಭವನ್ನು ನಿಲ್ಲಿಸಲಾಗಿದೆ. ಅದರಲ್ಲಿ ಚನ್ನಮ್ಮಾಜಿ ಆಕೆಯ ಅಕ್ಕ ಪಕ್ಕ ರಾಜಾರಾಮ, ಓರ್ವ ಮಹಿಳೆಯ ಶಿಲ್ಪಗಳಿವೆ.ರಾಜಾರಾಮರು ಸಾಕಷ್ಟು ಜನ ರಾಜಮಹಾರಾಜರು ಇದ್ದರೂ ಅವರ ಬಳಿ ಹೋಗದೆ, ಆಶ್ರಯಕೋರಿ ಚನ್ನಮ್ಮಾಜಿ ಬಳಿಗೆ ಬರಲು ತಮ್ಮ ಧರ್ಮದ ಮಹಾರಾಣಿ ಎಂಬುದೂ ಕಾರಣವಿರಲು ಸಾಧ್ಯ ಎಂದು ಡಾ. ಸರೂಜ್ ಕಾಟಕರ್ ಸಾಕಷ್ಟು ವಿಷಯ ಪ್ರಸ್ತಾಪಿಸುತ್ತಾರೆ. ಗವಳಿ, ಕುರುಬ ಮತ್ತು ಗುರವ ಜನಾಂಗಗಳಿಗೆ ಪೂಜಾ ಕಾರ್ಯಕ್ರಮಗಳಿಗೆ ಸಾಕಷ್ಟು ದಾನ, ಉಂಬಳಿ, ಪೂಜಾ ಹಕ್ಕುಗಳನ್ನು ಬಳಿಯಪ್ಪ ಮತ್ತು ಆತನ ನಂತರದವರು ಕೊಟ್ಟದ್ದಾಗಿ ಬರೆಯುತ್ತಾರೆ. ಲಿಂಗಾಯತರಲ್ಲಿ ಮಾಳಿ ಲಿಂಗಾಯತ, ಗೌಳಿ ಲಿಂಗಾಯತರು ಬಹಳ ಪ್ರಭಾವ ಶಾಲಿಗಳಾಗಿದ್ದಾರೆ. ಅಲ್ಲಮಪ್ರಭು ಗಿರಿ (ಡೊಂಗರ್) ಮತ್ತು ಸಿದ್ದೋಬಾ(ಸಿದ್ಧರಾಮ ಗಿರಿ) ಡೋಂಗರ ಮತ್ತು ಸನಿಹದಲ್ಲಿರುವ ಧೂಳೋಬಾ ಗುಡಿಯ ಪೂಜೆ ಲಿಂಗಾಯತ ಗುರವ ಜನರು ಮಾಡುತ್ತಾರೆ.

ಅಲ್ಲಮಪ್ರಭು ಡೋಂಗರದ ಪೂಜಾರಿಗಳ ವಂಶಾವಳಿಯಲ್ಲಿ ಬಹಳ ಹಿಂದೆ ಒಂದು ತಲೆಮಾರಿನವರು ಮುಸ್ಲೀಮರಾಗಿ, ನಂತರ ಪುನಃ ಲಿಂಗಾಯತ ಸಂಸ್ಕೃತಿಗೆ ಬಂದು, ಮುಂದೆ ಇದೇ ಪರಂಪರೆಯಲ್ಲಿ ಸಾಗಿರುವುದನ್ನು ಕಾಣಬಹುದು. ಶಿವಾಜಿ ಮಹಾರಾಜರು ಮುಸ್ಲೀಮ್ ಆಡಳಿತಕ್ಕೆ ಹೋಗಿದ್ದ ರಾಜ್ಯಗಳನ್ನು ಪಡೆದುದಲ್ಲದೇ ಸಾಕಷ್ಟು ಜನರನ್ನು ಮಾತ್ರ ಧರ್ಮಕ್ಕೆ ಕರೆತರುವ ಪ್ರಯತ್ನ ಸಹ ಮಾಡಿರಬಹುದು. ಅಲ್ಲಮಪ್ರಭು ಡೋಂಗರಿಗೆ ಶಾಹು ಮಹಾರಾಜರು ಹೆದ್ದಾರಿಯಿಂದ ನೇರವಾಗಿ ಒಂದು ರಸ್ತೆಯನ್ನೇ ಮಾಡಿಸಿರುವುದು, ನಿರ್ಜನ ಪ್ರದೇಶದ ಆ ಗುಡ್ಡದಲ್ಲಿ ಸಿದ್ದೋಬಾ ಡೋಂಗರದ ಮೇಲಿರುವ ಸಿದ್ಧರಾಮ ದೇವಾಲಯ, ಅಲ್ಲಮಪ್ರಭು ದೇವಾಲಯ ಇನ್ನಷ್ಟು ಸತ್ಯಗಳನ್ನು ಹೊರಚೆಲ್ಲಲಿರುವುವೊ? ಸಿದ್ಧರಾಮೇಶ್ವರ,ಅಲ್ಲಮಪ್ರಭು, ಧೂಳೋಬ(ಧೂಳಪ್ಪ) ಇವರೆಲ್ಲರೂ ಬಸವ ಪರಂಪರೆಯ ಶರಣರು. ಬಹುಶಃ ಶಾಹು ಮಹಾರಾಜರ "ಮನೆದೇವರು" ಆಗಿರಬಹುದು.

ಬಳಿಯಪ್ಪನ ಕಾಲದಲ್ಲಿ, (ಕ್ರಿ.ಶ. ೧೨೫೦) ಲಿಂಗಾಯತರಾಗಿದ್ದವರು ಮಹಾರಾಷ್ಟ್ರಕ್ಕೆ ವಲಸೆ ಹೋದ ಮೇಲೆ ಈ ಧರ್ಮದ ಸಂಪರ್ಕ ಕಡಿದು ಹೋಗಿರಬಹುದೆ? ಶಿರಗಾಂವದ ಶಿವಮಂದಿರದಲ್ಲಿ ರಾಮ, ಲಕ್ಷ್ಮಣ, ಭರತ, ಶತ್ರುಘ್ನ ಮತ್ತು ಸೀತೆ ಈ ಐದೂ ಮೂರ್ತಿಗಳ

ಜೊತೆಗೆ ವೀರ ಭದ್ರನ ಮೂರ್ತಿಯೂ ಇದೆ. ಖೋಪಿ ಊರಲ್ಲಿಯೂ ಈ ಮೂರ್ತಿಗಳಿವೆ. ಭೋಸ್ಲೆ ಮನೆತನಕ್ಕೆ ಸೇರಿದ ಈ ಎಲ್ಲಾ ಮಂದಿರಗಳ ಪೂಜಾರಿಗಳು ವೀರಶೈವ ಜಂಗಮರಾಗಿದ್ದಾರೆ. ಭೋಸ್ಲೆ ಮನೆತನದ ಪುರೋಹಿತರು ಜಂಗಮರೇ ಆಗಿರುವುದು ವಿಶೇಷವಾಗಿದೆ. ಜಾತ್ರೆ ಅಥವಾ ಉತ್ಸವದ ಕಾಲದಲ್ಲಿ ಈ ಜಂಗಮ ಪೂಜಾರಿಯ ಮೈಯಲ್ಲಿ ವೀರಭದ್ರ ಆಹ್ವಾನಿತನಾಗುತ್ತಾನೆ. ಈ ಎಲ್ಲಾ ಸಂಗತಿಗಳು ಭೋಸ್ಲೆ ಮನೆತನಕ್ಕೂಲಿಂಗಾಯತ ಆಚಾರ ವಿಚಾರಗಳಿಗೂ ಸಂಬಂಧದ ಬಗ್ಗೆ ಹೇಳುತ್ತವೆ. ಭೋಸ್ಲೆ ಮನೆತನದ ವೀರಭದ್ರನ ಸಂಬಂಧ ಭೋಸ್ಲೆ ಮನೆತನದ ಯಾದವ ಕುಲ (ಗೊಲ್ಲ ಅಥವ ಗವಳಿ) ವನ್ನು ಸೂಚಿಸುತ್ತದೆ. ಗವಳಿ-ಕುರುಬ ಸಮಾಜವು ವೀರಶೈವ ಸಮಾಜಕ್ಕೆ ಪರಿವರ್ತಿತಗೊಂಡಾಗ ಅದು ಶೈವೀಕರಣ ಗೊಂಡಿತು. ದಕ್ಷಿಣ ಭಾರತದಲ್ಲಿರುವ ವೀರಭದ್ರನ ಅನೇಕ ಪೀಠಗಳು ಗವಳಿ-ಕುರುಬರ ಆರಾಧ್ಯ ದೈವವಾಗಿರುವ ಬಿರೋಬಾ ಅಥವ ಬೀರಪ್ಪನ ಕೇಂದ್ರಗಳೇ ಆಗಿವೆ. ಖೋಪಿ ಶಿರಗಾಂವದ ಭೋಸ್ಲೆಗಳ ಧರ್ಮಗುರುಗಳು ವೀರಶೈವ ಲಿಂಗಾಯತ ಸಮಾಜದಿಂದಲೇ ಬಂದಿದ್ದಾರೆ. ಸಾತಾರ ಜಿಲ್ಲೆಯ ಕೋರೆಗಾಂವ ಸಮೀಪದ ವೀರಶೈವ ಪಿಂಪರಿ ಮಠದ ಜಂಗಮ ಸ್ವಾಮಿಗಳು ಅವರ ಧರ್ಮಗುರುಗಳಾಗಿದ್ದಾರೆ. "ಸಾತಗಾಂವ ಭೋಸ್ಲೆ"ಗಳು ದಕ್ಷಿಣದ ಒಂದು ಭಾಗದಿಂದ ಸ್ಥಳಾಂತರಿಸಲ್ಪಟ್ಟ ವೀರಶೈವ ಲಿಂಗಾಯತ ಯಾದವ ಮನೆತನವಾಗಿರಬೇಕೆಂದು ಅವರ ಆಚಾರ ವಿಚಾರಗಳು ಮತ್ತು ಅವರು ಪೂಜಿಸುವ ದೇವರುಗಳಿಂದ ಸಿದ್ಧವಾಗುತ್ತದೆ.

ಬಳಿಯಪ್ಪನು ಬರಗಾಲದಲ್ಲಿ ನೀರು, ನೆಲ ಹುಡುಕಿಕೊಂಡು ಹೋಗುವಾಗ "ದೇವರನ್ನು ಸೋರಟೂರಿನಲ್ಲೇ ಬಿಟ್ಟುಹೋದನೆಂದು ಪುನಃ ಪುನಃ ಕನಸಿನಲ್ಲಿ ಕಾಣಿಸಿಕೊಂಡು ದೇವರು ನನ್ನನ್ನು ಕರೆಸಿಕೋ ಎಂದು ಒತ್ತಾಯಿಸಿದನೆಂದೂ" ಲೋಕ (ಜಾನಪದ) ಗೀತೆಗಳಲ್ಲಿ ಕೇಳಲಾಗುತ್ತಿದೆ ಎಂದೂ ಪುಸ್ತಕದಲ್ಲಿ ಉಲ್ಲೇಖಿಸಲಾಗಿದೆ. ದೇವರನ್ನೂ ಕಟ್ಟಿಕೊಳ್ಳುವ ಸಂಪ್ರದಾಯ ಲಿಂಗಾಯತ ಧರ್ಮದ ಜೀವಾಳ ಎಂಬುದು ಇಲ್ಲಿ ಗಮನಾರ್ಹ. ಧಾರ್ಮಿಕ ಆಚರಣೆಯಲ್ಲಿ ಶರಣ ಸಂಸ್ಕೃತಿ ಉಳಿಯಿತ್ತೊ ಇಲ್ಲವೋ ಆದರೆ ಭಕ್ತಿಯನ್ನು ಉತ್ಕಟವಾಗಿ ಬಳಿಯಪ್ಪನ ವಂಶಸ್ಥರು ಕಾಪಾಡಿಕೊಂಡು ಬಂದಿದ್ದಾರೆ.

ಮರಾಠರ ಕಿಳರಿಮೆಯ ಪರಿ

ಛಾವಾ ಮರಾಠಾ ಯುವ ಸಂಘಟನೆ ಬೀದರ್ ಜಿಲ್ಲಾ ಶಾಖೆಯ ಪದಾಧಿಕಾರಿಗಳು, ಬಸವ ಕಲ್ಯಾಣದ ಮಾಜಿ ಶಾಸಕ ಮೂಳೆಯವರ ನೇತೃತ್ವದಲ್ಲಿ ಕರ್ನಾಟಕ ಮರಾಠ ಪರಿಷತ್‌ನವರು ನೀಡಿರುವ ಪತ್ರಿಕಾ ಪ್ರಕಟಣೆ(ಪ್ರಜಾವಾಣಿ 23-10-2006)ರಲ್ಲಿ ಛತ್ರಪತಿ ಶಿವಾಜಿ ಮಹಾರಾಜರು ಗೌಳಿ ಲಿಂಗಾಯತ್ ಎಂಬ ಹೇಳಿಕೆಗೆ ಮಾತೆ ಮಹಾದೇವಿಯವರು ಕ್ಷಮೆ ಯಾಚಿಸಬೇಕೆಂದು, ತತ್ವದಲ್ಲಿ ನವೆಂಬರ್ 19ರಂದು ನಿಷೇಧ ಸಭೆ ನಡೆಸಲಾಗುವದೆಂದು ಆಗ್ರಹಿಸಲಾಗಿದೆ. ಸದರಿ ಆಗ್ರಹದ ಔಚಿತ್ಯತೆ ಏನು ? 'ಶಿಖರ ಶಿಂಗಾಣಾಪೂರ ಚಾ ಶಂಭು ಮಹಾದೇವ 'ಇದು ಮರಾಠಿಯ ಖ್ಯಾತ ಸಂಶೋಧಕ ಡಾ|| ಆರ್.ಸಿ. ಢೇರೆ ಅವರ ಸಂಶೋಧನಾತ್ಮಕ ಕೃತಿ , ಅದನ್ನು ಡಾ|| ಸರಜೂ ಕಾಟ್ಕರ್ ಕನ್ನಡಕ್ಕೆ ಅನುವಾದಿಸಿ "ಶಿವಾಜಿ ಮೂಲ ಕನ್ನಡ ನೆಲ " ಎನ್ನುವ ಕೃತಿ ಬಿಡುಗಡೆ ಮಾಡಿದ್ದಾರೆ. ವಿಜಯ ಕರ್ನಾಟಕ ದಿನ ಪತ್ರಿಕೆ ಭಾನುವಾರ 24-09-2006ರಂದು ಸಾಪ್ತಾಹಿಕ ವಿಜಯ ಪುಟ 6ರಲ್ಲಿ ಶಶಿಕಲಾ ವೀರಯ್ಯ ಸ್ವಾಮಿ ಅವರು "ಇವ ನಮ್ಮವ ಶಿವಾಜಿ ನಮ್ಮವ " ಎನ್ನುವ ಲೇಖನ ಬರೆದಿದ್ದಾರೆ. ಈ ಲೇಖನವು ಸಂಕ್ಷಿಪ್ತ ಪರಿಚಯ ಆಗಿದ್ದರೂ ಈ ಕೆಳಕಂಡ ಮಹತ್ವದ ಅಂಶಗಳನ್ನು ಗಮನಕ್ಕೆ ತರುತ್ತಿದೆ.

1. ಶಿವಾಜಿ ಮಹಾರಾಜರ ಕುಲದೈವ ತುಳಜಾಪೂರ ಭವಾನಿ ಅಲ್ಲ. ಶ್ರೀ ಶೈಲ ಚನ್ನ ಮಲ್ಲಿಕಾರ್ಜುನ. ಶ್ರೀಶೈಲದ ಗುಡಿಯಲ್ಲಿ ಶಿವಾಜಿ ಮಹಾರಾಜರು ಖಡ್ಗ ಸಮರ್ಪಿಸುವ ಶಿಲಾ ಚಿತ್ರವಿದೆ.

2. ಶಿವಾಜಿ ಮಹಾರಾಜರ ಸಮಕಾಲೀನ ಹಿಂದೂ ರಾಜರು ಅದರಲ್ಲೂ ರಜಪೂತ ಕ್ಷತ್ರಿಯ ರಾಜರು ಶಿವಾಜಿ ಮಹಾರಾಜರನ್ನು ನಿಕೃಷ್ಟವಾಗಿ ಕಾಣುತಿದ್ದರು. ಈ ಬಗ್ಗೆ ಅಸಂಖ್ಯಾತ ಕಾಗದ ಪತ್ರಗಳನ್ನು ಮಹಾರಾಷ್ಟ್ರ ಸರಕಾರ ಸಂರಕ್ಷಿಸಿ ಇಟ್ಟಿದೆ.

3. ಬಲಾಢ್ಯ ಮೊಗಲರ ಸೊಕ್ಕನ್ನು ಮುರಿದು ಮರಾಠಾ ಸಾಮ್ರಾಜ್ಯ ಸ್ಥಾಪಿಸಿದ ಶಿವಾಜಿ ಮಹಾರಾಜರಿಗೆ ಜಾತಿಯ ನೆಪವೊಡ್ಡಿ ಪಟ್ಟಾಭಿಷೇಕ ಮಾಡಲು ಸಂಪ್ರದಾಯ ವಾದಿಗಳು ಹಿಂಜರಿದರು.

4. ಡಾ|| ಢೇರೆಯವರ ಈ ಕೃತಿ ಮಹಾರಾಷ್ಟ್ರದ ಸಾಂಸ್ಕೃತಿಕ ,ಧಾರ್ಮಿಕ ವಲಯದಲ್ಲಿ ಸಂಚಲನವೇ ಉಂಟು ಮಾಡಿತು . ಕೆಲಡೆ ಪ್ರತಿಭಟನೆಗಳು ತಾನಾಗಿಯೇ ತಣ್ಣಗಾದವು .

5. ಮಹಾರಾಷ್ಟ್ರದ ಬುದ್ಧಿ ಜೀವಿಗಳು, ಜ್ಞಾನಿಗಳು, ಸಂಶೋಧಕರು ಮಾತ್ರವಲ್ಲ ದೆ ಮಹಾರಾಷ್ಟ್ರ ರಾಜ್ಯ ಸರ್ಕಾರವು ಈ ಅಭೂತ ಪೂರ್ವ ಸಂಶೋಧನೆಯನು ಒಪ್ಪಿಕೊಂಡಿದೆ. ಅದಕ್ಕಾಗಿ ಸಮಸ್ತ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳನ್ನು ಸಲ್ಲಿಸಲಾಗಿದೆ.

ಶಿವಾಜಿ ಜಯಂತಿಯನ್ನು ಬಸವ ಜಯಂತಿಯ ಮರುದಿನ ಆಚರಿಸುತ್ತಿದ್ದ ಮರಾಠಿಗರು, ಸಂಶೋಧನೆಯ ಫಲವಾಗಿ ಬದಲಾವಣೆ ಅಳವಡಿಸಿಕೊಂಡರು. ಶಿವಾಜಿಯವರ ಮೂಲ ಲಿಂಗಾಯತ ಅವರ ವಂಶಜರು ಕನ್ನಡಿಗರು ಎಂದ ಕೂಡಲೆ ಹತಾಶರಾಗುವ ಅವಶ್ಯಕತೆ ಖಂಡಿತಾ ಇಲ್ಲ. ಒಬ್ಬ ಧೀಮಂತ ಮಹಾರಾಜರ ಮೂಲ ಕರ್ನಾಟಕ, ಲಿಂಗಾಯತ್ ಎಂದರೆ ಹಾನಿ ಎಂದು ತಿಳಿಯುವ ಪ್ರಮೇಯವೇ ಇಲ್ಲ. ಏಕೆಂದರೆ ಶಿವಾಜಿ ಮಹಾರಾಜರ ಬಗೆ ಸಮಸ ಕನ್ನಡಿಗರಿಗೆ ಮಾತ್ರವಲ್ಲ. ಈ ನೆಲದ ಸಂಸ್ಕೃತಿಯನ್ನು ಗೌರವಿಸುವ ಪ್ರತಿಯೊಬ್ಬರಿಗೂ ಗೌರವ ಇದೆ. ಎನ್ನುವ ವಾಸ್ತವಿಕತೆ ಛಾವಾ ಸಂಘದವರು, ಮರಾಠಾ ಪರಿಷತ್ತಿನವರು ಹಾಗೂ ಸಮಸ್ತ ಮರಾಠಿಗರು ಮನಗಾಣಬೇಕಾಗಿದೆ.

ಛತ್ರಪತಿ ಶಿವಾಜಿ ಮಹಾರಾಜರ ಮೂಲ ಲಿಂಗಾಯತ, ಪೂರ್ವಜರು ಕನ್ನಡಿಗರು ಎನ್ನುವ ಸಂಶೋಧನಾತ್ಮಕ ಸತ್ಯವನ್ನು ನಂಬಿ ಹೆಮ್ಮೆ ಪಡುವುದು ಅಪರಾಧವೇ ?

ಇಷ್ಟೆಲ್ಲ ಅಂಶಗಳನ್ನು ಅರಿತ ಬಳಿಕವೂ ನಿಷೇಧ ಸಭೆಯನ್ನು ನಡೆಸುವ ಅನಿವಾರ್ಯತೆ ಇದ್ದರೆ, ಸಂಶೋಧಕ ಡಾ||ಆರ್.ಸಿ. ಢೇರೆ. ಅನುವಾದಕ ಡಾ|| ಸರಜೂ ಕಾಟ್ಕರ್, ಲೇಖನದ ಮುಖಾಂತರ ಸಮಸ್ತ ಕನ್ನಡಿಗರ ಗಮನಕ್ಕೆ ತಂದ ಶಶಿಕಲಾ ವೀರಯ್ಯ ಸ್ವಾಮಿ, ದಾಖಲೆಗಳನ್ನು ಸಂರಕ್ಷಿಸಿ ಇಟ್ಟಿರುವ ಮಹಾರಾಷ್ಟ್ರ ರಾಜ್ಯ ಸರ್ಕಾರ, ಶ್ರೀಶೈಲ ಚನ್ನಮಲ್ಲಿಕಾರ್ಜುನ ದೇವಾಲಯದಲ್ಲಿ ಶಿವಾಜಿ ಮಹಾರಾಜರು ಖಡ ಸಮರ್ಪಿಸುವ ಶಿಲಾ ಚಿತ್ರ. ಹಾಗೂ ಸಂಶೋಧನೆಗೆ ಸಹಾಯ ಮಾಡಿದ ಎಲ್ಲರಿಗೂ ನಿಷೇಧ ಹೇರಿ ಪ್ರತಿಭಟನೆ ನಡೆಸಬೇಕಾಗುವುದು ಎಂಬುದನ್ನು ಮರಾಠಿಗರು ಗಮನಿಸಬೇಕು.

ನಾಗಶೆಟ್ಟಿ ಶೆಟಕಾರ,ಬೀದರ್

ಧರ್ಮಪಿತರ ಕರೆಯೋಲೆ

ಮಮತೆಯ ಮಕ್ಕಳೆ,

ಸೃಷ್ಟಿಕರ್ತ ಲಿಂಗದೇವನ ಸ್ಮರಣೆಯೊಡನೆ ನಿಮಗೆಲ್ಲ ಶುಭಹಾರೈಕೆಗಳು. ನೀವುಗಳೆಲ್ಲ ನನ್ನ ಮಹಾಮನೆಯ ಮಕ್ಕಳು ಲಿಂಗದೇವನ ಪ್ರೇರಣೆಯಂತೆ ನಾನು ಮರ್ತ್ಯದಲ್ಲಿ ಒಂದು ಮಹಾಮನೆಯನ್ನು ಕಟ್ಟಿದೆ. ಇದು ಕೇವಲ ಕಲ್ಲು-ಮಣ್ಣು-ಇಟ್ಟಿಗೆ- ಕಟ್ಟಿಗೆಗಳ ಭೌತಿಕ ಮನೆಯಲ್ಲ; ಒಂದು ತತ್ವ ಸಂಹಿತೆಯನ್ನು ಒಳಗೊಂಡ ಧರ್ಮದ ಮಹಾಮನೆ. ಈ ಮಹಾಮನೆಯನ್ನು ನಾನು ಇದ್ದ ಕಾಲದಲ್ಲಿಯೇ ನೀವು ಪ್ರವೇಶಿರಬಹುದು, ನಂತರದ ಶತಮಾನದಲ್ಲಿ ಪ್ರವೇಶಿರಬಹುದು, ಇಂದೇ ನಂಬಿಕೆಯ ಮೂಲಕ, ದೀಕ್ಷೆ ಯ ಮೂಲಕ ಬಂದಿರಬಹುದು.ಎಂದೇ ಬಂದಿರಲಿ ನೀವು ನನ್ನವರು. ನನ್ನವರೆಲ್ಲರೂ ಜಾತಿ ಮತ ಪಂಥ ವೃತ್ತಿ ವರ್ಗ ಅಂತಸ್ತು ಭೇದವಿಲ್ಲದೆ ಒಂದು ಕಡೆ ಸೇರಬೇಕೆಂಬುದೇ ನನ್ನಿಚ್ಛೆ.

ನಿಮಗೆ ಲೌಕಿಕವಾಗಿ ಸೇರುವುದು ಗೊತ್ತು. ಹೆಣ್ಣು ಮಕ್ಕಳಿಗೆ ತೌರು ಮನೆಯಲ್ಲಿ ಆಗಾಗ ಸೇರುವುದು ಗೊತ್ತು. ತಾಯಿ-ತಂದೆ, ಅಕ್ಕ- ತಂಗಿ, ಅಣ್ಣ- ತಮ್ಮಂದಿರೊಡನೆ ನಲಿದಾಡಲು ಅದೆಂತಹ ಕಾತುರದಿಂದ ಕಾಯುವರು ಎಂಬುದು ನಿಮಗೆಲ್ಲ ಗೊತ್ತು. ಆದರೆ ಭಕ್ತಿ ಸಂಬಂಧದಿಂದ ಒಂದು ಕಡೆ ಸೇರಬೇಕು; ಈ ಸಂಬಂಧ ರಕ್ತ ಸಂಬಂಧಕ್ಕಿಂತಲೂ ಶ್ರೇಷ್ಠ ಎಂಬುದನ್ನ ಇನ್ನೂ ನೀವು ಬಹಳ ಜನ ಅರಿತಿಲ್ಲ; ಈಗಲಾದರೂ ಅರಿಯಬೇಕು.

ತಮ್ಮ ಮಕ್ಕಳು ತೌರಿಗೆ ಬರಬೇಕು; ಪ್ರೀತಿಪೂರ್ವಕವಾಗಿ ಸೋದರ-ಸೋದರಿಯರೊಡನೆ ಬೆರೆಯಬೇಕು; ತಮ್ಮನ್ನು ಗೌರವಿಸಬೇಕು; ತಂದೆ ತಾಯಿಯರ ವಾತ್ಸಲ್ಯದಲ್ಲಿ ಮೀಯಬೇಕು ಎಂದು ಯಾವ ತಂದೆ ತಾಯಿ ಬಯಸರು? ಸೃಷ್ಟಿಕರ್ತನೆಂಬ ತಂದೆಯ, ಮಾತೃಹೃದಯಿಯಾದ ನನ್ನ ಇಚ್ಛೆಯೂ ಅದೇ ಆಗಿದೆ. ಇದನ್ನು ನೀವೇಕೆ ಅರ್ಥ ಮಾಡಿಕೊಳ್ಳುತ್ತಿಲ್ಲ? ಇಷ್ಟು ದಿನ ನಿಮಗೆಲ್ಲ ಅಂಥ ಅವಕಾಶವಿರಲಿಲ್ಲ. ಇದೀಗ ನನ್ನ ಐಕ್ಯಕ್ಷೇತ್ರ ಕೂಡಲ ಸಂಗಮದಲ್ಲಿ ನಡೆಯುವ ಶರಣ ಮೇಳ ಅಂಥ ಅವಕಾಶ ಕಲ್ಪಿಸಿದೆ. ಸಮಾನತೆ -ಸೋದರತ್ವ- ಸ್ವಾತಂತ್ರ್ಯ ಇವು ನನ್ನ ತತ್ವದ ಮುಖ್ಯ ಮೂರು ಸೂತ್ರಗಳು. ಇಲ್ಲಿ ಅವು ಮೂರನ್ನು ಕಾಣ ಬಹುದು. ಅದಕ್ಕಾಗಿ ನಾನು ನಿಮಗೆ ಹಾರ್ದಿಕ ಆಹ್ವಾನ ನೀಡುತ್ತಿದ್ದೇನೆ. ನೀವೆಲ್ಲರೂ ಬನ್ನಿರಿ, ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬನ್ನಿರಿ.

ಸೃಷ್ಟಿಕರ್ತ ಪರಮಾತ್ಮನೇ ನಮ್ಮೆಲ್ಲರ ತಂದೆ, ಒಂದೊಂದು ಕಾಲದಲ್ಲಿ ಒಬ್ಬೊಬ್ಬರನ್ನು ಲೋಕದ ಉದ್ಧಾರಕ್ಕಾಗಿ, ಜನರನ್ನು ಧರ್ಮ ಮಾರ್ಗಕ್ಕೆ ಕರೆತರಲು ಮಧ್ಯವರ್ತಿಗಳನ್ನಾಗಿ ಆಯ್ಕೆ ಮಾಡಿಕೊಂಡ. ಬುದ್ಧ, ಮೊಹಮ್ಮದ್, ಏಸು, ನಾನು ಎಲ್ಲಾ ಅಣ್ಣ ತಮ್ಮಂದಿರಂತೆ. ದೇವರೆಂಬ ತಂದೆಯ ಅವಿಭಾಜ್ಯ ಕಿರಣಗಳು. ದೇವರು ಪರಿಪೂರ್ಣನು, ನಿತ್ಯನು. ಅವನು ಸೀಮಿತರಾದ ತಾಯಿ ತಂದೆಗಳ ಹೊಟ್ಟೆಯಲ್ಲಿ ಹುಟ್ಟಿ ಬರುವುದಿಲ್ಲ ಮತ್ತು ಕರ್ತನು ಎಲ್ಲಿಯೋ ಒಂದು ಕಡೆ ಯಾವುದೋ ಲೋಕದಲ್ಲಿ ಸೀಮಿತನಾಗಿ ಇರುವುದಿಲ್ಲ. ಸೃಷ್ಟಿ- ಸ್ಥಿತಿ-ಲಯ-ತಿರೋದಾನ ಎಂಬ ನಾಲ್ಕು ಕಾರ್ಯಗಳನ್ನು ತಾನು ಮಾಡಿ, ತಾನು ನೇರವಾಗಿ ಕೆಲವು ವ್ಯಕ್ತಿಗಳನ್ನು ಆಯ್ಕೆ ಮಾಡಿಕೊಂಡು, ಅವರಲ್ಲಿ ತನ್ನ ಅದ್ಭುತವಾದ ಕಾರುಣ್ಯ ಅವತೀರ್ಣಗೊಳಿಸಿ, ಸಾಮರ್ಥ್ಯವನ್ನು ನೀಡಿ, ಲೋಕದ ಜನತೆಯನ್ನು ಅನುಗ್ರಹಿಸಿ ಮುನ್ನಡೆಸಲು ಅವಕಾಶ ನೀಡುವನು. ಸೃಷ್ಟಿಕರ್ತನ ಉದ್ದೇಶ ಲೋಕದ ಮಾನವರು ಲೋಕದ ತಂದೆಯಾದ ದೇವನನ್ನು ಅರಿಯಬೇಕು. ಅವನ ಪ್ರೀತಿಯ ಕಾರುಣ್ಯ ಜಲದಲ್ಲಿ ಮೀಯಬೇಕು ಎಂಬುದೇ ಆಗಿದೆ. ಹೀಗಾಗಿ ಎಲ್ಲಾ ಧರ್ಮಗಳ ಏಕಮೇವ ಧ್ಯೇಯವು ಸೃಷ್ಟಿಕರ್ತನೆ ಆಗಿದ್ದಾನೆ

ಈ ಸತ್ಯವನ್ನು ಗ್ರಹಿಸುವಲ್ಲಿ ಸೀಮಿತ ಬುದ್ಧಿಯ ಮಾನವರು ಹಲವಾರು ತಪ್ಪುಗಳನ್ನು ಎಸಗಿ ಮೂಢನಂಬಿಕೆ, ಬಹುದೇವೋಪಾಸನೆ ಮುಂತಾದವನ್ನು ರೂಢಿಸಿಕೊಂಡಿದ್ದರೆ ಸಮಾಜವನ್ನು ಒಡೆದು ಆಳಬೇಕೆಂಬ ಸ್ವಾರ್ಥ ಬುದ್ಧಿಯ ಜನರು ಅತ್ಯಂತ ವಿಷಮ ರೀತಿಯ ವರ್ಗೀಕರಣವಾದ ವರ್ಣವ್ಯವಸ್ಥೆ, ಜಾತಿ ಪದ್ಧತಿಯನ್ನು ಹುಟ್ಟುಹಾಕಿ ಪೋಷಿಸುತ್ತ ಬಂದು ಅನೇಕ ಅನಿಷ್ಟ ಪರಿಣಾಮಗಳಿಗೆ ಕಾರಣರಾದರು. ಶೋಷಣೆಯು ಅಗಾಧವಾಗಿ ಸೃಷ್ಟಿಯ ಅರ್ಧ ಅಂಗವಾದ ಮಹಿಳೆಯರನ್ನು

ಒಳಗೊಂಡ ಬಹಳ ಜನ ದೇವರು - ಧರ್ಮ - ಸಂಸ್ಕಾರ ಹಕ್ಕು; ಇವುಗಳಿಂದ ವಂಚಿತರಾದರು.

ಮಮತೆಯ ಮಕ್ಕಳೆ, ತಾನೇ ಸೃಷ್ಟಿಸಿದ ಈ ಜಗತ್ತು, ಮಾನವ ಸಮಾಜ ದಾರಿ ತಪ್ಪುತ್ತ ಹೊರಟು ಮಾನವ ಸಮಾಜವನ್ನು ಅಂದಗೆಡಿಸಿದ್ದನ್ನು ಕಂಡು ನೊಂದ ಕರ್ತನು, ನನ್ನಲ್ಲಿ ಅನುಗ್ರಹ ಇಳಿಸಿ, ಸಮಾಜ ಸುಧಾರಣೆಗೆ ನನ್ನನ್ನು ಆಯ್ಕೆ ಮಾಡಿಕೊಂಡನು.

ಕರ್ತನಟ್ಟಿದಡೆ ಮರ್ತ್ಯದಲ್ಲಿ ಮಹಾಮನೆಯ ಕಟ್ಟಿದೆ
ಸತ್ಯ ಶರಣರಿಗೆ ತೊತ್ತು ಭೃತ್ಯನಾಗಿ ಸವೆದು ಬದುಕಿದೆನು
ಕರ್ತನ ಬೆಸನು ಮತ್ತೆ ಬರಲೆಂದಟ್ಟಿದಡೆ
ಲಿಂಗದೇವರ ನಿರೂಪಕ್ಕೆ ಮಹಾಪ್ರಸಾದವೆಂದೆನು

ದೇವನ ಆಜ್ಞೆಯಂತೆ ನನ್ನ ಬದುಕು ನಡೆಯಿತು. ನಾನು ಆರಂಭಿಸಿದ ಸತ್ಯ ಸ್ಥಾಪನೆಯ ಕಾರ್ಯವನ್ನು ಅಸಂಖ್ಯಾತ ಶರಣರು ಮುಂದುವರಿಸಿದರು. ತಮ್ಮ ಪ್ರಾಣತೆತ್ತು ವಚನ ಸಾಹಿತ್ಯವನ್ನು ರಕ್ಷಿಸಿ, ನಿಮಗೆ ಅಮೂಲ್ಯ ಜ್ಞಾನ ಭಂಡಾರವನ್ನು ಕೊಟ್ಟಿದ್ದಾರೆ. ಮಾನವ ಸಮಾಜ ವರ್ಣ-ಜಾತಿ, ವರ್ಗ ಅಂತಸ್ತು, ಮತ -ಪಂಥ, ಬಣ್ಣ -ಲಿಂಗ ಭೇದಗಳಿಂದ ಅಸಮಾನತೆಯನ್ನು ಸೃಷ್ಟಿಸಿರುವುದನ್ನು ಕಂಡು ಇವೆಲ್ಲವುಗಳಿಂದ ಹೊರತಾದ "ಗಣ ಧರ್ಮ"ವನ್ನು ನಾನು ಕೊಟ್ಟಿದ್ದೇನೆ. ಇಂದು ನೀವು ಕೆಲವರು ಹುಟ್ಟಿನಿಂದಲೇ ಲಿಂಗಾಯತರಾಗಿರಬಹುದು. ನಿಮ್ಮ ತಾಯಿ ತಂದೆ ಲಿಂಗಾಯತರಾದ ಕಾರಣ. ಆದರೆ ಇದು ನನ್ನ ಆಶಯವಲ್ಲ. ಏಕೆಂದರೆ ಹುಟ್ಟಿನಿಂದ ಬರುವುದು ಜಾತಿ, ಸಂಸ್ಕಾರದಿಂದ ಬರುವುದು ಧರ್ಮ, ನೀವು ಸಂಸ್ಕಾರವನ್ನು ಹೊಂದಿ ಧರ್ಮಾಚರಣೆಯಿಂದ ಲಿಂಗಾಯತರಾಗಬೇಕೇ ಹೊರತು, ಯಾವ ಸಂಸ್ಕಾರವನ್ನೂ ಹೊಂದದೆ ಜಾತಿಯಿಂದ ಲಿಂಗಾಯತರು ಎಂದು ಹೇಳಿಕೊಳ್ಳುವುದು ನನಗೆ ಸಮ್ಮತವಾಗದ ವಿಷಯ. ನನ್ನ ತತ್ವ ಸಂಹಿತೆ ಯಾವುದೇ ಒಂದು ಜಾತಿ ವರ್ಣಕ್ಕೆ ಸೀಮಿತವಾಗದ 'ಗಣಧರ್ಮ'ವಾದ್ದರಿಂದ ಈ ಮಾರ್ಗವನ್ನು ಯಾರು ಬೇಕಾದರೂ ಸ್ವೀಕರಿಸಬಹುದು. ಹಾಗೆ ಸ್ವೀಕರಿಸಿದವರನ್ನು ಪ್ರೀತಿಯಿಂದ ನೀವು ಸ್ವಾಗತಿಸಿ ಬರಮಾಡಿಕೊಂಡು, ಸಮರಸ ಮಾಡಿಕೊಳ್ಳಬೇಕು. ಇಂಥ ಸಾಮರಸ್ಯ ಮೂಡಬೇಕಾದರೆ ನೀವು ಆಗಾಗ ಒಂದೆಡೆ ಸೇರಬೇಕು.

ಕಾಗೆಯೊಂದಗುಳ ಕಂಡಡೆ
ಕರೆಯದೆ ತನ್ನ ಬಳಗವೆಲ್ಲವ ?
ಕೋಳಿ ಒಂದು ಕುಟುಕ ಕಂಡಡೆ
ಕೂಗಿ ಕರೆಯದೆ ತನ್ನ ಕುಲವನೆಲ್ಲವ ?
ಶಿವಭಕನಾಗಿ ಭಕಿ ಪಕ್ಷವಿಲ್ಲದಿದ್ದರೆ
ಆ ಕಾಗೆ ಕೋಳಿಯಿಂದ ಕರಕಷ್ಟ ಲಿಂಗದೇವಾ.

ಸೃಷ್ಟಿಕರ್ತನನ್ನು ಇಷ್ಟಲಿಂಗ ರೂಪದಲ್ಲಿ ನಿತ್ಯವೂ ಆರಾಧಿಸಿರಿ. ಇದು ವೈಯಕ್ತಿಕ ಆತ್ಮೋದ್ಧಾರಕ್ಕಾಗಿ. ಸಂಸ್ಕಾರ ಮತ್ತು ಸಂಘಟನೆಗಾಗಿ ಸಮುದಾಯ ಜೀವನದ ಸೂತ್ರಗಳಾಗಿ ಸಾಮೂಹಿಕ ಪ್ರಾರ್ಥನೆಯನ್ನು ಅಳವಡಿಸಿಕೊಳ್ಳಿರಿ.

ಕೌಟುಂಬಿಕ ಪ್ರಾರ್ಥನೆ: ಪ್ರತಿಯೊಬ್ಬ ವ್ಯಕ್ತಿಯ ಆತ್ಮೀಯ ವಲಯವೆಂದರೆ ಕುಟುಂಬ. ಕುಟುಂಬದವರೆಲ್ಲ ಕುಳಿತು ವಾರಕ್ಕೊಮ್ಮೆಯಾದರೂ ಸಾಮೂಹಿಕ ಇಷ್ಟಲಿಂಗಾರ್ಚನೆ ಮಾಡಿರಿ. ಈ ಮೂಲಕ ಕೌಟುಂಬಿಕ ಸೌಹಾರ್ದತೆ ಬೆಳೆವುದಲ್ಲದೆ ಎಲ್ಲರಲ್ಲೂ ಧರ್ಮ ಶ್ರದ್ಧೆ ಗಾಢವಾಗುವುದು. ದಿನ ನಿತ್ಯ ಸಂಜೆಯ ವೇಳೆಯಲ್ಲಿ ಹತ್ತು ಹದಿನೈದು ನಿಮಿಷ ಕಾಲವಾದರೂ ಮನೆ ಮಂದಿಯೆಲ್ಲ ಕುಳಿತು ಸಂಜೆಯ ನೆನಹು ಪ್ರಾರ್ಥನೆ ಮಾಡಿರಿ.

ವಾರದ ಪ್ರಾರ್ಥನೆ: ಸಮುದಾಯ ಜೀವನದ ಶ್ರೇಷ್ಠ ಸೂತ್ರವೆಂದರೆ ಸಾಮೂಹಿಕ ಪ್ರಾರ್ಥನೆ. ವಾರಕ್ಕೊಮ್ಮೆ ಒಂದು ಸ್ಥಳದಲ್ಲಿ ಧರ್ಮಾನುಯಾಯಿಗಳು ಸೇರಿ ಸಾಮೂಹಿಕ ಪ್ರಾರ್ಥನೆ ಮಾಡಿ, ನಂತರ ವಚನಾನುಭವ ಗೋಷ್ಠಿ ಮಾಡಿರಿ. ಸೃಷ್ಟಿಕರ್ತನನ್ನು ಭಜಿಸಿ ಪ್ರಾರ್ಥಿಸಿ, ಸ್ತುತಿಸುವ ಮೂಲಕ ಅವನಿಗೆ ಕೃತಜ್ಞತೆ ಸಲ್ಲಿಸಿರಿ.

ನೆನೆಹು : ಪ್ರತಿದಿನ ಸಂಜೆ 7 ಗಂಟೆಗೆ ಸರಿಯಾಗಿ ನೀವು ಎಲ್ಲೇ ಇದ್ದರೂ ಆ ಸ್ಥಳದಲ್ಲಿ

5 ನಿಮಿಷದವರೆಗೆ ಪ್ರಾರ್ಥನೆಯನ್ನು ವೈಯಕ್ತಿಕವಾಗಿ ಆಗಲಿ, ಸಾಮೂಹಿಕವಾಗಿ ಆಗಲಿ ಅಳವಡಿಸಿಕೊಂಡು ತಪ್ಪದೇ ಮಾಡಿರಿ.

ಗಣ ಮೇಳ: ನನ್ನ ವಚನಗಳನ್ನು ಗಮನಿಸಿರಿ. ಗಣ ಮೇಳಾಪಕ್ಕೆ ಎಷ್ಟು ಒತ್ತು ಕೊಟ್ಟಿದ್ದೇನೆ ನೋಡಿರಿ. ಪಕ್ಷಿಗಳು ಸಮೂಹ ಜೀವನವನ್ನು ಇಷ್ಟಪಡುತ್ತವೆ. ಆನೆಗಳು ಬಲಿಷ್ಠ ಪ್ರಾಣಿಗಳು, ಆದರೂ ಗುಂಪು ಗೂಡಿಯೆ ಬದುಕಲು ಇಷ್ಟಪಡುತ್ತವೆ. ಸಮೂಹವನ್ನು ತೊರೆದು ವಿಕೃತ ಮನಸ್ಸಾಗುವನು. ಆಯಾ ಊರುಗಳಲ್ಲಿ ಧರ್ಮ ಬಾಂಧವರು ಧಾರ್ಮಿಕ ಭ್ರಾತೃತ್ವ ಭಾವ ಬೆಳೆಸಿ ಕೊಂಡು ವರ್ಷದಲ್ಲಿ ಒಂದು ದಿನವಾದರೂ ಒಟ್ಟುಗೂಡಿ ಪ್ರಾರ್ಥನೆ -ಪೂಜೆ ಮಾಡಿರಿ. ಶಿವರಾತ್ರಿಯಂದು ಬೆಳಗ್ಗೆ ವಿಶಾಲವಾದ ಮೈದಾನದಲ್ಲಿ ಧರ್ಮಬಾಂಧವರೆಲ್ಲರೂ ಸೇರಿ ಗಣ ಮೇಳದಲ್ಲಿ ಭಾಗಿಗಳಾಗಿರಿ.

ಶರಣ ಮೇಳ: ವ್ಯಕ್ತಿಯ ವೈಯಕ್ತಿಕ ಪೂಜೆ ಮಾಡುವುದು, ಕುಟುಂಬದವರೆಲ್ಲರು ಒಂದೆಡೆ ಸೇರಿ ಪ್ರಾರ್ಥಿಸುವುದು ನಿತ್ಯ ವಿಧಿಗಳು. ಸಾಮೂಹಿಕ ಪ್ರಾರ್ಥನೆ ವಾರಕ್ಕೊಮ್ಮೆ ನಡೆಯುವುದರಿಂದ, ವಿವಿಧ ಬಡಾವಣೆ ಪ್ರದೇಶಗಳ ಜನರು ಅಲ್ಲಲ್ಲೇ ಕಲೆತು ಅದನ್ನು ಮಾಡುವರು. ಗಣಮೇಳವು ಆಯಾ ಗ್ರಾಮ, ಊರು, ನಗರಗಳ ಧರ್ಮಬಾಂಧವರನ್ನು ಒಂದಡೆ ತರಲು ನೆರವಾಗುವುದು. ಇನ್ನು ಪ್ರಾದೇಶಿಕತೆ, ಭಾಷೆ, ಮುಂತಾದ ಎಲ್ಲಾ ಸೀಮೆದಾಟಿ ಧಾರ್ಮಿಕ ಸೂತ್ರದ ಮೇಲೆ ನಮ್ಮ ತತ್ವಾನುಯಾಯಿಗಳನ್ನು ಬೆಸೆಯುವ ಸೂತ್ರವೇ ಶರಣ ಮೇಳ. ಆದ್ದರಿಂದ ನಿಮ್ಮ ಎಲ್ಲ ಕೆಲಸ ಕಾರ್ಯಗಳನ್ನು ಬದಿಗೊತ್ತಿ ಕೂಡಲ ಸಂಗಮಕ್ಕೆ ಧಾವಿಸಿ ಬಂದು ಜನವರಿ 12ರಿಂದ 15ರವರೆಗೆ ನಡೆಯುವ ಶರಣ ಮೇಳದಲ್ಲಿ ನೀವು ತಪ್ಪದೇ ಭಾಗಿಗಳಾಗಿರಿ.

ಸತ್ಯ ಸ್ಥಾಪನೆಗಾಗಿ, ಸಮಾನತೆಯ ಅನುಷ್ಠಾನಕ್ಕಾಗಿ ನಾವುಗಳೆಲ್ಲರೂ ಮಾಡಿದ ತ್ಯಾಗವನ್ನು ನೀವು ಮರೆಯಬಾರದು. ನಮ್ಮ ಅಂತಃಕರಣ ಪೂರ್ವಕ ಕಳಕಳಿಯನ್ನು ಪ್ರಾಂಜಲ ಮನಸ್ಸಿನಿಂದ ಅರಿಯಬೇಕು. ಜಗಬದುಕಲೆಂದು ಜನ ಬದುಕಲೆಂದು ವಚನ ವಾಙ್ಮಯವನ್ನು ಹೋರಾಡಿ ರಕ್ಷಿಸಿದ ಅಕ್ಕನಾಗಲಾಂಬಿಕೆ, ಮಡಿವಾಳ ಮಾಚಯ್ಯ, ಚನ್ನಬಸವಣ್ಣ ಮುಂತಾದವರ ಹೋರಾಟ ನಿಮ್ಮನ್ನು ಎಚ್ಚರಿಸದೆ? ಸಮಾನತೆಯ ಧ್ವಜವನ್ನು ಹಾರಿಸಲಿಕ್ಕಾಗಿ ಹರಳಯ್ಯ-ಮಧುವಯ್ಯ-ಶೀಲವಂತರು ಮಾಡಿದ ಪ್ರಾಣಾರ್ಪಣೆ, ಬಲಿದಾನ ನಿಮ್ಮ ಅಂತಃಕರಣವನ್ನು ಕಲಕದೆ?

ಹೆತ ತಂದೆ ಬಯಸುವುದೇನನ್ನು? ತನ್ನ ಮಕ್ಕಳೆಲ್ಲರೂ ಒಂದಡೆ ಸೇರಿ ಹಾಡಿ ಪಾಡಿ ನಲಿಯಬೇಕೆಂದೆ ತಾನೇ? ಅದೇ ನನ್ನ ಬಯಕೆ ಸಹ. ತೌರಿಗೆ ಬಂದರೆ ಏನು ಸಿಗುತ್ತದೆ ಎಂದು ನಿಮ್ಮ ಪ್ರಶ್ನೆಯೆ? ಜ್ಞಾನದ ವಸ್ತ್ರವನ್ನು ನನ್ನ ಪ್ರತಿನಿಧಿಗಳಾದ ಬೋಧಕರು ಉಡಿಸುವರು. ಸದ್ಗುಣಗಳ ಆಭರಣ ತೊಡಿಸುವರು. ವಚನ ಜ್ಞಾನದ ಸಂಪದವನ್ನು ಉಡಿ ತುಂಬಿ ಕಳಿಸುವರು. ಐಹಿಕ ಜಗತ್ತಿನಲ್ಲಿ ನನಗೆ ಮೆಚ್ಚುಗೆಯಾಗುವಂತೆ ನೀವು ಹೇಗೆ ಒಗೆತನವ ಮಾಡಬೇಕೆಂಬುದನ್ನು ಕಲಿಸಿ ಕಳಿಸುವರು.

ಷಡಂಗ ದಾಸೋಹ ಮಾಡಿರಿ, ತನು-ಮನ-ಧನ-ಪ್ರಾಣ-ಅಭಿಮಾನ-ಸಮಯ; ಈ ಆರನ್ನೂ ಮೀಸಲಿರಿಸಿ ನಮ್ಮ ತತ್ವಗಳ ಪಾಲನೆಗಾಗಿ ಶ್ರಮಿಸಿರಿ. ಸಮಷ್ಟಿಯ ಉದ್ಧಾರಕ್ಕಾಗಿ ವೈಯಕ್ತಿಕ ಅಹಂಕಾರ-ಪ್ರತಿಷ್ಠೆ ತೊರೆಯಿರಿ. ಅನುಭವ ಮಂಟಪದ ಮೂಲಕ ನಾವು ಬೋಧಿಸಿದ ಮೌಲ್ಯಗಳು ಅನುಷ್ಠಾನಕ್ಕೆ ಬರದಿರಲು ಪರಸ್ಪರರ ಸ್ವಾರ್ಥ, ಅಹಂಕಾರ- ಪ್ರತಿಷ್ಠೆಗಳೇ ಕಾರಣ ಎಂಬುದನ್ನು ಈಗಲಾದರೂ ಅರಿತುಕೊಳ್ಳಿರಿ.

ನಿಮ್ಮನ್ನು ಯಾರಾದರೂ ಶರಣ ಮೇಳಕ್ಕೆ ಆಹ್ವಾನಿಸಬೇಕೆಂದು, ಕರೆ ಕಳುಹಿಸಬೇಕೆಂದು ನಿರೀಕ್ಷಿಸುವಿರೋ? ಕೂಡದು. ನದಿಯು ನಿರಂತರವಾಗಿ ಹರಿಯುತ್ತಿರುತ್ತದೆ; ಅದರಿಂದ ಯಾರು ಬೇಕಾದರೂ ನೀರನ್ನು ತುಂಬಿಕೊಳ್ಳಬಹುದು. ಹಾಗೇಯೇ ಶರಣ ಮೇಳದಲ್ಲಿ ವಚನ ವಾಙ್ಮಯ ಗಂಗೆ ಹರಿಯುತ್ತಲಿರುತ್ತಾಳೆ. ಬನ್ನಿ ನಿಮ್ಮ ಹೃದಯ -ಮನ- ಬುದ್ಧಿ ಹಿಡಿಯುವಷ್ಟು ತುಂಬಿಕೊಳ್ಳಿರಿ. ನೀವು ನನಗಾಗಿ, ನಮ್ಮ -ನಿಮ್ಮೆಲ್ಲರ ತಂದೆಯಾದ ದೇವನನ್ನು ಆರಾಧಿಸಲು ಬರುತ್ತೀರೆಂದು ನಾನು ಸದಾ ನಿರೀಕ್ಷಿಸುತ್ತ ವಾತ್ಸಲ್ಯಪೂರ್ಣವಾಗಿ ನಿಮಗೆ ಈ ಆಹ್ವಾನ ನೀಡಿರುವೆನು.

ನಿಮ್ಮ ಪ್ರೀತಿಯ ತಂದೆ- ಬಸವಣ್ಣ

(ಗ್ರಹಿಸಿದವರು- ಬಸವಾತ್ಮಜೆ ಮಾತಾಜಿ)

ಡಿಸೆಂಬರ್ 24 ರಂದು ಉದ್ಘಾಟನೆಗೊಳ್ಳಲಿರುವ ನವದೆಹಲಿಯ

ಬಸವ ಮಂಟಪ

ಭಾರತದ ರಾಜಧಾನಿ ನವದೆಹಲಿಯಲ್ಲಿ ಬಸವ ತತ್ವ ಪ್ರಸಾರಕ್ಕಾಗಿ ಸಂಸ್ಥೆಯೊಂದನ್ನು ಕಟ್ಟಬೇಕೆಂಬ ಹಂಬಲ ಸುಮಾರು ಹತ್ತು ವರ್ಷಗಳ ಹಿಂದೆಯೇ ಮೂಡಿತ್ತು. 1996-97ರಲ್ಲಿ ಒಂದು ಬಾಡಿಗೆ ಮನೆಯಲ್ಲೇ ಕೆಲಸವನ್ನು ಪ್ರಾರಂಭಿಸಿದ್ದಲ್ಲದೆ ಲಾಲ್‌ಕಿಲ್ಲಾ ಮೈದಾನದಲ್ಲಿ ಬೃಹತ್ತಾದ ಒಂದು ಸಮ್ಮೇಳನವನ್ನು (5ನೆಯ ಬಸವ ಧರ್ಮ ಸಮ್ಮೇಳನ)ನಡೆಸಲಾಯಿತು.ಇದಕ್ಕೆ ಪೂರ್ವಭಾವಿಯಾಗಿ ಕೇಂದ್ರ ಸರ್ಕಾರದ ಅಂಚೆ ಇಲಾಖೆಯು ಬಸವೇಶ್ವರ ಅಂಚೆ ಚೀಟಿ ಹೊರತರಲು ಪ್ರಯತ್ನ ಮಾಡಲಾಯಿತು. ಮತ್ತು ಯಶಸ್ಸನ್ನು ಪಡೆಯಲಾಯಿತು. ಸಮ್ಮೇಳನವು ಯಶಸ್ವಿಯಾಯಿತಾದರೂ ಅಲ್ಲಿ ಒಂದು ಸ್ವತಂತ್ರವಾದ ನಿವೇಶನ ಹೊಂದಬೇಕೆಂಬ ಅಪೇಕ್ಷೆ ಪೂರೈಸಲಿಲ್ಲ. ಏಕೆಂದರೆ ಬೆಲೆ ವಿಪರೀತ ನಮ್ಮ ಎಣಿಕೆಗೆ ಮೀರಿದ್ದು.

ನಂತರ 2005ರಲ್ಲಿ ಸಮ್ಮೇಳನವನ್ನು ನವದೆಹಲಿಯಲ್ಲಿ ಮಾಡುವ ಪ್ರೇರಣೆ ಉಂಟಾಯಿತು. ಬಾಡಿಗೆ ಮನೆಯನ್ನು ಪಡೆದು ಲಾಲ್‌ಕಿಲ್ಲಾ ಸಮೀಪದಲ್ಲಿ (ಲಾಲ್‌ಕಿಲ್ಲಾದ ಸುತ್ತಮುತ್ತ ಕಾರ್ಯಕ್ರಮ ಮಾಡಲು ನಿಷೇಧ ಹೇರಲ್ಪಟ್ಟು ಅಲ್ಲೆಲ್ಲ ಈಗ ಉದ್ಯಾನವನ್ನು ನಿರ್ಮಿಸಲಾಗಿದೆ) ದರಿಯಾ ಗಂಜ್‌ದ ಮಾಹಾವೀರ ವಾಟಿಕಾದಲ್ಲಿ ಪ್ರಥಮ ಲಿಂಗಾಯತ ಧರ್ಮ ಸಮ್ಮೇಳನವನ್ನು ನಡೆಸಲಾಯಿತು. ಡಿಡಿಎ ಸೈಟನ್ನು ಬಸವ ಮಂಟಪ ಕಟ್ಟಬೇಕೆಂಬ ಆಸೆಯನ್ನು ಹೊಂದಿ ತುಂಬ ಪ್ರಯತ್ನ ಮಾಡಲಾಯಿತು. ಆದರೆ ಅದಕ್ಕೆ ರಾಜಕೀಯ ಪ್ರಭಾವ ಬಹಳಷ್ಟು ಬೇಕು ಎಂಬುದು ಮನವರಿಕೆಯಾಯಿತು. ಖಾಸಗಿ ಜಮೀನನ್ನು ಹೊಂದಬೇಕು ಎಂದುಕೊಂಡರೆ ಅದರ ಬೆಲೆ ವಿಪರೀತ. ಆಸೆಯನ್ನು ಕೈ ಬಿಡಬೇಕು ಎಂಬ ನಿರಾಶೆ ಕವಿಯುತ್ತಿರುವಾಗ, ಒಂದು ಸೈಟನ್ನಾದರೂ ಏಕೆ ಪಡೆಯಬಾರದು ಎಂದು ಹುಡುಕಲು ತೊಡಗಿದೆವು. ಮೂರು ತಿಂಗಳಿನ ಹುಡುಕಾಟದ ನಂತರ ಆಕಸ್ಮಿಕವಾಗಿ ಕಟ್ಟಲ್ಪಟ್ಟ ಕಟ್ಟಡವೇ ಖರೀದಿಗೆ ಲಭ್ಯವಿರುವ ಸಂಗತಿ ಪೂಜ್ಯ ಚನ್ನಬಸವಾನಂದ ಸಾಮಿಗಳ ಗಮನಕ್ಕೆ ಬಂದಿತು. ಆಗ ನಾನು, ಶರಣ ಪುಟ್ಟರುದ್ರಪ್ಪ ಮುಂತಾದವರು ಹೋಗಿ ನೋಡಿದೆವು ಸಿದ್ಧವಾಗಿರುವ ಕಟ್ಟಡವೇ ಸಿಕ್ಕುತ್ತಿರುವಾಗ ಖರೀದಿಸುವುದು ಒಳ್ಳೆಯದು ಎಂದು ಶರಣ ಪುಟ್ಟರುದ್ರಪ್ಪ ದೃಢ ನಿರ್ಧಾರ ತಳೆದರು ಆದರೆ ಬೆಲೆ ಮಾತ್ರ ನಮ್ಮ ಶಕ್ತಿಗೆ ಮೀರಿದ್ದಾಗಿತ್ತು. ಅಡ್ವಾನ್ಸ್ ಕೊಟ್ಟು ಒಪ್ಪಂದ ಮಾಡಿಕೊಳ್ಳಲೂ ಭಯ; ಉಳಿದ ಹಣವನ್ನು ಹೊಂದಿಸಲಾಗದಿದ್ದರೆ ಕೊಟ್ಟ ಅಡ್ವಾನ್ಸ್ ಸಹ ಕೈ ಬಿಡುತ್ತದೆ. ಎಂಬ ಅಳುಕು. ಜೊತೆಗೆ ಅಲ್ಲಿಯ ಜನರು ಮುಂಗಡ ಕೊಟ್ಟ 2 ತಿಂಗಳಿಗಿಂತ ಜಾಸ್ತಿ ಸಮಯವನ್ನು ಕೊಡುವುದಿಲ್ಲ. ಗುರು ಬಸವಣ್ಣನವರ ಮೇಲೆ ಭಾರ ಹಾಕಿ ಅಡ್ವಾನ್ಸ್ ಕೊಟ್ಟು ಒಪ್ಪಂದ ಮಾಡಿಕೊಡು ಬಿಟ್ಟೆವು. ಅಲ್ಲಿಂದ ಬೆಂಗಳೂರಿಗೆ ಬರುತ್ತಲೇ ವಿವಿಧ ಊರಿನಲ್ಲಿರುವ ಶರಣ ಬಂಧುಗಳಿಗೆ ದೂರವಾಣಿ ಕರೆ ಮಾಡಿ ಇಂಥದೊಂದು ದೊಡ್ಡ ಸಾಹಸಕ್ಕೆ ಕೈ ಹಾಕಲಾಗಿದೆ. ನಮ್ಮ ಧರ್ಮದ,ಗುರು ಬಸವಣ್ಣನವರ ಹೆಸರಿನ ಒಂದೂ ಸಂಸ್ಥೆಯಿಲ್ಲ. ಸುತ್ತೂರು ಮಠಾಧೀಶ್ವರ ಸಂಸ್ಥೆ ಇದ್ದರೂ ಅದು ಕೇವಲ ವೃತ್ತಿಪರ ಶಿಕ್ಷಣ ಸಂಸ್ಥೆ ಕೆ.ಎಲ್.ಇ.ಯವರ ಸಂಸ್ಥೆ ಇದ್ದರೂ ಅದು ಶರಣ ಸಂಸ್ಕೃತಿಯನ್ನು ಪ್ರತಿಬಿಂಬಿಸುವಂತಿಲ್ಲ. ಆದ್ದರಿಂದ ಈ ಕಾರ್ಯಕ್ಕಾಗಿ ತಮ್ಮಿಂದ ಹಣವು ಸಾಲವಾಗಿ ಬೇಕು. ಇದಕ್ಕೆ 12%ಬಡ್ಡಿ ಸಹ ಕೊಡಲಾಗುತ್ತದೆ. ಹಿಂದೆ ಬಸವ ಕಲ್ಯಾಣದಲ್ಲಿ ಜಾಗ ಖರೀದಿಸುವಾಗ ನಂತರ 2006ರ ಜನವರಿಯಲ್ಲಿ ಮಹಾರಾಷ್ಟ್ರದ ಅಲ್ಲಮ ಪ್ರಭು ಗಿರಿಯಲ್ಲಿ ಖರೀದಿಸುವಾಗ ಮಾಡಿದ ಸಾಲವನ್ನು ತೀರಿಸಲಾಗಿದೆ. ಆದ್ದರಿಂದ ಈಗ ನೀವು ಕೊಡುವ ಮನಸ್ಸು ಮಾಡಬೇಕು ಎಂದು ವಿನಂತಿಸಿದೆ.

ಶರಣ ಬಂಧುಗಳು ಸಹರ್ಷದಿಂದ ಅನುಮೋದಿಸಿದರು. ನೀವು ಒಂದು ಸುತ್ತು ಬಂದು ಹೋಗಬೇಕು ಎಂದು ಕೇಳಿಕೊಂಡರು. ವ್ಯಾಪಕವಾಗಿ ಒಂದು ಸುತ್ತು ಪ್ರವಾಸವನ್ನು ಕರ್ನಾಟಕ, ಆಂಧ್ರ, ಮಹಾರಾಷ್ಟ್ರಗಳಲ್ಲಿ ಹಾಕಿಕೊಂಡೆ ಒಪ್ಪಂದ ಮಾಡಿಕೊಂಡಿದ್ದ ಹಣವು ಸಾಲ ರೂಪದಲ್ಲಿ ಹರಿದು ಬಂದಿತು. ಅನಿವಾರ್ಯ ಅಗತ್ಯವಿದ್ದವರು ಬಡ್ಡಿ ತೆಗೆದುಕೊಂಡರೆ, ಉಳಿದವರು ಸಾಲದ ಹಣ ಕೊಟ್ಟರೆ

ಸಾಕು. ಎಂದಿದ್ದಾರೆ. ಹಣವು ಜೋಡಣೆಯಾಗುವ ಭರವಸೆ ಲಭ್ಯವಾಗುತಲೇ ನೋಂದಣಿಯ ದಿನಾಂಕ ನಿಶ್ಚಯಿಸಿ, ಹೋಗಿ ದಿ. 30-11-2006ರಂದು ನಮ್ಮ ಟ್ರಸ್ಟ್ ಹೆಸರಿಗೆ ನೋಂದಣಿ ಮಾಡಿಸಲಾಗಿದೆ.

ನಮ್ಮ ಶರಣರ ಬಸವ ಭಕ್ತಿ ಎಷ್ಟೆಂದರೆ ಸಾಲ ಬೇಕೇ ನಾವೂ ಕಳಿಸೋಣವೇ ಎಂದು ದೂರವಾಣಿಯಲ್ಲಿ ಇನ್ನೂ ಕೇಳುತ್ತಾರೆ. ಆಗ ಹೃದಯ ತುಂಬಿ ಬರುತ್ತದೆ. ಈಗ ಸಾಕು, ಖರೀದಿಯ ಬೇಡಿಕೆಯ ವಿಷಯವನ್ನು ಸಾರ್ವಜನಿಕವಾಗಿ ಕೇಳದೆ ಕೇವಲ ದೂರವಾಣಿಯ ಮೂಲಕ ಕೆಲವರನ್ನೇ ಸಂಪರ್ಕಿಸಲಾಯಿತು. ಇದು ನಮ್ಮ ಶಕ್ತಿಗೆ ಮೀರಿದ ಕೆಲಸ; ಅದು ಹೇಗೆ ಸಾಧ್ಯವಾಯಿತೊ! ಒಂದು ರೀತಿಯ ಕನಸು ಎನಿಸುತ್ತದೆ. ಗುರು ಬಸವಣ್ಣನವರ ಕೃಪೆಯಿಂದ ಪವಾಡ ಸದೃಶ್ಯವಾಗಿ ನಡೆದು ಹೋಗಿದೆ. ಸಹಕರಿಸಿದ ಎಲ್ಲಾ ಶರಣ ಬಂಧುಗಳಿಗೆ ಸೃಷ್ಟಿಕರ್ತ ಲಿಂಗದೇವ, ಧರ್ಮಗುರು ಬಸವಣ್ಣನವರು ಆಯುರಾರೋಗ್ಯ ಭಾಗ್ಯ ಸಕಲ ಸಂಪತ್ತನ್ನು ಅನುಗ್ರಹಿಸಲಿ ಎಂದು ಹಾರೈಸುತ್ತೇವೆ.

ಬಸವ ಮಂಪದ ವಿವರ

ಸುಮಾರು 400 ಚದರ ಗಜ (3600 ಚ.ಅಡಿ) ವ್ಯಾಪ್ತಿಯ ನಿವೇಶನದಲ್ಲಿ ಮೂರೂವರೆ ಅಂತಸ್ತಿನ ಕಟ್ಟಡವಿದೆ. ಎಲ್ಲ ಕಾಲಮ್ ಆಧಾರಿತವಾಗಿದೆ. ಹಿಂದಿನ ಮಾಲೀಕರೇ ಬೋರ್ ತೆಗೆಸಿದ್ದಿದೆ. ಬೆಂಗಳೂರಿನ ಬಸವ ಮಂಟಪದಂತಿದೆ. ವುಡನ್ ಪಾರ್ಟಿಷನ್ ಮೊದಲಿನ, ಎರಡೆನೆಯ ಅಂತಸ್ತಿನಲ್ಲಿರುವುದರಿಂದ ಅವನ್ನು ತೆಗೆದು ವಿಶಾಲವಾದ ಪ್ರಾರ್ಥನಾ ಮಂದಿರ ಮತ್ತು ಯೋಗ ಕೇಂದ್ರವನ್ನು ಮಾಡಲು ಬರುತ್ತದೆ. (ಪಾಲಂ) ವಿಮಾನ ನಿಲ್ದಾಣಕ್ಕೆ ಹತ್ತಿರದಲ್ಲಿದೆ. ಈ ಭಾಗವು ಮೊದಲು ಪಾಲಂ ಎಂಬ ಹಳ್ಳಿಯ ವ್ಯಾಪ್ತಿಯಲ್ಲೇ ಇದ್ದ ಪ್ರದೇಶ. ಮಹಾವೀರ ಎನ್‌ಕ್ಲೇವ್, ಇದರಲ್ಲಿ ಬೆಂಗಾಲಿ ಕಾಲನಿ ಎಂಬಲ್ಲಿದೆ. ವಿಳಾಸವು ಹೀಗಿದೆ.

ಬಸವ ಮಂಟಪ
ಎಚ್-3/82, ಬೆಂಗಾಲಿ ಕಾಲನಿ
ಮಹಾವೀರ ಎನ್‌ಕ್ಲೇವ್, ನವ ದೆಹಲಿ - 110045

ಪೂಜ್ಯ ಶ್ರೀ ಚನ್ನಬಸವಾನಂದ ಸ್ವಾಮಿಗಳು ಅಲ್ಲಿಯೇ ಇದ್ದಾರೆ.
ಅವರ ಜಂಗಮ ದೂರವಾಣಿ :09911249620

ಸ್ಥಳವನ್ನು ತಲುಪಲು ಮಾರ್ಗನಿರ್ದೇಶನ :

ನವ ದೆಹಲಿ ರೇಲ್ವೆ ನಿಲ್ದಾಣದಿಂದ 20 ಕಿ.ಮೀ. ನವದೆಹಲಿ ರೇಲ್ವೆ ನಿಲ್ದಾಣದಲ್ಲಿ ಇಳಿದು ಅಜಮೀರಿ ಗೇಟ್ ಕಡೆಯಿಂದ ಹೊರಗೆ ಬಂದರೆ ಡಿ ಟಿ ಸಿ ಬಸ್ ಸಿಗುತ್ತದೆ. ಪ್ರೀಪೇಯ್ಡ್ ಟ್ಯಾಕ್ಸಿ ಸಹ ಸಿಗುತ್ತದೆ. ಪಾಲಮ್ ದಾಬಡಿ ಮೋಡ್ (ತಿರುವು)ರಸ್ತೆಯಲ್ಲಿ ಬಂದಾಗ ಸುಲಬ್ ಇಂಟರ್ ನ್ಯಾಷನಲ್ ಸಂಸ್ಥೆ ಎಂಬ ಪ್ರಸಿದ್ಧ ಸಂಸ್ಥೆ ಮೇನ್ ರೋಡ್ ಮೇಲಿದೆ ಅದರ ಪಕ್ಕದಲ್ಲಿ ಬೆಂಗಾಲಿ ಕಾಲನಿ ರಸ್ತೆ ಬರುತ್ತದೆ. ನೇರವಾಗಿ ಬಸವ ಮಂಟಪಕ್ಕೆ ಮುಟ್ಟುತ್ತದೆ. ನ್ಯೂ ಡೆಲ್ಲಿ ನಿಲ್ದಾಣದಿಂದ ಮಂಗಳಾಪುರಿಗೆ ಹೋಗುವ ಮಾರ್ಗದಲ್ಲಿ ಬಂದಾಗ ಬೆಂಗಾಲಿ ಕಾಲನಿ ರಸ್ತೆ ಬಲಕ್ಕೆ ಆಗುತ್ತದೆ.

ವಿಮಾನ ನಿಲ್ದಾಣದ ಕಡೆಯಿಂದ ಬರುವವರು ವಿಮಾನ ನಿಲ್ದಾಣ ದ್ವಾರಕ ರಸ್ತೆಯಲ್ಲಿ ಬಂದು, ಪಾಲಮ್ ಫ್ಲೈ ಓವರ್ ದ್ವಾರಕ ಮೋಡ್ ಇಲ್ಲಿ ಹೊರಳಿದಾಗ ಪಾಲಮ್ - ದಾಬಡಿ ಮೋಡ್ ರಸ್ತೆ ಸಿಗುವುದು ಇದರಲ್ಲಿ ಸಾಗಿದಾಗ ಸುಲಭ್ ಇಂಟರ್ ನ್ಯಾಷನಲ್ ಸಂಸ್ಥೆಗೂ ಮೊದಲಿಗೆ ಎಡಗಡೆಗೆ ಬೆಂಗಾಲಿ ಕಾಲನಿ ರಸ್ತೆ ಸಿಗುತ್ತದೆ. <u>ಮೆಟ್ರೋ ಸೌಲಭ್ಯ:</u> ದೆಹಲಿಯಲ್ಲಿ ಮೆಟ್ರೋ ರೇಲ್ವೆ ಸೌಲಭ್ಯವಿದೆ. ನವದೆಹಲಿ ರೇಲ್ವೆ ಸ್ಟೇಷನ್‌ದಲ್ಲಿ ಇಳಿದು ಅಜಮೀರಿ ಗೇಟ್‌ದ ರಾಜೀವ ಚೌಕ್ ಎಂಬಲ್ಲಿ ಇದನ್ನು ಬದಲಿಸಿ ಇನ್ನೊಂದು ಮೆಟ್ರೋ ಹಿಡಿಯಬೇಕು. ಉತಮ ನಗರದ ಈಸ್ಟ್ (ಪೂರ್ವ) ರೇಲ್ವೆ ನಿಲ್ದಾಣದಲ್ಲಿ ಇಳಿದರೆ ಬಸವ ಮಂಟಪ ಒಂದೇ ಕಿಲೋ ಮೇಟರ್ ದೂರದಲ್ಲಿದೆ.

ಮೆಟ್ರೋ ಟ್ರೇನ್ ತ್ವರಿತ ವೇಗದಲ್ಲಿ ಸಂಚರಿಸುತ್ತವೆ. ಒಂದು ವೇಳೆ ಎಲ್ಲರಿಗೂ ಒಟ್ಟಿಗೆ ಹತ್ತಲೂ

ಆಗದಿದ್ದರೆ ಗಾಬರಿ ಪಡಬೇಕಾಗಿಲ್ಲ. ಅದರ ಹಿಂದೆ ಸ್ವಲ್ಪ ಹೊತ್ತಿನಲ್ಲೇ ಇನ್ನೊಂದು ಟ್ರೇನ್ ಬರುತ್ತದೆ. ಅದರಲ್ಲಿ ಹೋಗಿ ಮೊದಲು ಹೋದವರೊಡನೆ ಸೇರಿಕೊಳ್ಳಬಹುದು.

ದಿ.24ರಂದು ಬಸವ ಮಂಟಪದ ಉದ್ಘಾಟನೆ

ದಿ 24ರಂದು ಬೆಳಗ್ಗೆ 10-30ಕ್ಕೆ ಬಸವ ಮಂಟಪದ ಉದ್ಘಾಟನಾ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ. ಈಗ ಚಳಿಗಾಲವಾದುದರಿಂದಲೂ ಕೆಲವೇ ದಿನಗಳಲ್ಲಿ 20ನೆಯ ಶರಣ ಮೇಳವು ಒದಗಿ ಬರುವುದರಿಂದಲೂ ದೊಡ್ಡ ಸಮ್ಮೇಳನವನ್ನೇನೂ ಏರ್ಪಡಿಸಿಲ್ಲ. ಸಂಸ್ಥೆಯ ಪೂಜ್ಯರುಗಳು ಶರಣ ಮೇಳದ ಪ್ರಚಾರ ಮತ್ತು ದೇಣಿಗೆ ಸಂಗ್ರಹದಲ್ಲಿ ನಿರತರಾಗಿದ್ದಾರೆ. ಆದುದರಿಂದ ದೆಹಲಿಯಲ್ಲಿ ಬೃಹತ್ ಕಾರ್ಯಕ್ರಮ ಏರ್ಪಡಿಸದೆ ಸಂಕ್ಷಿಪ್ತ ಕಾರ್ಯಕ್ರಮ ಇಡಲಾಗಿದೆ. ಆಸಕ್ತರು ಬರಬಹುದು.

ಸಾಲ ತೀರಿಸುವ ಹೊಣೆಗಾರಿಕೆ

ದೇಣಿಗೆ ಸಂಗ್ರಹಿಸಿ, ನಂತರ ಜಾಗ ಖರೀದಿಸಲು ಸಮಯ ಹಿಡಿಯುತದೆ. ಅಷ್ಟರಲ್ಲಿ ಬೆಲೆಗಳು ಏರಿರುತ್ತವೆ. ಈ ಹಿನ್ನಲೆಯಲ್ಲಿ ಖಾಸಗಿ ಫೈನಾನ್ಸಿಯರ್‌ರಿಂದ, ಶರಣ ಬಂಧುಗಳಿಂದ ಸಾಲವನ್ನು ಪಡೆದು, ಕಟ್ಟಡ ಸಹಿತ ನಿವೇಶನ ಖರೀದಿಸಲಾಗಿದೆ. ಬಸವ ಕಲ್ಯಾಣದಲ್ಲಿ 108 ಅಡಿಯ ಬೃಹತ್ ಪುತ್ಥಳಿಯ ಕೆಲಸಕ್ಕೆ ಮತ್ತು ದೆಹಲಿಯ ಬಸವ ಮಂಟಪ ಖರೀದಿಗಾಗಿ ಮಾಡಿಕೊಂಡ ಸಾಲವನ್ನು ತೀರಿಸುವ ಜವಾಬ್ದಾರಿ ಒದಗಿರುವುದರಿಂದ ಸಹೃದಯರು ಉದಾರವಾಗಿ ಕಾಣಿಕೆ ನೀಡಬೇಕೆಂದು ಕೋರುತ್ತೇವೆ. ಶರಣ ಮೇಳದ ಸಮಯದಲ್ಲಿ ತಮ್ಮ ಭಕ್ತಿ ಪೂರ್ವಕ ಕಾಣಿಕೆ ನೀಡುವ ಸಂಕಲ್ಪ ಮಾಡಬೇಕೆಂದು ಕೋರುತ್ತೇವೆ.

ಶುಭಹಾರೈಕೆಗಳೊಡನೆ

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷರು, ಬಸವ ಧರ್ಮ ಪೀಠ, ಕೂಡಲ ಸಂಗಮ

ಶರಣ ವ್ರತ ಸ್ವೀಕಾರ

ಕೂಡಲ ಸಂಗಮವು ಧರ್ಮಕ್ಷೇತ್ರವು ಎಂದು
ಶರಣ ವ್ರತ ಸ್ವೀಕರಿಸಿ ಶರಣ ಮೇಳಕೆ ಬಂದು
ಗಣಲಿಂಗ ದರ್ಶನವ ಪಡೆದು ಪುಳಕಿತನಾಗು
ಸಮುದಾಯ ಪ್ರರ್ಥನೆಯ ಮಾಡಿ ಧನ್ಯನಾಗು

ಶರಣ ಬಂಧುಗಳೆ,

ಶರಣ ವ್ರತ ಸ್ವೀಕಾರ ಮಾಡಿ ಶರಣ ಮೇಳಕ್ಕೆ ಅನೇಕರು ಬರುವುದುಂಟು. 40 ದಿವಸಗಳ ಗುರುಸಾರಾಯ ಸಂಪದ್ ವ್ರತ, 30 ದಿವಸಗಳ ಲಿಂಗ ಸಾರಾಯ ಸಂಪದ್ ವ್ರತ, 20 ದಿವಸಗಳ ಜಂಗಮ ಸಾರಾಯ ಸಂಪದ್ ವ್ರತ, 10ದಿವಸಗಳ ಸಾರಾಯ ಸಂಪದ್ ವ್ರತ , ಪ್ರಸಾದ ಸಾರಾಯ ಸಂಪದ್ ವ್ರತ, ಇವುಗಳಲ್ಲಿ ಯಾವುದನ್ನಾದರೂ ಸ್ವೀಕರಿಸಿ ದಿ. 14-01-2005ರಂದು ವ್ರತವನ್ನು ಪೂರ್ಣಗೊಲಿಸಬೇಕು.

1. ಗುರು ಸಾರಾಯ ಸಂಪದ್ ವ್ರತ - ಡಿಸೆಂಬರ್ 2ರಂದು
2. ಲಿಂಗ ಸಾರಾಯ ಸಂಪದ್ ವ್ರತ - ಡಿಸೆಂಬರ್ 12ರಂದು
3. ಜಂಗಮ ಸಾರಾಯ ಸಂಪದ್ ವ್ರತ - ಡಿಸೆಂಬರ್ 22,25ರಂದು
4. ಪ್ರಸಾದ ಸಾರಾಯ ಸಂಪದ್ ವ್ರತ - ಜನವರಿ 1ರಂದು

ಶರಣ ಮೇಳ ಉತವ ಸಮಿತಿ,
ಬಸವ ಮಂಟಪ, 2035,20ನೇ ಮುಖ್ಯರಸ್ತೆ, ಕಾರ್ಡ್‌ರೋಡ್
2ನೇ ಬ್ಲಾಕ್, ರಾಜಾಜಿ ನಗರ , ಬೆಂಗಳೂರು-560010
ಕರ್ನಾಟಕ ರಾಜ್ಯ, ಭಾರತ
ದೂರವಾಣಿ : 080-23325335, 23131476

ಜಂಗಮನಾರು ....?

– ಪೂಜ್ಯ ಶ್ರೀ ಲಿಂ॥ ಲಿಂಗಾನಂದ ಸ್ವಾಮೀಜಿ

ಅಗ್ನಿಯಾಧಾರದಲ್ಲಿ ಕಬ್ಬುನ ನೀರುಂಬುವದಯ್ಯಾ
ಭೂಮಿಯಾಧಾರದಲ್ಲಿ ವೃಕ್ಷ ನೀರುಂಬುದಯ್ಯಾ
ಜಂಗಮಾಪ್ಯಾಯನವಾದರೆ ಲಿಂಗ ಸಂತುಷ್ಟಿಯಯ್ಯಾ
ವೃಕ್ಷಸ್ಯ ವದನಂ ಭೂಮಿಃ ಸ್ಥಾವರಸ್ಯತು ಜಂಗಮಂ.
ಇದು ಕಾರಣ ಲಿಂಗದೇವರಲ್ಲಿ
ಜಂಗಮಾಪ್ಯಾಯನವಾದರೆ ಲಿಂಗ ಸಂತುಷ್ಟಿ

ನಿರಾಕಾರ ಪರಶಿವನೇ ಸಾಕಾರ ರೂಪದಿಂದ ಅಚರ ಲಿಂಗವಾಗಿ ಭಕ್ತನ ಕರಸ್ಥಲಕೆ ಬಂದಿದ್ದಾನೆ. ಅವನೇ ಚರಲಿಂಗವಾಗಿ ಲೋಕೋದ್ಧಾರ ಮಾಡುತ್ತಾ ಚರಿಸುವ ಜಂಗಮನಾಗಿದ್ದಾನೆ ಒಂದು ನಿರ್ಜೀವ ಸಾಕಾರ; ಇನ್ನೊಂದು ಸಜೀವ ಸಾಕಾರ. ಆದ್ದರಿಂದೆ ಲಿಂಗ ತೃಪ್ತಿಯಾಗಬೇಕೆಂದು ಶರಣರು ಸಾರಿ ಹೇಳಿದ್ದಾರೆ. ಜಂಗಮಾಪ್ಯಾಯನದಲ್ಲಿ ಲಿಂಗದ ತೃಪ್ತಿಯಾಗುವದೆಂದೂ ಸ್ಥಾವರದ ಬಾಯಿ ಜಂಗಮವೆಂದೂ, ಭಕ್ತಿಯೆಂಬ ಭಾಂಡಕ್ಕೆ ಜಂಗಮವೇ ಸುಂಕಿಗ ಎಂದು ಸಾರಿ ಹೇಳಿ, ಸ್ಥಾವರ ಜಡ ದೈವದ ಪೂಜೆಯಲ್ಲಿದ್ದ ಜನತೆಗೆ, ಜಡ ದೈವಕ್ಕಾಗಿ ಜೀವರುಗಳ ನಿರ್ಲಕ್ಷ ಮಾಡಿದ್ದ ಶುಷ್ಕ ಪಂಡಿತರಿಗೆ ಜಂಗಮದ -ಚರಲಿಂಗದ ಮಹತಿಯನ್ನು ಗುರು ಬಸವಣ್ಣನವರು ಮನಮುಟ್ಟುವಂತೆ ವಿವರಿಸಿದ್ದಾರೆ.

ಗುರುವಿನ ಸೇವೆಯಲ್ಲಿ ತನು ಸವೆಯಬೇಕು. ಲಿಂಗಾನುಸಂಧಾನದಲ್ಲಿ ಮನ ಮೀಸಲಾಗಿರಬೇಕು. ಜಂಗಮ ದಾಸೋಹಕ್ಕಾಗಿ ಧನ ವ್ಯಯವಾಗಬೇಕೆಂದು ಗುರು ಲಿಂಗ ಜಂಗಮಕ್ಕೆ ಧನವನರ್ಪಿಸದಿದ್ದರೆ ಅದು ಪಾಪಿಯ ಧನವಾಗಿ, ಪ್ರಾಯಶ್ಚಿತ್ತಕ್ಕೆ ಸಲ್ಲುವದೇ ವಿನಃ ಸತ್ಪಾತ್ರಕ್ಕೆ ಅಲ್ಲ ಎಂದು ಹೇಳಿದ್ದಾರೆ.

ಗುರೂಪದೇಶ ಮಂತ್ರ ವೈದ್ಯ !
ಜಂಗಮೋಪದೇಶ ಶಸ್ತ್ರ ವೈದ್ಯ ನೋಡಾ!
ಭವರೋಗವ ಕಳೆವ ಪರಿಯ ನೋಡಾ !
ಲಿಂಗದೇವನ ಶರಣರ ಅನುಭಾವ
ಮಡಿವಾಳನ ಕಾಯಕದಂತೆ !

ಈ ವಚನದಲ್ಲಿ ಗುರು ಬಸವಣ್ಣನವರು, ಗುರು ಮತ್ತು ಜಂಗಮರ ಸೂಕ್ಷ್ಮ ಭೇದವನ್ನು ಬಹು ಮಾರ್ಮಿಕವಾಗಿ ಹೇಳಿದ್ದಾರೆ. ಗುರು ಡಾಕ್ಟರ ಇದ್ದ ಹಾಗೆ, ಜಂಗಮನು ಸರ್ಜನ್ ಇದ್ದಂತೆ. ಸಾದಾ ಖಾಯಿಲೆಯಾದರೆ ಡಾಕ್ಟರ್ ವಾಸಿ ಮಾಡಬಲ್ಲ. ಆಪರೇಷನ್ ಕೇಸ್ ಇದ್ದರೆ, ಸರ್ಜನ್ ಹತ್ತಿರ ಹೋಗಬೇಕಷ್ಟೇ, ಹಾಗೆ ಜಂಗಮನು ತನ್ನ ಉಪದೇಶದ ಶಸ್ತ್ರದಿಂದ ಸಮಾಜಕ್ಕೆ ಬಂದ ಭಯಂಕರ ಖಾಯಿಲೆಯನ್ನು ಗುಣ ಮಾಡುವನು. ಮಡಿವಾಳ ಬಟ್ಟೆ ಹರಿಯಲೆಂದು ಕಲ್ಲಿಗೆ ಅಪ್ಪಳಿಸದೆ, ಸ್ವಚ್ಛವಾಗಲೆಂದು ಒಗೆಯುವನು. ಅದರಂತೆ ಜಂಗಮನು ಭಕ್ತರ ಹೃದಯವೆಂಬ ಬಟ್ಟೆಯನ್ನು ತೊಳೆಯುವ ಮಡಿವಾಳ ಎಂಬುದಾಗಿ ಗುರು ಬಸವಣ್ಣನವರು ಜಂಗಮನ ಕಾಯಕದ ಬಗ್ಗೆ ಹೇಳಿದ್ದಾರೆ.

ಜಂಗಮ, ಇದು ಲಿಂಗಾಯತ ಧರ್ಮದ ಪಾರಿಭಾಷಿಕ ಶಬ್ದವಾದ್ದರಿಂದ ಇದಕ್ಕೆ ವಿಶಿಷ್ಟವಾದ ಅರ್ಥವಿದೆ, ಜಂಗಮಕ್ಕೆ ಶಬ್ದಶಃ ಅರ್ಥ ಅತಿಶಯ ಜ್ಞಾನಿ, ಸ್ಫುರಣಾತ್ಮಕ ಜ್ಞಾನಿ ಎಂದು ಆಗುವುದು. 'ಅತ್ಯಂತಂ ಗಚ್ಛತೀತ ಜಂಗಮಃ - ಗಮ ಧಾತುವಿನಿಂದ ಜಂಗಮ ಶಬ್ದವು ಉತ್ಪನ್ನವಾಗಿದೆ.' ಅತಿಶಯ ಜ್ಞಾನಿಯೆಂದು ಇಲ್ಲಿ ಅರ್ಥವಾಗುವುದು.

ತಾತ್ವಿಕ ಅರ್ಥವು ಹೇಗೆ ಇದೆ? ಪರಶಿವ ಮತ್ತು ಪರಾಶಕ್ತಿ ; ಸತ್ ಮತ್ತು ಚಿತ್ (Truth & Will) ಜಂಗಮ ಇವು ಒಂದೇ ಅರ್ಥದಲ್ಲಿ ಬಳಸಲ್ಪಡುತ್ತವೆ. ಆ ಶಕ್ತಿ ಅಥವಾ ಪರಾಶಕ್ತಿ ಯಾರಲ್ಲಿ ಅಧಿಕವಾಗಿ ಇಳಿದು ಬಂದಿರುವುದೋ ಅಂಥವರಿಗೆ ಜಂಗಮರೆಂದು ಕರೆಯಲಾಗುವುದು. ಲಿಂಗಾಯತ ಧರ್ಮ ದೃಷ್ಟಿಯಿಂದ, ಪಟ್ಟಣಕ್ಕೆ ಪಂಚರಾತ್ರಿ ಹಳ್ಳಿಗೆ ಏಕ ರಾತ್ರಿಯಂತೆ ಊರಿಂದೂರಿಗೆ ಧರ್ಮಬೋಧೆ

ಮಾಡುತ್ತಾ ಸಂಚರಿಸುವ ಉಪದೇಶಕನಿಗೆ (Missionary) ಜಂಗಮನೆಂದು ಹೇಳಬಹುದು.

ಆಧ್ಯಾತ್ಮ ದೃಷ್ಟಿಯಿಂದ ಅಂಗದಲ್ಲಿ ಆಚಾರ ಅಳವಡಿಸಿಕೊಂಡು ಇಷ್ಟಲಿಂಗ ಪೂಜೆ ಮಾಡುವ ಸದಾಚಾರ ಸಂಪನ್ನನೇ ಭಕ್ತನು. ಅಂತರಂಗದಲ್ಲಿ ಅರಿವು ಕರಿಗೊಂಡು ಪ್ರಾಣ ಲಿಂಗ ಪೂಜೆ ಮಾಡುವ ಸಾಮರ್ಥ್ಯವುಳ್ಳಾತನೇ ಗುರುವು. ಆತ್ಮ ಸಂಗದಲ್ಲಿ ಅನುಭಾವ ಅಳವಡಿಸಿಕೊಂಡು ಭಾವ ಲಿಂಗ ಪೂಜೆ ಮಾಡುವ ನಿರಾಭಾರಿ ನಿರಂಜನ ಮೂರ್ತಿಯೇ ಜಂಗಮನು. ಶ್ರೀ ಅರವಿಂದರ ತತ್ವ ಜ್ಞಾನದಲ್ಲಿ ಬರುವ ಅತಿ ಮಾನವ (Super Man) ನಿಗೆ ನಾವು ಜಂಗಮನನ್ನು ಸ್ವಲ್ಪ ಮಟ್ಟಿಗೆ ಹೋಲಿಸಬಹುದು.

ನಾನು ನನ್ನದು ಎಂಬ ಅಭಿಮಾನವನ್ನೆಲ್ಲಾ ಬಿಟ್ಟು ನಿಜಲಿಂಗ ಒಂದರಲ್ಲಿ ಸಮರಸವಾಗಿ ತಾನೇ ತಾನಾಗಿ ಯಾವನು ಸಂಚರಿಸುವನೋ ಅವನೇ ಜಂಗಮನೆನಿಸಿಕೊಳ್ಳುವನು. ಎಂದು ನಂದಿಪುರಾಣ ಹೇಳುತ್ತದೆ. ಯಾರು ವಿಶ್ವ ಪ್ರಕಾಶನಾದ ಶಿವನನ್ನು ಸ್ವಸ್ವರೂಪದಿಂದ ತಿಳಿಯುತ್ತಾರೆಯೋ ಅವರೇ ಜಂಗಮರೆಂದು ಕರೆಯಲ್ಪಡುವರು! ಎಂದು ಸಿದ್ಧಾಂತ ಶಿಖಾಮಣಿ ಹೇಳುತ್ತದೆ.

ಪುತ್ರೇಷಣ, ದಾರೇಷಣ, ವಿತ್ತೇಷಣಗಳನ್ನು ಸುತಾ ರಾಂ ವರ್ಜಿಸಿ ಜ್ಞಾನ - ವಿಜ್ಞಾನಯುಕ್ತರಾಗಿ ಧೃಡ ವೈರಾಗ್ಯ ಸಂಪನ್ನರಾದ ಧೀರರೇ ಜಂಗಮರೆನಿಸುವರು ಎಂದು ಪಾರಮೇಶ್ವರಾಗಮ ನುಡಿಯುತ್ತದೆ. ಮಾನವನ ತನು, ಪ್ರಾಣ, ಮನಗಳಿಗೆ ಆವರಿಸಿದ ಜನನ, ಮರಣ, ಹಸಿವು-ತೃಷೆ ಶೋಕ-ಮೋಹಗಳೆಂಬ ಷಡೂರ್ಮಿಗಳನ್ನು ಗೆದ್ದು ಸಚ್ಚಿದಾನಂದ ಸ್ವರೂಪಿಯಾಗಿ ವಿರಾಜಿಸುವ ಶಿವಯೋಗಿಯೇ ಜಂಗಮನೆಂದು ಸಿದ್ಧರಾಮ ಶಿವಯೋಗಿಗಳು ಜಂಗಮನ ಲಕ್ಷಣವನ್ನು ಚಲ್ಲವರಿದಿದ್ದಾರೆ.

ಜಂಗಮನು ನಿರ್ಲೇಪಕ, ನಿರುಪಾಧಿಕ, ನಿರ್ಬೋಧಕ, ನಿರಾಶ್ರಿತ, ನಿರ್ಲಂಪಟ, ನಿಷ್ಕಾರಣ ಎಂಬ ಷಡ್ಗುಣ ಭರಿತನಾಗಿರಬೇಕು. ಜಂಗಮನು ಕಳಂಕಿಯಾಗಿರಬಾರದು, ಅಶಕನಾಗಿರಬಾರದು, ಪಾಶಜೀವಿಯಾಗಿರಬಾರದು, ಅಸತ್ಯ ಅನಾಚಾರಿಯಾಗಿರಬಾರದು. ಜಂಗಮನು ಸತ್ಯ, ದಯ, ಕ್ಷಮೆ, ದಮೆ, ಶಾಂತಿ, ಸೈರಣೆ, ಸಮಾಧಾನ, ಸಂತೋಷ ಪರಿಣಾಮ, ಇತ್ಯಾದಿ ಸದ್ಗುಣ ಭರಿತನಾಗಿರಬೇಕು. ಜಂಗಮನು ಪರಸ್ತ್ರೀಯರ ನೋಡುವಲ್ಲಿ ಕುರುಡನಾಗಿರಬೇಕು. ಪರಧನವ ಕಂಡು ಹಿಂಜರಿಯಬೇಕು. ದುಷ್ಟ ಮಾರ್ಗದಲ್ಲಿ ಹೆಳವನಾಗಿರಬೇಕು. ವಿಷಯಗಳೊಳು ನಿಃಕರುಣಿಯಾಗಿರಬೇಕು, ಶಿವನಿಂದೆ ಕೇಳದಂತಿರಬೇಕು, ದುರಾತ್ಮರಿಗೆ ಜ್ಞಾನದ್ರವ್ಯ ಕೊಡುವಲ್ಲಿ ಲೋಭಿಯಾಗಿರಬೇಕು.

ಕೇವಲ ತಲೆ ಬೋಳಿಸಿಕೊಂಡು ಕಾವಿಲಾಂಛನ ಹಾಕಿಕೊಂಡ ವೇಷಧಾರಿ ಜಂಗಮನಲ್ಲ, ಆಚಾರ ಭ್ರಷ್ಟ ಅನಾಚಾರಿ ಜಂಗಮನಲ್ಲ. ವಿಷಯಗಳಲ್ಲಿ ಬಿದ್ದು ಬಳಲುವ ಅಹಂಕಾರಿ ಜಂಗಮನಲ್ಲ. ಶಿವಯೋಗೀಶ್ವರನ ನಿಲುವನರಿಯದೆ ಮಿಥ್ಯವ ನುಡಿದು ಸ್ತುತಿ - ನಿಂದೆ ಮಾಡುವಾತ ಜಂಗಮನಲ್ಲ, ನೀತಿ ನಿಜಾಚಾರ ಬಿಟ್ಟವನು ಜಂಗಮನಲ್ಲ. ಸುಳುಹಿನ ಸೂತಕ ಮೈದೋರದೆ, ಒಡಲ ಕಳವಳದ ರುಚಿಗೆ ಹಾರೈಸದೆ, ಅರಿವೇ ಅಂಗವಾಗಿ ಅಪ್ಯಾಯನವೇ ಭಕ್ತಿಯಾಗಿ, ಕಿಂಕುರ್ವಾಣವೆಂಬ ಶಿವ ಮಂತ್ರಕ್ಕೆ ನಮೋ ನಮೋ ಎನ್ನುವ ನಿರಂಜನ ಮೂರ್ತಿಯೇ ಜಂಗಮ; ಎಂಬುದಾಗಿ ಶರಣರು ತಮ್ಮ ವಚನಗಳಲ್ಲಿ ಜಂಗಮನಲ್ಲಿರಬೇಕಾದ ಗುಣಗಳನ್ನು ವಿವರಿಸಿ ಹೇಳಿದ್ದಾರೆ. ಆಗಮಕಾರರಿಗಿಂತಲೂ ಅಂತರಂಗದ ಪರಿಶುದ್ಧತೆಗೆ ಹೆಚ್ಚು ಮಹತ್ವ ಕೊಟ್ಟಿರುವುದು ಅವರ ವಚನಗಳಿಂದ ನಮಗೆ ತಿಳಿದು ಬರುತ್ತದೆ.

ಆಗಮದ ಪ್ರಮಾಣದಂತೆ ಜಂಗಮನು ನಿಸ್ವಾರ್ಥದಿಂದ ಬೇಡಬಹುದೇ ವಿನಃ ತನಗಾಗಿ, ಸ್ವಾರ್ಥಕ್ಕಾಗಿ ಬೇಡಬಾರದೆಂಬುದನ್ನು ತಿಳಿಯಬೇಕು. ಚರ ಜಂಗಮನು ಧರ್ಮೋಪದೇಶಕನಾಗಿ ಚರಿಸುವಾಗ ಅನಿವಾರ್ಯ ಪ್ರಸಂಗದಲ್ಲಿ ಭಿಕ್ಷಾನ್ನದಿಂದ ಜೀವಿಸಬಹುದು. ಆದರೆ ಭಿಕ್ಷೆಯನ್ನೇ ತನ್ನ ವೃತ್ತಿಯನ್ನಾಗಿ ಮಾಡಿಕೊಳ್ಳಬಾರದು. ಭಕ್ತರಿಂದ ಬಂದ ಹಣವನ್ನು ಜ್ಞಾನ ದಾಸೋಹಕ್ಕಾಗಿ ವ್ಯಯ ಮಾಡಬೇಕು. ಜಂಗಮನಿಗೆ ಮಾತಾಪಿತರಿಲ್ಲ, ಜಾತಿ ಬಂಧುಗಳಿಲ್ಲ, ನಾಮ ರೂಪಗಳಿಲ್ಲ, ಸೀಮೆ-ಸಂಗಗಳಿಲ್ಲ, ಕುಲ-ಗೋತ್ರಗಳಿಲ್ಲ, ಮಕ್ಕಳು-ಮರಿಯಂತೂ ಮೊದಲೇ ಇಲ್ಲವೆಂದು ಶರಣರು ಸಾರಿ ಹೇಳಿದ್ದಾರೆ. ಜಂಗಮ ಜಾತಿವಾಚಕ ಶಬ್ದವಾಗಿರದೆ, ತತ್ವವಾಚಕ ಶಬ್ದವೆಂಬುದು ಮೇಲಿನ ಅನೇಕ ದುರ್ದೈವದಿಂದ ಲಿಂಗಾಯತದ ಮೂಲವಾದ ಉದಾತ್ತ ತತ್ವಗಳು ಹ್ರಾಸವಾಗಿ ಇಂದು ಜಂಗಮವೂ ಒಂದು ಜಾತಿಯೆಂಬ ಭ್ರಾಮಕ ಕಲ್ಪನೆ ಅನೇಕ ಜನರಲ್ಲಿದೆ.

ಹುಟ್ಟುತ್ತಲೇ ಅಷ್ಟಾವರಣ ಸಮೇತನಾಗಿ ಕಾಷಾಯಾಂಬರನ್ನುಟ್ಟುಕೊಂಡು, ದಂಡ,

ಕಮಂಡಲಗಳನ್ನು ಧರಿಸಿಕೊಂಡು ಬಂದಿದ್ದರೆ, ಅಯ್ಯನವರ ಮಕ್ಕಳಿಗೆ ಜಂಗಮರೆಂದು ಅನ್ನಲು ಅಡ್ಡಿಯಿಲ್ಲ. ಆದರೆ ಅವರ ಮಕ್ಕಳಿಗೂ ಹುಟ್ಟಿದ ನಂತರವೇ ಲಿಂಗ ಕಟ್ಟುತ್ತಾರೆ. ಅಂದರೆ ಅದು ಭವಿಯಾಗಬೇಕು ತಾನೆ? ಜಂಗಮನಿಗೆ ಯಾರು ಲಿಂಗ ಕಟ್ಟಲಾರರು. ಲೋಕದ ಮಕ್ಕಳಂತೆ ಅವುಹುಟ್ಟುತ್ತವೆಂದಾಗ ಸಂಸ್ಕಾರದಿಂದ ಗುರುತ್ವ ಜಂಗಮತ್ವಗಳು ಬರುತವೆ. ಅವು ಹುಟ್ಟನಿಂದ ಬರಲಾರವು. ಮಾನವನು ಅರ್ಹತೆಯಿಂದ ಗುರುತ್ವ ಜಂಗಮತ್ವವನ್ನು ಪಡೆಯ ಬೇಕಾಗುವುದು.

ಜಂಗಮ ಶಬ್ದವನ್ನು ಜಾತಿವಾಚಕವಾಗಿ ಬಳಸುವುದು ಮಹಾ ಅಪರಾಧ; ಮೇಲೆ ಹೇಳಿದ ಲಕ್ಷಣಗಳುಳ್ಳ ಶರಣನಿಗೆ ಮಾತ್ರ ಜಂಗಮನೆಂದು ಮನ್ನಿಸಬೇಕೇ ವಿನಃ ಸಿಕ್ಕ ಸಿಕ್ಕವರಿಗೆ ಹೇಳಬಾರದು.

ಬಡತನಕ್ಕೆ ಉಂಬುವ ಚಿಂತೆ..!

ಶರಣ ಸಚ್ಚಿದಾನಂದ

ಬಡತನಕ್ಕೆ ಉಂಬುವ ಚಿಂತೆ; ಉಣಲಾದರೆ ಉಡುವ ಚಿಂತೆ,
ಉಡಲಾದರೆ ಇಡುವ ಚಿಂತೆ; ಇಡಲಾದರೆ ಹೆಂಡಿರ ಚಿಂತೆ,
ಹೆಂಡಿರಾದರೆ ಮಕ್ಕಳ ಚಿಂತೆ; ಮಕ್ಕಳಾದರೆ ಬದುಕಿನ ಚಿಂತೆ,
ಬದುಕಾದರೆ ಕೇಡಿನ ಚಿಂತೆ; ಕೇಡಾದರೆ ಮರಣದ ಚಿಂತೆ,
ಇಂತೀ ಹಲವು ಚಿಂತೆಯಲಿದ್ದವರ ಕಂಡೆನು,
ಶಿವ ಚಿಂತೆಯುಳ್ಳಾತರೊಬ್ಬರನೂ ಕಾಣೆನೆಂದಾತ
ಅಂಬಿಗರ ಚೌಡಯ್ಯ ನಿಜ ಶರಣನು.

ವಚನ ಸಾಹಿತ್ಯವು ಕನ್ನಡ ಸಾಹಿತ್ಯದ ಹೃದಯವೂ ಹೌದು, ಕೀರಿಟವೂ ಹೌದು. ಇದು ಒಂದು ಅಗಾಧವಾದ ಸಾಗರದಂತೆ ಇದರಲ್ಲಿರುವ ಅಮೂಲ್ಯವಾದ ಸಂಪತ್ತನ್ನು ವ್ಯಕ್ತಿಯು ತನ್ನ ಸಾಮರ್ಥ್ಯವಿದ್ದಷ್ಟೂ ಹೆಚ್ಚು ಪಡೆಯಬಹುದು. ಮರ್ತ್ಯಲೋಕದ ಬಾಳುವೆಯನ್ನು ಆಧ್ಯಾತ್ಮಿಕವಾಗಿ ಮತ್ತು ಲೌಕಿಕವಾಗಿ ಸುಂದರ, ಬಂಧುರಗೊಳಿಸಲಿಕ್ಕೆ ಅಮೂಲ್ಯವಾದ ಮೌಲ್ಯಗಳು, ಸಲಹೆಗಳು ವಚನ ಸಾಹಿತ್ಯದಲ್ಲಿ ವಿಪುಲವಾಗಿ ದೊರಕುತವೆ. ಶರಣರು ತಮ್ಮ ಅಂತರಂಗದ ಅನುಭಾವವನ್ನು ವಚನಗಳ ರೂಪದಲ್ಲಿ ಬರೆದಿಟ್ಟಿದ್ದಾರೆ. ಆ ಅನುಭಾವ ತರಂಗದ ಪ್ರತಿಯೊಂದು ಅಲೆ ಅಲೆಯು ನಮ್ಮ ಇಹಲೋಕದ ಬದುಕನ್ನು ದೈವೀಕರಿಸುತ್ತದೆ. ವಚನಗಳ ಸಾಲಿನ ಪ್ರತಿಯೊಂದು ಶಬ್ದವೂ ನಮ್ಮ ಲೌಕಿಕ ಮತ್ತು ಆಧ್ಯಾತ್ಮಿಕ (ಪಾರಮಾರ್ಥಿಕ) ಬದುಕನ್ನು ಏಕಕಾಲಕ್ಕೆ ಎತ್ತಿ ಹಿಡಿಯುತ್ತದೆ. ವಚನಗಳನ್ನು ಹಲವಾರು ದೃಷ್ಟಿಕೋನದಿಂದ ನೋಡಿದಾಗ ಅವು ಹಲವಾರು ಅರ್ಥವನ್ನು ಬಿಂಬಿಸುತವೆ.

ಇಲ್ಲಿ ತತ್ವ ನಿಷ್ಠುರಿ ಶರಣ ಅಂಬಿಗರ ಚೌಡಯ್ಯನವರ ಇಂಥ ಒಂದು ವಚನ ವಿಶ್ಲೇಷಣೆ ಮಾಡಲಾಗಿದೆ. ಈ ವಚನಕ್ಕೂ ಎರಡು ಮುಖಗಳಿವೆ. ಒಂದು ಪರಮಾರ್ಥಿಕ ಜೀವನವನ್ನು ದೈವೀಕರಿಸಿಕೊಳ್ಳಲಿಕ್ಕೆ ಉದ್ದೇಶಿಸಿದರೆ, ಇನ್ನೊಂದು ಮುಖ ಏಕಕಾಲಕ್ಕೆ ಲೌಕಿಕ ಜೀವನವನ್ನು ಅಜ್ಞಾನರಹಿತವಾಗಿ ಸುಂದರಗೊಳಿಸಲಿಕ್ಕೆ ಉಪದೇಶ ಮಾಡುತದೆ.

ಈ ವಚನವು ಪಾರಮಾರ್ಥ ಜೀವನವನ್ನು ಹೇಗೆ ನಡೆಸಬೇಕು ಎನ್ನುವುದಕ್ಕೆ ಮಾರ್ಗದರ್ಶನ ಮಾಡುತ ಏಕಕಾಲಕ್ಕೆ ಇನ್ನೊಂದು ಅರ್ಥದಲ್ಲಿ ಲೌಕಿಕ ಜೀವನದಲ್ಲಿ ಕಷ್ಟಕಾರ್ಪಣ್ಯಗಳಿಂದ, ಬಡತನ, ದಾರಿದ್ರ್ಯಗಳಿಂದ, ಮೇಲೇಳಲಿಕ್ಕೆ ಸೂಚಿಸುತ್ತದಲ್ಲದೆ, ಚಿಂತೆಯ ಕ್ರಮವನ್ನು ಕಲಿಸಿಕೊಡುತ್ತದೆ. ಮೊದಲು ನಾವು ಈ ವಚನದ ಲೌಕಿಕ ಅರ್ಥವನ್ನು ನೋಡೋಣ.

ಬಡತನಕ್ಕೆ ಉಂಬುವ ಚಿಂತೆ, ಈ ಭೂಮಿಯ ಮೇಲೆ ಇರುವ ಪ್ರತಿಯೊಂದು ಜೀವಿಗೂ ಆಹಾರ ಬೇಕು. ಆಹಾರವಿಲ್ಲದೇ ಯಾರೂ ಬದುಕಲಿಕ್ಕೆ ಸಾಧ್ಯವೇ ಇಲ್ಲ. ವ್ಯಕ್ತಿಯು ಎಷ್ಟೇ ಬಡವನಿರಲಿ, ಶ್ರೀಮಂತನಿರಲಿ ಅವನು ಊಟ ಮಾಡಲೇಬೇಕು. ಊಟವಿಲ್ಲದಿದ್ದರೆ ಯಾವ ಕೆಲಸವೂ ವ್ಯಕ್ತಿಯಿಂದ ಮಾಡಲಿಕ್ಕಾಗದು. ಅಲ್ಲದೇ, ಒಬ್ಬ ವ್ಯಕ್ತಿಗೆ ಎಲ್ಲಿಯವರೆಗೆ ಉಂಬುವ ಚಿಂತೆ ಇರುತ್ತದೆಯೋ ಅಲ್ಲಿಯವರೆಗೆ ಅವನ ಚಿಂತೆ ಹೊಟ್ಟೆಯ ಸುತ ಮಾತ್ರ ಸುತ್ತುತ್ತಿರುತ್ತದೆ. ಹೀಗಾಗಿ ಅರಸನೇ ಆಗಲಿ, ಆಳೇ ಆಗಲಿ ಊಟದ ಚಿಂತೆ ಮಾಡಲೇ ಬೇಕು. ಆದರೆ, ನಮ್ಮ ದೇಶದ ಜನರಲ್ಲಿ ತುಂಬಿಕೊಂಡಿರುವ ಅಜ್ಞಾನವನ್ನು ನೋಡಿದಾಗ ಮನಸ್ಸಿಗೆ ಬಹಳ ನೋವಾಗುತ್ತದೆ.

ಅನೇಕ ಜನರಿಗೆ ಮನೆಯಲ್ಲಿ ಸರಿಯಾಗಿ ಊಟ ಸಿಗುವುದಿಲ್ಲ, ಹೆಂಡತಿ ಮಕ್ಕಳೂ ಉಪವಾಸವಿರುತ್ತಾರೆ. ಇಂಥ ಸಂದರ್ಭದಲ್ಲಿ ಮೊದಲ ಆದ್ಯತೆ ಊಟಕ್ಕೆ ಕೊಡಬೇಕು. ಆದರೆ ಅನೇಕರು ಊಟದ ಚಿಂತೆ ಮಾಡದೇ ಹೆಂಡದ ಚಿಂತೆ ಮಾಡುತ್ತಾರೆ. ನಾನೆಷ್ಟೋ ಸಲ ಇಂಥ ಘಟನೆಯನ್ನು ಪ್ರತ್ಯಕ್ಷವೂ ನೋಡಿದ್ದೇನೆ. ವ್ಯಕ್ತಿಯು ಸಾರಾಯಿಯ ದಾಸನಾದಾಗ ಅವನು ಊಟದ ಚಿಂತೆಯನ್ನೂ ಮಾಡದೆ ಹೆಂಡದ ಚಿಂತೆ ಮಾಡುತ್ತಾನೆ, ದುಷ್ಚಟಗಳ ಚಿಂತೆ ಮಾಡುತ್ತಾನೆ. ಉಪವಾಸವಿದ್ದರೂ ಮೊದಲು ತನ್ನ ಚಟಗಳನ್ನು ತೀರಿಸಿಕೊಳ್ಳುತ್ತಾನೆ. ಇಂಥದನ್ನು ನೋಡಿದಾಗ ಇಲ್ಲಿ ಅಂಬಿಗರ ಚೌಡಯ್ಯನವರು ಬಡತನದಲ್ಲಿದ್ದು ಊಟದ ಚಿಂತೆ ಮಾಡದೆ ಇನ್ನಾವುದೋ ಚಿಂತೆ ಮಾಡುವವರನ್ನು ಕಂಡು ಮೊದಲು ಊಟ ಚೆನ್ನಾಗಿ ಮಾಡಪ್ಪಾ. ನಿನ್ನನ್ನೇ ನಂಬಿರುವ ಹೆಂಡತಿ ಮಕ್ಕಳನ್ನು ಉಪವಾಸ ಇಡಬೇಡಪ್ಪಾ, ಎಂದು ಮಾರ್ಗದರ್ಶನ ಮಾಡುತ್ತಾರೆ. ಅದಕ್ಕಾಗಿ ಪ್ರತಿಯೊಬ್ಬ ಬಡವನೂ ಕೂಡ ಊಟಕ್ಕೇ ಕಷ್ಟ ಇರುವಾಗ, ಆಹಾರಕ್ಕಾಗಿ ಪ್ರಯತ್ನ ಮಾಡಬೇಕೆ ಹೊರತು ದುಶ್ಚಟ ದುರ್ಗುಣಗಳಿಗೆ ದಾಸನಾಗಬಾರದು.

ಒಬ್ಬ ವ್ಯಕ್ತಿ ಎಷ್ಟೇ ಪ್ರತಿಭಾವಂತನಾಗಿರಲಿ, ಎಷ್ಟೇ ಸಾಹಸಿಯಾಗಿರಲಿ ಅವನಿಗೆ ಸರಿಯಾಗಿ ಊಟ ಸಿಗದೇ ಹೋದರೆ ಅವನಿಂದ ತನ್ನ ಪ್ರತಿಭೆಯನ್ನು ವ್ಯಕ್ತ ಪಡಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕೆ ಜೇಡರ ದಾಸಿಮಯ್ಯನವರು ಒಂದು ವಚನದಲ್ಲಿ ಹೀಗೆ ಹೇಳಿದ್ದಾರೆ:

ಹಸಿವೆಂಬ ಹೆಬ್ಬಾವು ಬಸಿರ ಬಂದು ಹಿಡಿದಿರ್ದಡೆ
ವಿಷವೇರಿತಯ್ಯ ಅಪಾದ ಮಸ್ತಕಕ್ಕೆ
ಹಸಿವಿಗನ್ನವನಿಕ್ಕಿ ವಿಷವನಿಳುಹ ಬಲ್ಲಡೆ
ವಸುಧೆಯೊಳಾತನೇ ಗಾರುಡಿಗ ಕಾಣಾ ರಾಮನಾಥ

ಮನುಷ್ಯನ ಹೊಟ್ಟೆಯ ಚಿಂತೆ ಮುಗಿದ ಬಳಿಕ ಅವನ ಚಿಂತನ ಶಕ್ತಿ ವಿಸಾರವಾಗುತ್ತಾ ಹೋಗುತ್ತದೆ. ಆದಿ ಮಾನವನು ದಿನನಿತ್ಯ ಬೇಟೆಯಾಡಿ ಆಹಾರವನ್ನು ತಿನ್ನುತ್ತಿದ್ದ. ಆಗ ಅವನ ಶಕ್ತಿ ಸಾಮರ್ಥ್ಯವೆಲ್ಲವೂ ಕೇವಲ ಆಹಾರ ಹುಡುಕುವುದಕ್ಕಾಗಿಯೇ ವ್ಯಯವಾಗುತ್ತಿತ್ತು. ಕೃಷಿ ಪದ್ಧತಿ ಬೆಳದು ಆಹಾರಧಾನ್ಯಗಳನ್ನು ಸಂಗ್ರಹ ಮಾಡುವುದನ್ನು ಕಲಿತಾಗ ಅವನ ಚಿಂತನ ಶಕ್ತಿಯು ಬೇರೆ ವಿಷಯಗಳಿಗೆ ಹರಿದು ಎಷ್ಟೊಂದು ಆವಿಷ್ಕಾರಗಳು, ಸಂಶೋಧನನೆಗಳು, ಹೊಸ ಹೊಸ ತಂತ್ರಜ್ಞಾನ ಬೆಳೆಯಲು ಸಾಧ್ಯವಾಗಿದೆ. ಊಟವೇ ಸಿಗದ್ದಿದ್ದಾಗ ಸಾಲ ಮಾಡಿ ಬಟ್ಟೆ ತೆಗೆದುಕೊಳ್ಳುವುದರಲ್ಲಿ ಯಾವ ಅರ್ಥವಿದೆ? ಅದಕ್ಕಾಗಿ ಪ್ರತಿಯೊಬ್ಬರೂ ಮೊದಲು ಉಂಬುವ ಚಿಂತೆ ಮಾಡಲೇಬೇಕು. ಹೀಗೆ ಈ ವಚನ ಚಿಂತೆಯ ಕ್ರಮವನ್ನು ಕಲಿಸುತ್ತದೆ.

'ಉಣಲಾದರೆ ಉಡುವ ಚಿಂತೆ.' ಅನ್ನ ಅರಿವೆ ಆಶ್ರಯ ಇವು ಮನುಷ್ಯನಿಗೆ ಬೇಕಾಗಿರುವ ಮೂಲಭೂತ ಅವಶ್ಯಕತೆಗಳು (Fundamental needs) ಇವುಗಳಿಲ್ಲದೆಯೇ ಯಾರೊಬ್ಬರೂ ಬದುಕಲಿಕ್ಕೆ ಸಾಧ್ಯವಾಗುವುದಿಲ್ಲ. ಅದಕ್ಕಾಗಿ ಉಂಬುವ ಚಿಂತೆಯಾದ ಮೇಲೆ ಪ್ರತಿಯೊಬ್ಬರೂ ಉಡುವ ಅರ್ಥಾತ್ ಬಟ್ಟೆಯ ಚಿಂತೆ ಮಾಡಲೇಬೇಕು.

ಅನೇಕರಿಗೆ ತುಂಬಾ ಬಡತನವಿರುತ್ತದೆ. ತಮ್ಮ ಮೈಮೇಲೆ ಸರಿಯಾದ ಬಟ್ಟೆಗಳಿರುವುದಿಲ್ಲ. ತಮ್ಮ ಹೆಂಡತಿ ಮಕ್ಕಳ ಮೈಮೇಲೆ ಸರಿಯಾದ ಬಟ್ಟೆಗಳಿರುವುದಿಲ್ಲ. ಆದರೆ ತಾವು ಮಾತ್ರ ಜೂಡಾಡುವುದು ಲಾಟರಿ ಆಡುವುದು. ಇಂಥ ಕೆಲಸಗಳನ್ನು ಮಾಡಿ ಇನ್ನಷ್ಟು ಬಡತನವನ್ನೇ ತಂದುಕೊಳ್ಳುತ್ತಾರೆ. ಅನೇಕ ಜನರು ತಮಗೆ ಇರುವ ಬಡತನಕ್ಕಿಂತ ತಂದುಕೊಂಡ ಬಡತನವೇ ಹೆಚ್ಚು. ತಮಗಿರುವ ಬಡತನವನ್ನು ನೀಗಿಸಿಕೊಳ್ಳಲಿಕ್ಕೆ ಚೆನ್ನಾಗಿ ದುಡಿದು ಸುಖವಾಗಿ ಬದುಕು ಎಂದು ಪರಮಾತ್ಮನು ದುಡಿಯುವ ಸಾಮರ್ಥ್ಯವನ್ನು ಕೊಟ್ಟಿದ್ದಾನೆ. ಆದರೆ ಅನೇಕರು ಅಜ್ಞಾನದಿಂದ ತಮ್ಮ ಸಾಮರ್ಥ್ಯದ ದುರುಪಯೋಗ ಮಾಡಿಕೊಂಡು ಇನ್ನಷ್ಟು ಮತ್ತಷ್ಟು ಕಷ್ಟಕಾರ್ಪಣ್ಯಗಳಿಗೆ ಎಡೆ ಮಾಡಿಕೊಟ್ಟು ಕೊನೆಗೊಂದು ದಿನ ಅವರ ಇಡೀ ಕುಟುಂಬವೇ ಆತ್ಮಹತ್ಯೆಯಲ್ಲಿ ನಿರ್ನಾಮವಾಗುವ ಅನೇಕ ಸನ್ನಿವೇಶಗಳಿವೆ. ಅದಕ್ಕಾಗಿ ಬಡತನದಲ್ಲಿರುವ ವ್ಯಕ್ತಿಯು ಉಣಲಾದರೆ ಉಡುವ ಚಿಂತೆ ಮಾಡುವುದು ಅತೀ ಅವಶ್ಯಕವಾಗಿದೆ. ಇದನ್ನು ನೋಡಿದಾಗ ನಮ್ಮ ಶರಣರ ಚಿಂತನೆಯು ವಿಸ್ತಾರವನ್ನು

ಕಂಡು ಆಶ್ಚರ್ಯವೆನಿಸುತ್ತದೆ.

'ಉಡಲಾದರೆ ಇಡುವ ಚಿಂತೆ' ಪ್ರತಿಯೊಬ್ಬರು ಸ್ವಲ್ಪ ಹಣವಾವನ್ನಾದರೂ ಉಳಿತಾಯ ಮಾಡಬೇಕು. ಯಾವುದೋ ಒಂದು ಸಂದರ್ಭದಲ್ಲಿ ಅದು ಉಪಯುಕ್ತವಾಗುತ್ತದೆ. ಆದರೆ ಆ ಹಣವನ್ನು ಲೋಭಿಯಾಗಿ ಉಳಿಸಬಾರದು, ಮುಂದಾಲೋಚನೆಯನ್ನಿಟ್ಟುಕೊಂಡು ಉಳಿಸಬೇಕು. ಅಂತಹ ಹಣ ಶರಣಮೇಳ, ಕಲ್ಯಾಣ ಪರ್ವ ಗಳಂತಹ ಕಾರ್ಯಕ್ರಮದಲ್ಲಿ ದಾಸೋಹದ ವಿನಿಯೋಗಕ್ಕೆ ಬರುತ್ತದೆ. ಬಡಬಗ್ಗರಿಗೆ ಕಿಂಚಿತ್ತು ಸಹಾಯ ಮಾಡಲಿಕ್ಕಾಗುತ್ತದೆ. ಹಣವು ಪೂಜ್ಯ ವಸ್ತುವೂ ಅಲ್ಲ, ತ್ಯಾಜ್ಯ ವಸ್ತುವೂ ಅಲ್ಲ, ಅದು ಭೋಜ್ಯ ವಸ್ತು ಎನ್ನುವ ಒಂದು ಮಾತಿದೆ. ಹಣ ಹೆಚ್ಚು ಇದ್ದಾಗ ಅದನ್ನು ಭೋಗ ಜೀವನಕ್ಕಾಗಿ ಭೋಗದ ವಸ್ತುಗಳಿಗೆ ಖರ್ಚು ಮಾಡದೆ ಉಳಿಸಿದರೆ ಒಳ್ಳೆ ಕಾರ್ಯಗಳಿಗೆ ಉಪಯೋಗವಾಗುತ್ತದೆ. ಲಿಂಗಾಯತ ಧರ್ಮದಲ್ಲಿ (ಶರಣರ ಸಿದ್ಧಾಂತದಲ್ಲಿ) ತನುದಾಸೋಹ, ಮನದಾಸೋಹ, ಧನದಾಸೋಹ ಎನ್ನುವ ತ್ರಿವಿಧ ದಾಸೋಹಗಳು ಬರುತ್ತವೆ. ಒಬ್ಬ ವ್ಯಕ್ತಿ ಕೇವಲ ತನು ಮನ ದಾಸೋಹವನ್ನು ಮಾಡಿದರೆ ಸಾಲದು, ಧರ್ಮದ ಏಳಿಗೆಗಾಗಿ ಅವನು ಧನವನ್ನು ದಾಸೋಹ ಮಡಬೇಕಾಗುತ್ತದೆ. ಹಾಗೆ ಧನ ದಾಸೋಹ ಮಾಡಬೇಕಾದರೆ ಅವನು ಆ ಧನವನ್ನು ಭೋಗ ಜೀವನಕ್ಕೆ ಬಳಸದೇ ಅದನ್ನು ಉಳಿಸಿ ದಾಸೋಹ ಮಾಡಬೇಕಾಗುತ್ತದೆ. ಆದಕ್ಕಾಗಿ ಪ್ರತಿಯೊಬ್ಬರು ಒಂದು ಮಿತಿಯಲ್ಲಿ ಧನವನ್ನು ಉಳಿಸಲೇಬೇಕು ಅರ್ಥಾತ್ ಉಡಲಾದರೆ ಇಡುವ ಚಿಂತೆಯನ್ನು ಮಾಡಲೇಬೇಕಾಗುತ್ತದೆ. ಹೀಗೆ ಇಲ್ಲಿ ಶರಣರು ತುಂಬಾ ಲೋಭಿಯಾಗಿ ಹಣವನ್ನು ಇಡುವ ಚಿಂತೆಯಲ್ಲಿಯೇ ಕಾಲ ಕಳೆದು ಪರಮಾತ್ಮನನ್ನು ಮರೆಯಬೇಡ ಎಂದು ಹೇಳಿ ತಾನು ಪಾರಮಾರ್ಥ ಬದುಕನ್ನು ನಡೆಸಬೇಕು ಎಂದು ಹೇಳುತ್ತಾ, ಏಕಕಾಲಕ್ಕೆ ಮತ್ತೆ ಹಣವನ್ನು ಇಡುವ ಚಿಂತೆ ಮಾಡು ಏಕೆಂದರೆ ಅದು ಜಂಗಮ ದಾಸೋಹಕ್ಕೆ, ನಿನ್ನ ಕಷ್ಟಕಾರ್ಪಣ್ಯಗಳಿಗೆ ಬೇಕಾಗುತ್ತದೆ ಎಂದು ಹೇಳಿ ತಿಳಿಸುತ್ತಾ ಪಾರಮಾರ್ಥ ಮತ್ತು ಲೌಕಿಕ ಜೀವನವನ್ನು ಎತ್ತಿ ಹಿಡಿಯುವ ಬಗೆಯನ್ನು ತಿಳಿಸಿಕೊಡುತ್ತಾರೆ. ಉಡಲಾದರೆ ಇಡುವ ಚಿಂತೆ ಎನ್ನುವುದನ್ನು 'ಉಡಲಾದರೆ ಇರುವ ಚಿಂತೆ' ಎಂದೂ ಕೂಡ ಈ ಸಾಲನ್ನು ಬಳಸಬಹುದು. ಏಕೆಂದರೆ ಇಂದಿನ ಕಾಲದಲ್ಲಿ ಸ್ವಂತ ಮನೆಯನ್ನು ಕಟ್ಟುವುದಂತೂ ಬಹುದೊಡ್ಡ ಮಾತೇ ಸರಿ. ಈ ಮೂರು ಚಿಂತೆಗಳು ಮಾಡಲು ಅರ್ಹವಾದವು, ಉಂಬುವ, ಉಡುವ ಮತ್ತು ಇಡುವ/ಇರುವ ಚಿಂತೆಗಳು. ಇಷ್ಟಾದ ಮೇಲೆ ವ್ಯಕ್ತಿಯ ಚಿಂತನೆಯ ದಿಶೆ ವಿಸ್ತಾರವಾಗುತ್ತದೆ.

'ಇಡಲಾದರೆ / ಇರಲಾರದೆ ಹೆಂಡಿರ ಚಿಂತೆ.' ಈವಚನದ ಸಾಲಿನಲ್ಲಿ ಅಡಗಿರುವ ಒಂದು ಅದ್ಭುತವಾದ ಸತ್ಯವನ್ನು ನೋಡಿ ನನಗೆ ಬಹಳ ಆಶ್ಚರ್ಯವಾಗಿದೆ. ಇಲ್ಲಿ ಶರಣ ಅಂಬಿಗರ ಚೌಡಯ್ಯನವರು ಒಂದು ಸಿದ್ಧಾಂತವನ್ನು ಹೇಳುತ್ತಿದ್ದಾರೆ. ವಯಸ್ಸಿಗೆ ಬಂದ ಮಗನಿಗೆ/ಮಗಳಿಗೆ ತಂದೆ-ತಾಯಿಯರು ಒಂದು ಹೆಣ್ಣು/ಗಂಡು ನೋಡಿ ಮದುವೆ ಮಾಡುವುದಂತೂ ಸಹಜ. ಆದರೆ ಇಡಲಾದರೆ ಹೆಂಡಿರ ಚಿಂತೆ ಎನ್ನುವ ಮಾತಿನಲ್ಲಿ ಅಡಗಿರುವ ಅದ್ಭುತವಾದ ಸತ್ಯವೇನೆಂದರೆ ವ್ಯಕ್ತಿಗೆ ದುಡಿಯುವ ಸಾಮರ್ಥ್ಯ ಬಂದ ಮೇಲೆ ಮದುವೆ ಮಾಡಬೇಕು ಅಂದಾಗ ಮಾತ್ರ ಮುಂದೆ ಅವನ ಜೀವನ ರಣರಂಗವಾಗದೇ ರಸರಂಗವಾಗುತ್ತದೆ. ನಾವು ಹಳ್ಳಿಗಳಲ್ಲಿ ಅನೇಕ ಕಡೆ ನೋಡುತ್ತಿದ್ದೇವೆ, 20-22 ವಯಸ್ಸಾದರೆ ಸಾಕು ಹುಡುಗನಿಗೆ ಮದುವೆ ಮಾಡಿಬಿಡುತ್ತಾರೆ. ಅವನಿಗೆ ಇನ್ನು ತನ್ನ ಕಾಲ ಮೇಲೆ ತಾನು ನಿಲ್ಲುವ ಸಾಮರ್ಥ್ಯವೇ ಬಂದಿರುವುದಿಲ್ಲ. ಅವನಿಗೆ ಒಂದು ಸಂಸಾರವನ್ನು ನಿರ್ವಹಣೆ ಮಾಡುವಷ್ಟು ತಿಳುವಳಿಕೆಯೂ ಬಂದಿರುವುದಿಲ್ಲ. ಅಂಥದರಲ್ಲಿ ಮದುವೆ ಮಾಡಿದಾಗ ಸಂಸಾರ ವಿರಸದಲ್ಲಿ ಪರ್ಯಾವಸನವಾಗುವುದನ್ನು ಕಾಣುತ್ತೇವೆ. ಉದ್ಯೋಗಂ ಪುರುಷ ಲಕ್ಷಣಂ ಎನ್ನುವಂತೆ ತನಗೆ ಚನ್ನಾಗಿ ದುಡಿಯುವ ಸಾಮರ್ಥ್ಯವಿದ್ದು, ಅರ್ಥಾತ್ ಅವನು ನಿರುದ್ಯೋಗಿಯಾಗಿರದೆ ಉದ್ಯೋಗಿಯಾಗಿರಬೇಕು. ಅಂದಾಗ ಮಾತ್ರ ಮುಂದೆ ತನ್ನ ಮಕ್ಕಳಿಗೆ ಸಾಕಲು ಮೂಲಭೂತ ಸೌಕರ್ಯ ಒದಗಿಸಲು ಮತ್ತು ಒಳ್ಳೆಯ ಶಿಕ್ಷಣ ಕೊಡಲು ಸಾಧ್ಯವಾಗಿ ಅವನು ಒಂದು ಸುಂದರ ಸಂಸಾರ ನಿರ್ಮಿಸಿಕೊಳ್ಳಲು ಸಾಧ್ಯವಾಗುತ್ತದೆ. ಇಂದಿನ ಕಾಲದಲ್ಲಿಯೂ ಕೂಡ ನಾವು ಅನೇಕ ಕಡೆ ಹೆಣ್ಣು ಮಕ್ಕಳೇ ದುಡಿದು ತಮ್ಮ ಗಂಡಂದಿರನ್ನು ಹಾಗೂ ಮಕ್ಕಳನ್ನು ಸಾಕುವಂತ ಅನೇಕ ಸನ್ನಿವೇಶಗಳನ್ನು ಕಾಣುತ್ತೇವೆ. ಇದು ಕಾಯಕ ಮಾಡದೇ ಮೈಗಳ್ಳನಾಗಿ ಕುಳಿತು ಉಣ್ಣುವ ಗಂಡನಿಗೆ ನಾಚಿಕೆ ತರುವಂಥ

ವಿಷಯ ಅದಕ್ಕಾಗಿ ಇಲ್ಲಿ ಪೋಷಕರು ಕೂಡ ಗಮನ ಕೊಡುವಂಥ ವಿಷಯವೇನೆಂದರೆ ತಮ್ಮಲ್ಲಿ ಎಷ್ಟೇ ಸಂಪತ್ತಿದ್ದರೂ ತಮ್ಮ ಮಕ್ಕಳು ದುಡಿಯಲು ಸಮರ್ಥರಾದ ಮೇಲೆಯೇ ಅವರಿಗೆ ಮದುವೆ ಮಾಡಬೇಕು.

ಬೆಚ್ಚನೆಯ ಮನೆಯಾಗಿ । ವೆಚ್ಚಕ್ಕೆ ಹೊನ್ನಾಗಿ
ಇಚ್ಛೆಯನರಿದು ನಡೆವ ಸತಿಯಾಗಿರೆ ॥ ಸ್ವರ್ಗಕ್ಕೆ
ಕಿಚ್ಚು ಹಚ್ಚೆಂದ ಸರ್ವಜ್ಞ ॥

ನೋಡಿ ಸರ್ವಜ್ಞನ ವಚನ ಎಷ್ಟು ಕ್ರಮ ಬದ್ಧವಾಗಿದೆ. ಬೆಚ್ಚನೆಯ ಮನೆ ಮತ್ತು ವೆಚ್ಚಕ್ಕೆ ಹೊನ್ನಾದ ಮೇಲೆಯೇ ಇಚ್ಛೆಯನರಿದು ನಡೆವ ಸತಿ ಬಂದಾಗ ಸಂಸಾರ ಸ್ವರ್ಗವನ್ನು ತಿರಸ್ಕರಿಸುವಷ್ಟು ಸುಖಮಯವಾಗುತ್ತದೆ ಎನ್ನುತ್ತಾರೆ.

'ಹೆಂಡಿರಾದರೆ ಮಕ್ಕಳ ಚಿಂತೆ,' ತಂದೆ ತಾಯಿಗಳಾದವರು ತಮ್ಮ ಮಕ್ಕಳನ್ನು ಸನ್ಮಾರ್ಗದಲ್ಲಿ ನಡೆಸುವುದು, ಧರ್ಮ ಮಾರ್ಗದಲ್ಲಿ ನಡೆಸುವುದು ಅವರ ಕರ್ತವ್ಯವಾಗಿರುತ್ತದೆ. ಒಂದು ವೇಳೆ ಮಕ್ಕಳ ಚಿಂತೆ ಮಾಡದಿದ್ದರೆ ಅರ್ಥಾತ್ ಮಕ್ಕಳ ಬಗ್ಗೆ ಕಾಳಜಿ ವಹಿಸದಿದ್ದರೆ, ಮಕ್ಕಳು ಅಧರ್ಮಿಗಳಾಗುತ್ತಾರೆ. ಧರ್ಮವಂತರಾದವರ ಅನೇಕ ಮಕ್ಕಳು ಅಧರ್ಮಿಗಳಾಗಿ, ದುಶ್ಚಟಗಳಿಗೆ ಬಲಿಯಾಗಿ ಹಾಳಾಗಿರುವುದನ್ನು ಕಾಣುತ್ತೇವೆ. ಮಕ್ಕಳನ್ನು ಚಿಕ್ಕವರಿರುವಾಗಲೇ ತಿದ್ದುತ್ತಾ ಹೋಗಬೇಕು. ಮಕ್ಕಳು ಚಿಕ್ಕರಿರುವಾಗ ಮಾತ್ರ ಅತಿ ಹೆಚ್ಚು ಸಮಯವನ್ನು ತಂದೆ-ತಾಯಿಯರೊಂದಿಗೆ ಕಳೆಯುತ್ತಾರೆ. ದೊಡ್ಡವರಾಗುತ್ತಾ ಹೋದಂತೆ ತಾಯಿ ತಂದೆಯರೊಂದಿಗೆ ಒಡನಾಡುವುದು ಕಡಿಮೆಯಾಗುತ್ತದೆ. ಶಾಲೆ ಕಾಲೇಜುಗಳಲ್ಲಿ ತಮ ಗೆಳೆಯರ ಜೊತೆ ಕಾಲ ಕಳೆಯುತ್ತಾರೆ. ಆಗ ಅವರಿಗೆ ಎಂಥವರ ಸಹವಾಸ ಸಿಗುತ್ತದೆಯೋ ಹಾಗೆ ಆಗುತ್ತಾರೆ. ಅದೇ ಒಂದು ವೇಳೆ ಮಕ್ಕಳು ಚಿಕ್ಕವರಿರುವಾಗ ಅವರಲ್ಲಿ ದೇವರು ಧರ್ಮದ ಬಗ್ಗೆ ಸನ್ನಡತೆಯ ಬಗ್ಗೆ, ನೀತಿವಂತಿಕೆಯ ಭದ್ರ ಬುನಾದಿ ಹಾಕಿದಾಗ ಅವರು ಎಲ್ಲಿಯೇ ಹೋದರೂ ತಿನ್ನತನವನ್ನು ಇತರರಿಗೆ ಕಲಿಸುತ್ತಾರೆಯೇ ಹೊರತು ಇತರರಿಂದ ಕೆಟ್ಟ ಗುಣಗಳನ್ನು ಕಲಿಯುವುದಿಲ್ಲ. ಮಕ್ಕಳು ಚಿಕ್ಕವರಿರುವಾಗ ಕೈ ಬಿಟ್ಟು, ದೊಡ್ಡವರಾದ ಮೇಲೆ ಅವರು ಮಾಡುವ ಕೃತ್ಯಗಳನ್ನು ನೋಡಿ ಗೋಳಾಡಿದರೆ ಯಾವ ಪ್ರಯೋಜನವೂ ಆಗುವುದಿಲ್ಲ. ಅದಕ್ಕಾಗಿ ಪ್ರತಿಯೊಬ್ಬರು ತಮ್ಮ ಮಕ್ಕಳ ಬಗ್ಗೆ ಚಿಂತೆ ಮಾಡಬೇಕು ಅರ್ಥಾತ್ ಅವರ ಬಗ್ಗೆ ಕಾಳಜಿ ಮಾಡಲೇಬೇಕು. ಅವರನ್ನು ಧರ್ಮದ ಅನುಯಾಯಿಗಳಾಗಿ ಮಾಡಬೇಕು. ತತ್ವ ನಿಷ್ಠರನ್ನಾಗಿ ರೂಪಿಸಬೇಕು. ಅವರು ಎಂಥದ್ದೇ ಸಂದರ್ಭದಲ್ಲೂ ಕೂಡ ತನ್ನ ಧರ್ಮಕ್ಕೆ ಸಲ್ಲದ, ಧರ್ಮಕ್ಕೆ ವಿರುದ್ಧವಾದ ಚಟುವಟಿಕೆಗಳನ್ನು ಮಾಡದಂತೆ ರೂಪಿಸುವುದು ತಂದೆ ತಾಯಿಗಳ ಕರ್ತವ್ಯವಾಗಿದೆ. ಕೇವಲ ಸಂಪತ್ತು ಮಾತ್ರ ಕೊಡದೇ ಒಳ್ಳೆಯ ಸಂಸ್ಕಾರ ಕೊಡುವುದು ನಿಜವಾದ ತಾಯಿ-ತಂದೆಯರ ಕರ್ತವ್ಯವಾಗಿದೆ. ಏಕೆಂದರೆ ಮನೆಯೇ ಮೊದಲ ಪಾಠಶಾಲೆ ತಂದೆ ತಾಯಿಯರೇ ಮೊದಲ ಗುರುವಲ್ಲವೇ.

'ಮಕ್ಕಳಾದರೆ ಬದುಕಿನ ಚಿಂತೆ.' ಪ್ರತಿಯೊಬ್ಬರೂ ತಮ್ಮ ಬದುಕಿನ ಚಿಂತೆ ಮಾಡಲೇಬೇಕು ಅರ್ಥಾತ್ ಸಂಸಾರದ ಜವಾಬ್ದಾರಿಯನ್ನು ಹೊರಲೇಬೇಕು. ಸಂಸಾರವನ್ನು ಬಿಟ್ಟು ಹೋಗಿ ಬೇಜವಾಬ್ದಾರಿಯಾಗಿ ವರ್ತಿಸುವುದು ಬಸವ ಧರ್ಮದ ಸಿದ್ಧಾಂತದಲ್ಲಿ ಇಲ್ಲವೇ ಇಲ್ಲ. ಮರ್ತ್ಯಲೋಕದಲ್ಲಿ ಕರ್ತನು ಮೆಚ್ಚುವಂತೆ ಬದುಕಬೇಕು. ಯಾವುದೇ ಕಷ್ಟದ ಪ್ರಸಂಗದಲ್ಲಿ ಬದುಕಿ ತೋರಿಸಬೇಕೆ ಹೊರತು ಆತ್ಮಹತ್ಯೆಮಾಡಿಕೊಳ್ಳುವಂಥ ಹೇಡಿ ಕೆಲಸಕ್ಕೆ ಕೈ ಹಾಕಬಾರದು.

ಬದುಕಾದರೆ ಕೇಡಿನ ಚಿಂತೆ ತಮ್ಮ ಬದುಕಿಗೆ ಯಾವುದೇ ಕೇಡು ಬಂದು ತಗುಲದಂತೆ ನೋಡಿಕೊಳ್ಳಬೇಕು. ತ್ರಾಟಕ ಯೋಗ ಧ್ಯಾನ ಮಾಡಿ, ಉತ್ತಮ ಆರೋಗ್ಯ ಕಾಪಾಡಿಕೊಂಡರೆ ಅದು ಒಂದು ರೀತಿಯಲ್ಲಿ ಹಣ ಗಳಿಸಿದಂತೆಯೇ. ಯಾವುದೇ ಆಸೆ ಆಮಿಷಗಳಿಗೆ ಬಲಿಯಾದರೆ ಕೇಡು ಬರುವುದು ಖಂಡಿತ. ಆದರೆ ವಯಸ್ಸಾಗುವುದರ ಬಗ್ಗೆ ಮರಣದ ಬಗ್ಗೆ ಯಾರು ಕೂಡ ಚಿಂತೆ ಮಾಡಬಾರದು. ಅದು ನಮ್ಮ ಕೈಯಲಿಲ್ಲ. ಪರಮಾತ್ಮನ ಕರೆ ಬಂದಾಗ ನಾನು ಈ ಮರ್ತ್ಯಲೋಕದ ಬಾಳುವೆಯನ್ನು ಅಂತರಾತ್ಮ ಮೆಚ್ಚುವಂತೆ ಬದುಕಿದ್ದೇನೆ ಎನ್ನುವ ಆತ್ಮ ವಿಶ್ವಾಸ ನಮ್ಮಲ್ಲಿ ಮೂಡಿ ಪರಮಾತ್ಮನನ್ನು ಅಪ್ಪಿಕೊಳ್ಳಲು ಕಾತುರರಾಗಬೇಕು. ಶರಣ ಡಿ.ವಿ. ಗುಂಡಪ್ಪನವರು ತಮ್ಮ ಮಂಕುತಿಮ್ಮನ ಕಗ್ಗದಲ್ಲಿ ಈ ರೀತಿ ಹೇಳುತ್ತಿದ್ದಾರೆ.

ಇರುವ ಕೆಲಸ ಮಾಡು ಕಿರಿದೆನ್ನದೆ ಮನವೆ।
ದೊರಕಿದುದ ಹಸಾದವೆಂದುಣ್ಣು ಗೊಣಗೊಡದೆ।
ಧರಿಸು ಲೋಕದ ಭರವ ಬಿಡದೆ ಪರಮಾರ್ಥವ।
ಹೊರಡು ಕರೆ ಬರಲು ಅಳದೇ ಮಂಕುತಿಮ್ಮ।

ಈ ರೀತಿ ನಾವು ಲೋಕದ ಭರವನ್ನು ಅರ್ಥಾತ್ ಲೌಕಿಕ ಜೀವನವನ್ನು ಪರಮಾರ್ಥ ಜೀವನದೊಂದಿಗೆ ನಡೆಸಿದಾಗ ಪರಮಾತ್ಮನ ಕರೆ ಬಂದಾಗ ದುಃಖವಾಗದೆ ಸಂತೋಷವಾಗುತ್ತದೆ.

ಈ ರೀತಿಯಾಗಿ ವೀರ ಗಣಾಚಾರಿ ತತ್ವನಿಷ್ಠುರಿ ಅಂಬಿಗರ ಚೌಡಯ್ಯನವರು ಏಕಕಾಲಕ್ಕೆ ಲೌಕಿಕ ಮತ್ತು ಆಧ್ಯಾತ್ಮಿಕ ಬದುಕನ್ನು ದೃವೀಕರಿಸಿಕೊಳ್ಳುವ ಬಗ್ಗೆ ಉಪದೇಶಿಸಿದ್ದಾರೆ. ನಾವು ಕೇವಲ ಲೌಕಿಕ ಜೀವನದಲ್ಲಿ ಮುಳುಗದೇ ಒಂದು ಹಂತದಲ್ಲಾದರೂ ಪರಮಾರ್ಥ ಜೀವನಕ್ಕೆ ಒಲಿಯಬೇಕು, ಆಧ್ಯಾತ್ಮಿಕ ಜೀವನ ನಡೆಸಬೇಕು. ಸದಾ ಪರಮಾತ್ಮನ ಸ್ಮರಣೆ, ಪೂಜೆ ಧ್ಯಾನ ಪ್ರಾರ್ಥನೆಗಳನ್ನು ಮಾಡುತ್ತಾ ಜೀವನವನ್ನು ಸಾರ್ಥಕಪಡಿಸಿಕೊಳ್ಳಬೇಕು.

ಅಂಥ ಒಂದು ಪಾರಮಾರ್ಥಿಕ ಜೀವನಕ್ಕೆ ಮಾರ್ಗದರ್ಶನವನ್ನೂ ಈ ವಚನದ ಇನ್ನೊಂದು ಮುಖ ತಿಳಿಸುತ್ತದೆ. ಅದನ್ನು ಮುಂದಿನ ಸಂಚಿಕೆಯಲ್ಲಿ ನೋಡೋಣ.

(.....ಮುಂದುವರೆಯುವುದು)

ಲಿಂಗಾಯತ ಧರ್ಮದರ್ಶಿಗಳಲ್ಲಿ ವಿನಮ್ರ ಮನವಿ

ಶರಣ ಧರ್ಮದ ಅನುಯಾಯಿಗಳು ಅನ್ಯ ಧರ್ಮದತ್ತ ವಾಲುತ್ತಿರುವ ದುರಂತ

ಹನ್ನೆರಡನೆಯ ಶತಮಾನದ ಪರಿಸರದಲ್ಲಿ ರೇವಣ ಸಿದ್ಧರೆಂಬ ಮಹಾ ಶರಣರು, ಶರಣ ಬಳಗದಲ್ಲಿ ಅತ್ಯಂತ ಪ್ರಭಾವ ಬೀರಿದವರು. ಸೊಲ್ಲಾಪುರದ ಸಿದ್ಧರಾಮೇಶ್ವರರಂಥ ಮಹಾನುಭಾವರು ರೇವಣ ಸಿದ್ಧರ ಕಾರುಣ್ಯದಿಂದ ಜನ್ಮ ತಾಳಿದರು. ಇನ್ನೊಬ್ಬ ಶರಣರು ಮುಗ್ಧರು, ದೈವೀ ನಿಷ್ಠೆಯುಳ್ಳವರು ಕುರುಬ ಗೊಲ್ಲಾಳೇಶ್ವರರು ಶರಣರ ಪರಿಸರದಲ್ಲಿ ಬೆಳೆದು ಬಂದುದೊಂದು ವಿಶೇಷತೆ. ಈಗಲೂ ಕುರುಬ ಸಮುದಾಯದ ರೇವಣಸಿದ್ಧ, ಅಮ್ಮಗ ಸಿದ್ಧ, ಕರಿಸಿದ್ಧ, ಹೊಲಜಂತಿ, ಮಾಳಿಂಗರಾಯ ಇನ್ನೂ ಹಲವು ಸಿದ್ಧ ಪುರುಷರ ಸಮಾಧಿ ಗದ್ದುಗೆಗಳು ಪೂಜೆಗೊಳ್ಳುವಾಗ ಲಿಂಗದ ಚೌಕನ್ನು ಗದ್ದುಗೆಯ ಮೂರ್ತಿಗಳಿಗೆ ಧರಿಸಿ ರುದ್ರಾಕ್ಷಿ ಸರಗಳನ್ನು ಧರಿಸಿ ವಿಭೂತಿ ಇನ್ನಿತರ ಶರಣ ಸಂಸ್ಕಾರ ಹಾಗೂ ಧಾರ್ಮಿಕ ಪರಂಪರೆಯಿಂದ ಪೂಜಿಸುವದು ಉಂಟು. ಈಗಲೂ ಹಾಲು ಮತದ ಸಮುದಾಯ ತಮ್ಮ ಧಾರ್ಮಿಕ ಕಾರ್ಯಕ್ರಮಗಳಿಗೆ ಲಿಂಗಾಯತ ಮಠಾಧೀಶರನ್ನು ಅಹ್ವಾನಿಸುತ್ತಿದ್ದು. ದಿ.29-10-2006 ರಂದು ಕನಕ ಗುರು ಪೀಠದ ನೂತನ ಶ್ರೀಗಳ ಪಟ್ಟಾಭೀಷೇಕ ಕಾರ್ಯಕ್ರಮಕ್ಕೆ ಚಿತ್ರದುರ್ಗದ ಬೃಹನ್ ಮಠದ ಶ್ರೀಗಳು, ಗದುಗಿನ ತೋಂಟದಾರ್ಯ ಶ್ರೀಗಳು ಭಾಗವಹಿಸಿದ್ದು, ಹಾಗೂ ಇನ್ನೂ ಅನೇಕ ಲಿಂಗಾಯತ ಮಠಾಧೀಶರು ಆ ಸಮ್ಮೇಳನದಲ್ಲಿ ಭಾಗವಹಿಸಿದ್ದು ನೂತನ ಶ್ರೀಗಳು ತಮ್ಮ ಭಾಷಣದಲ್ಲಿ ಕನಕ ಗುರು ಪೀಠದ ಶಾಖೆಯ ಮಠಗಳನ್ನು ಉಡುಪಿ ಮತ್ತು ತಿರುಪತಿಯಲ್ಲಿ ಸ್ಥಾಪಿಸುವುದಾಗಿ ಹೇಳಿಕೆ ಕೊಟ್ಟಿದ್ದು ರೇವಣ ಸಿದ್ಧ, ಕುರುಬ ಗೊಲ್ಲಾಳೇಶ್ವರರ ಸ್ಮಾರಕಗಳತ್ತ ಅಲಕ್ಷ ಮಾಡಿದ್ದು ಸಮಾಜದ ಬೆಳವಣಿಗೆಗೆ ಅಷ್ಟು ಪೂರಕವಲ್ಲ. ಅಲ್ಲಿ ಉಪಸ್ಥಿತರಿದ್ದ ಲಿಂಗಾಯತ ಮಠಾಧೀಶರು ಏನು ಮಾರ್ಗದರ್ಶನ ಮಾಡಿದರೆಂಬುವದು, ಯಕ್ಷ ಪ್ರಶ್ನೆ? ಶತಮಾನಗಳಿಂದ ಬಸವ ತತ್ವ ಹಾಗೂ ಶರಣ ಸಂಸ್ಕೃತಿಯ ನೆರಳಿನಲ್ಲಿದ್ದ ಒಂದು ಬೃಹತ್ ಸಮಾಜವು ಈಗ ಅದನ್ನು ತೊರೆದು ವೈದಿಕ ಪದ್ಧತಿಯತ್ತ ವಾಲುತ್ತಿರುವುದು ದುರದೃಷ್ಟಕರವಾದ ಬೆಳವಣಿಗೆಯಾದುದರಿಂದ ನೂರಾರು ಜನರಿಗೆ ಲಿಂಗದೀಕ್ಷೆ ಕೊಟ್ಟು ಪ್ರಚಾರ ಪಡೆಯುವುದಕ್ಕಿಂತ ಈಗ ಲಕ್ಷಾಂತರ ಜನರಿಗೆ ಅವರ ಇತಿಹಾಸದ ಅರಿವನ್ನು ಮೂಡಿಸಿ ಅವರನ್ನು ಮತ್ತೆ ಬಸವ ತತ್ವ ಹಾಗೂ ಶರಣ ಸಂಸ್ಕೃತಿಯತ್ತ ತರುವ ಜವಾಬ್ದಾರಿ ಲಿಂಗಾಯತ ಮಠಾಧೀಶರ ಪವಿತ್ರ ಹಾಗೂ ಆದ್ಯ ಕರ್ತವ್ಯ ಆಗಬೇಕಾಗಿದೆ. ಈ ದಿಸೆಯಲ್ಲಿ ಧರ್ಮದ ಗುರುಗಳು ಈಗಾಗಿರುವ ಬೆಳವಣಿಯಿಂದಾದ ಅನಾಹುತವನ್ನು ಮರಳಿ ಸರಿ ಪಡಿಸುವ ಬಗ್ಗೆ ಉಪಾಯವನ್ನು ಕಂಡು ಕೊಳ್ಳಬೇಕಾಗಿ ವಿನಂತಿ.

- ಪೂಜ್ಯ ಶ್ರೀ ಬಸವ ಪ್ರಭು ಸ್ವಾಮಿಗಳು.
ಬಸವ ಗುರು ಕುಲ, ಬೆಳಗಾವಿ.

ಮಾತೆ ಮಹಾದೇವಿ ಟೀಕೆಗೆ ಮಾರುತ್ತರ

ಹುಬ್ಬಳ್ಳಿ-13, ಸಂಸ್ಕೃತಿ -ಸಂಸ್ಕಾರ ಮತ್ತು ಧರ್ಮ ಸಮತೋಲನವನ್ನು ಕಾಪಾಡಿಕೊಳ್ಳದೇ ತಮ್ಮ
ಸ್ವಾರ್ಥಪರ ಸಂಕುಚಿತ ಮನೋಭಾವದ ನೆಲೆಯಲ್ಲೆ ದಾರಿ ತಪ್ಪಿ, ಬಣ್ಣ ಬದಲಿಸಿ ನಡೆದವರ ಮಾತೆ
ಮಹಾದೇವಿಯೇ ವಿನಃ ಪಂಚಪೀಠಗಳಲ್ಲ ಎಂದು ಬಾಳೆ ಹೊನ್ನೂರ ರಂಭಾಪುರಿ ಪೀಠದ ಶ್ರೀ ಜಗದ್ಗುರು
ರೇಣುಕಾಚಾರ್ಯ ಭಗವತ್ಪಾದ ಮಹಾ ಸ್ವಾಮಿಗಳು ಸ್ಪಷ್ಟಪಡಿಸಿದ್ದಾರೆ.

ಇತ್ತೀಚೆಗೆ ಶಿವಮೊಗ್ಗದಲ್ಲಿ ಮಾತೆ ಮಹಾದೇವಿಯವರು ನೀಡಿದ ಸಮಾಜದ ದಾರಿ ತಪ್ಪಿಸುತ್ತಿರುವ
ಪಂಚಪೀಠಾಧೀಶ್ವರರು ಪತ್ರಿಕಾ ಹೇಳಿಕೆಗೆ ಪ್ರತಿಕ್ರಿಯಿಸುತ್ತಿರುವ ರಂಭಾಪುರಿ ಜಗದ್ಗುರು ಗಳು, ಶ್ರೀ
ಜಗದ್ಗುರು ರೇಣುಕಾಚಾರ್ಯಾದಿ ಪಂಚಾಚಾರ್ಯರು ಮತ್ತು ಪಂಚಪೀಠಗಳ ಕುರಿತು ಇಲ್ಲ ಸಲ್ಲದ
ಮಾತುಗಳನ್ನಾಡಿ ಅಖಂಡ ವೀರಶೈವ ಸಮಾಜದ ದಾರಿ ತಪ್ಪಿಸುತ್ತಿರುವ ಮಾತೆ ಮಹಾದೇವಿಯವರಂತಹ
ವೇಷಧಾರಿಗಳು ನಡೆಸಿರುವ ಸಮಾಜ ವಿರೋಧಿ ಚಟುವಟಿಕೆಗಳು ವಿಷಾದದ ಸಂಗತಿಯಾಗಿವೆ ಎಂದಿದ್ದಾರೆ.

ಸದಾ ಸ್ವಾರ್ಥದ ಗೂಡು ಕಟ್ಟಿಕೊಂಡೇ ಬಂದಿರುವ ಮಾತೆ ಮಹಾದೇವಿಯು ಸಮಾಜವನ್ನು
ಒಡೆಯುವ ಕುಬ್ಜ ಕೆಲಸಕ್ಕೆ ಕೈಹಾಕುತ್ತಲೇ ಇದ್ದಾರೆ. ವೀರಶೈವ ಧರ್ಮದ ಸಮಗ್ರತೆ, ವಿಶಾಲತೆ ಅರಿಯದೆ
ಮಾತೆ ಮಹಾದೇವಿಯಂತಹ ಸ್ವಾರ್ಥ ಸಾಧಕರಿಂದಲೇ ವೀರಶೈವ ಸಮಾಜ ಛಿದ್ರವಾಗಿ ಅಪಚಾರಕ್ಕೆ
ಒಳಗಾಗುತ್ತಿದೆ. ಎಂದು ಹೇಳಿದ್ದಾರೆ. ಧರ್ಮಸ್ಥಾನಗಳಿಗೆ ವಿರುದ್ಧವಾದ ಚಟುವಟಿಕೆಗಳಿಂದ ಸುತ್ತುವರೆದಿರುವ
ಮಾತೆ ಮಹಾದೇವಿಯವರು ಹೇಳಲು ಬೇರೆ ತತ್ತ - ಸಿದ್ಧಾಂತ- ವಿಚಾರಗಳಿಲ್ಲದೇ, ಘನ ಪರಂಪರೆ ಮತ್ತು
ಭಕ್ತ ಕೋಟಿಯ ಭಕ್ತಿ -ವಿಶ್ವಾಸ -ಬದ್ಧತೆಯ ನೆರಳಿನಲ್ಲಿ ಪೂಜ್ಯನೀಯ ಸ್ಥಾನದಲ್ಲಿರುವ ವೀರಶೈವ ಧರ್ಮ
ಸಂಸ್ಥಾಪಕರಾದ ಶ್ರೀ ಜಗದ್ಗುರು ಪಂಚಾಚಾರ್ಯರನ್ನು ಟೀಕಿಸುತ್ತಲೇ ಬಂದಿದ್ದಾರೆ.

ಬಸವಣ್ಣನವರ ಹೆಸರು ಹೇಳಿಕೊಂಡೇ ಬದುಕಿ- ಬೆಳೆದ, ಶರಣರ ಬದುಕು-ಬರಹ ಆಶಯಗಳಿಗೆ
ವಿರುದ್ಧವಾಗಿ ನಡೆದುಕೊಂಡದ್ದನ್ನು ಜನತೆ ಕಣ್ಣಾರೆ ಕಂಡು ತಿರಸ್ಕರಿಸಿದ್ದಾರೆ. ಸಮಸ್ತ ವೀರಶೈವರಿಗೆ, ಸಮಾಜದ
ಗಣ್ಯರಿಗೆ ಹಾಗೂ ಎಲ್ಲಾ ಸಂಘಟನೆಗಳಿಗೆ ಮಾತೆ ಮಹಾದೇವಿಯ ಪೊಳ್ಳು ಪ್ರಚಾರದ ಪ್ರಸಿದ್ಧಿ ಚಟುವಟಿಕೆಗಳ
ಸಂಪೂರ್ಣ ಪರಿಚಯವಿದ್ದು ಎಲ್ಲಿಯೂ ಭಕ್ತಗಣದ ಸ್ಪಂದನೆ ಇಲ್ಲದ್ದರಿಂದ ಭ್ರಮನಿರಸನಗೊಂಡಿರುವುದರಿಂದ
ಅವರ ಹೇಳಿಕೆಗಳಿಂದ ಸ್ಪಷ್ಟವಾಗುತ್ತಿದೆ ಎಂದು ರಂಭಾಪುರಿ ಜಗದ್ಗುರುಗಳು ಅಭಿಪ್ರಾಯಪಟ್ಟರು.

ಶರಣರ ವಚನಗಳನ್ನೇ ತಿದ್ದಿದರು : ಬಸವಣ್ಣನವರ 'ಕೂಡಲ ಸಂಗಮದೇವ ' ಪವಿತ್ರ
ವಚನಾಂಕಿತವನ್ನು ತಿದ್ದಿ 'ಲಿಂಗದೇವ' ಎಂದು ಬದಲಿಸುವ ಮೂಲಕ ಲಿಂಗಾಯತ ಸಮುದಾಯವನ್ನೇ ದಾರಿ
ತಪ್ಪಿಸಿದ ಮಹಾ ಸಾಧನೆ ಪಟ್ಟ ಮಾತೆ ಮಹಾದೇವಿಗಿದೆ. ಸದಾ ಒಂದಿಲ್ಲೊಂದು ಏನೋ ಹೊಸದನ್ನು ಪ್ರಚಾರ
ಮಾಡಲು ಹೋಗಿ ಸದಾಕಾಲ ಜನ ಮನಗಳಿಂದ ಧೂಷಣೆಗೆ ಒಳಗಾಗಿರುವ ಇವರು ಜನರನ್ನು ದಾರಿ
ತಪ್ಪಿಸಲು ಸದಾ ವ್ಯರ್ಥ ಪ್ರಯತ್ನಗಳನ್ನು ಮಾಡುತ್ತಲೇ ಬಂದಿದ್ದಾರೆ ಎಂದವರು ತಿಳಿಸಿದ್ದಾರೆ.

ಪಂಚಪೀಠಗಳಿಂದ ತಕ್ಕ ಪಾಠ : ಪಂಚಪೀಠಗಳ ಸಾತ್ವಿಕ ಗುಣ, ಸಭ್ಯತೆ, ಉದಾರತೆಗಳನ್ನೇ
ದೌರ್ಬಲ್ಯವೆಂದು ಭಾವಿಸಿದರೆ ಭವಿಷ್ಯದ ದಿನಗಳಲ್ಲಿ ವೇಷಧಾರಿಗಳಿಗೆ ತಕ್ಕ ಪಾಠ ಕಲಿಸುವುದು
ಅನಿವಾರ್ಯವಾಗುತ್ತದೆ. ಶ್ರೀ ಜಗದ್ಗುರು ರೇಣುಕಾದಿ ಪಂಚಾಚಾರ್ಯರು ವೀರಶೈವ ಧರ್ಮವನ್ನು ಸಂಸ್ಥಾಪಿಸಿ
ಬೆಳೆಸಿದರೆ, ಮುಂದು 12ನೇ ಶತಮಾನದಲ್ಲಿ ಬಸವಾದಿ ಶಿವ ಶರಣರು ಪವಿತ್ರ ವೀರಶೈವ ಧರ್ಮವನ್ನೇ
ಸ್ವೀಕರಿಸಿ ಇನ್ನಷ್ಟು ವಿಕಾಸಗೊಳಿಸಿರುವುದನ್ನು ಅರಿಯದೇ ಅನ್ಯ ಮಾರ್ಗ ತುಳಿಯುವುದು ನೋವಿನ
ಸಂಗತಿಯಾಗಿದೆ. ಬೇಜವಾಬ್ದಾರಿ ಮಾತುಗಳನ್ನಾಡಿದರೆ ತಕ್ಕ ಪ್ರಾಯಃಶ್ಚಿತ ಅನುಭವಿಸಬೇಕಾಗುವುದೆಂದು
ಶ್ರೀಗಳು ಸ್ಪಷ್ಟಪಡಿಸಿದ್ದಾರೆ.

ರಾಜ್ಯ ವ್ಯಾಪಿ ಖಂಡನೆ : ಒಂದಿಲ್ಲೊಂದು ಹೇಳಿಕೆ ನೀಡಿ ವ್ಯಾಪಕ ಪ್ರಚಾರ
ಪಡೆಯುವುದನ್ನೇ ತಮ್ಮ ಮುಖ್ಯ ಕಸುಬನ್ನಾಗಿ ಮಾತೆ ಮಹಾದೇವಿ ರೂಢಿಸಿಕೊಂಡಿದ್ದಾರೆ. ರಾಜಕಾರಣಿಗಳು,
ರಾಜಕೀಯ ಪಕ್ಷಗಳು ಹಾಗೂ ರಾಜಕಾರಣದ ವಿದ್ಯಮಾನಗಳಿಗೆ ಧರ್ಮಸ್ಥಾನಗಳಿಂದ ತತ್ವಗಳನ್ನು ಬೋಧಿ
ಸಿ ಮಾರ್ಗದರ್ಶನ ಮಾಡಬೇಕಾಗುತ್ತದೆ. ಆದರೆ ಸ್ವತಃ ಮಾತೆ ಮಹಾದೇವಿಯವರು 'ರಾಜಕೀಯ ಅಧಿ
ಕಾರ'ದ ಲಾಲಸೆಯಿಂದ ಚುನಾವಣೆಗೆ ಸ್ಪರ್ಧಿಸಿ ಹೀನಾಯ ಸೋಲನು ಅನುಭವಿಸಿದ್ದು, ಆ ಮೂಲಕ
ಧಾರ್ಮಿಕವಾಗಿ ಧರ್ಮದ ಪವಿತ್ರ ಪಂಚಪೀಠಗಳ ವಿಷಯದಲ್ಲಿ ಮಾತನಾಡುವ ನೈತಿಕ ಹಕ್ಕನ್ನೇ
ಕಳೆದುಕೊಂಡಿದ್ದಾರೆ, ಎಂದು ರಾಜ್ಯ ವಾಪಿ ಅನೇಕ ಮಠಾಧೀಶರು ಖಂಡಿಸಿದ್ದಾರೆ.

(ಸಂಯುಕ್ತ ಕರ್ನಾಟಕ -14-11-2006)

ಚಿತ್ರದುರ್ಗದ ರಂಗಯ್ಯನ ಬಾಗಿಲು
ಬಸವ ಮಂಟಪದಲಿ 20ನೇ ಶರಣಮೇಳ ಪ್ರಚಾರ ಸಭೆ

ಪೂಜ್ಯ ಶ್ರೀ ಶ್ರೀ ಶ್ರೀ ಶಿವಲಿಂಗಾನಂದ ಮಹಾ ಸ್ವಾಮಿಗಳು, ಕಬೀರಾನಂದಾಶ್ರಮ, ಚಿತ್ರದುರ್ಗ. ಇವರು ಈ ಕಾರ್ಯಕ್ರಮದ ದಿವ್ಯ ಸನ್ನಿಧಿಯನ್ನು ವಹಿಸಿ ಮಾತನಾಡುತ್ತ, ಜಾತಿ ಹುಟ್ಟಿನಿಂದಲ್ಲ ಅವರು ಮಾಡುವ ಕಾಯಕದಿಂದ ಮಾತ್ರ ಎಂಬ ಗುರು ಬಸವಣ್ಣನವರ ವಿಚಾರಾಧಾರೆಯನ್ನು ಹೇಳಿದರು. ಕಾರ್ಯಕ್ರಮದ ಸಮ್ಮುಖವನ್ನು ಪೂಜ್ಯ ಮಾತೆ ದಾನೇಶ್ವರಿ, ಬಸವ ಮಂಟಪ ಚಿತ್ರದುರ್ಗ ಇವರು ವಹಿಸಿದ್ದರು. ಗುರು ಬಸವಣ್ಣನವರ ಪೂಜೆಯನ್ನು ಅಕ್ಕನಾಗಲಾಂಬಿಕಾ ಬಳಗ ಚಿತ್ರದುರ್ಗ ಇವರು ನೆರವೇರಿಸಿದರು. ಪ್ರಾರ್ಥನೆಯನ್ನು ಶರಣೆ ಸುನಂದಮ್ಮ ಮತ್ತು ಸಂಗಡಿಗರು ನೆರವೇರಿಸಿದರು. ಶರಣ ಡಿ.ಬೋರಣ್ಣನವರು, ಸಂಸ್ಥಾಪಕರು ವೀರ ಮದಕರಿ ನಾಯಕ ವಿದ್ಯಾ ಸಂಸ್ಥೆ ಇವರು ಧ್ವಜಾರೋಹಣವನ್ನು ನೆರವೇರಿಸಿ ಬಸವಣ್ಣನವರ ಕ್ರಾಂತಿಯ ಬಗ್ಗೆ ಮತ್ತು ಪೂಜ್ಯ ಅಪ್ಪಾಜಿ ಮತ್ತು ಮಾತಾಜಿಯವರ ಕಾರ್ಯ ಸಾಧನೆಯನ್ನು ಕೊಂಡಾಡಿ ಕೂಡಲ ಸಂಗಮದ ಅಭಿವೃದ್ಧಿಯ ಬಗ್ಗೆ ಮಾತನಾಡಿದರು. ಶರಣೆ ವಿಜಯಾ ನಂಜುಂಡಪ್ಪ ಉಪನ್ಯಾಸಕರು, ಮದಕರಿ ನಾಯಕ ಕಾಲೇಜು, ಚಿತ್ರದುರ್ಗ ಇವರು ಸ್ವಾಗತಿಸಿದರು. ಶರಣ. ಎನ್.ವೈ. ಹನುಮಂತಪ್ಪ ಲೋಕ ಸಭಾ ಸದಸ್ಯರು, ನಿವೃತ್ತ ಹೈಕೋರ್ಟ್ ಮುಖ್ಯ ನ್ಯಾಯ ಮೂರ್ತಿ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತ, ಬಸವ ಧರ್ಮವನ್ನು ನಾವು ಮಕ್ಕಳಿಗೆ ತಿಳಿ ಹೇಳಬೇಕು ಮತ್ತು ಮಕ್ಕಳಿಗೆ ಮೊದಲಿನಿಂದಲೂ ಸಂಸ್ಕಾರ ಕೊಡಬೇಕು ಎಂದು ಹೇಳಿ ಮತ್ತು ಕೂಡಲ ಸಂಗಮದಲ್ಲಿ ನೆಡೆಯುವ ಶರಣ ಮೇಳದ ಬಗ್ಗೆ ಅವರು ತಮ್ಮ ವಿಚಾರಗಳನ್ನು ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಶರಣ. ಜಿ.ಹೆಚ್. ತಿಪ್ಪಾರೆಡ್ಡಿ, ಎಂ.ಎಲ್.ಎ. ಚಿತ್ರದುರ್ಗ ಇವರು ಮಾತನಾಡಿ ಗುರು ಬಸವಣ್ಣನವರ ವಿಚಾರಗಳನ್ನು ಹೇಳಿದರು. ಕೂಡಲ ಸಂಗಮದ ಮತ್ತು ಕಲ್ಯಾಣದಲ್ಲಿಯ ಬಸವಣ್ಣನವರ ಮೂರ್ತಿಯ ಕೆಲಸದ ಬಗ್ಗೆ ತಮ್ಮ ಅಭಿಪ್ರಾಯ ತಿಳಿಸಿದರು. ಮುಖ್ಯ ಅತಿಥಿಗಳಾಗಿ ಶರಣ.ಎಸ್.ಎನ್. ಚಂದ್ರಣ್ಣನವರು, ಅಧ್ಯಕ್ಷರು ರಾ.ಬ.ದಳ ಚಿತ್ರದುರ್ಗ, ಹಾಗೂ ವಿವಿಧ ರಾಷ್ಟ್ರೀಯ ಬಸವ ದಳದ ಗಣ್ಯರು ಭಾಗವಹಿಸಿದರು. ಪೂಜ್ಯ ಗಂಗಾ ಮಾತಾಜಿಯವರು ಮಾತನಾಡುತ್ತ, ಆರ್ಶೀವಚನದಲ್ಲಿ ಕೂಡಲ ಸಂಗಮದಲ್ಲಿ ನೆಡೆಯುವ 20ನೇ ಶರಣ ಮೇಳದ ಬಗ್ಗೆ ಅಭೂತ ಪೂರ್ವವಾಗಿ ಪ್ರವಚನ ಮಾಡಿ ಶರಣ ಮೇಳಕ್ಕೆ ಎಲ್ಲರಿಗೂ ಆಹ್ವಾನ ನೀಡಿದರು. ಗುರು ಬಸವಣ್ಣನವರ ವಚನಗಳ ಬಗ್ಗೆ 12ನೇ ಶತಮಾನದ ಅನೇಕ ಶರಣರ ಪರಿಚಯ ಮಾಡಿಸಿ ಕಾಯಕದ ಮಹತ್ವವನ್ನು ತಿಳಿಸಿ ಕೊಟ್ಟರು. ಸಭಾ ನಿರ್ವಹಣೆಯನ್ನು ಶರಣೆ ಪ್ರತಿಭಾ, ಬಸವ ತತ್ವ ಪ್ರಚಾರಕರು, ಇವರು ನೆರವೇರಿಸಿಕೊಟ್ಟರು. ಶರಣು ಸಮರ್ಪಣೆಯನ್ನು ಶರಣರಾದ ಜಿ.ಸಿ. ತಿಪ್ಪೇಸ್ವಾಮಿ ನೆರವೇರಿಸದರು. ಕಾರ್ಯಕ್ರಮದ ದಾಸೋಹವನ್ನು ಶರಣ.ಚಂದ್ರಶೇಖರಪ್ಪ, ಇಂಜಿನಿಯರ್ ಇವರು ವಹಿಸಿಕೊಂಡಿದ್ದರು.

ವರದಿ : ಪೂಜ್ಯ ಮಾತೆ ದಾನೇಶ್ವರಿ
ಬಸವ ಮಂಟಪ, ಚಿತ್ರದುರ್ಗ

ವಚನ ಸಾಹಿತ್ಯ ಲಿಖಿತ ಪರೀಕ್ಷೆ

ಆತ್ಮೀಯ ಶರಣ ಬಂಧುಗಳಲ್ಲಿ ಬಿನ್ನಹ,

ಇದೇ ಮೊದಲ ಬಾರಿಗೆ ಶರಣ ಮೇಳದಲ್ಲಿ ವಚನ ಸಾಹಿತ್ಯದ ಬಗ್ಗೆ ಲಿಖಿತ ಪರೀಕ್ಷೆಯನ್ನು ಏರ್ಪಡಿಸಲಾಗಿದೆ. 30 ನಿಮಿಷಗಳ ಅವಧಿಯಲ್ಲಿ ಒಟ್ಟು 50 ಪ್ರಶ್ನೆಗಳನ್ನು ಕೊಡಲಾಗುವುದು. ಪ್ರತಿಯೊಂದು ಪ್ರಶ್ನೆಗೆ 4 ಉತ್ತರವಿರುತ್ತದೆ. ಸರಿಯಾದ ಉತ್ತರವನ್ನು ಆಯ್ಕೆ ಮಾಡಬೇಕು. ಸರಿಯಾದ ಉತ್ತರ ಬರೆದವರಿಗೆ 10 ಅಂಕಗಳು, ತಪ್ಪು ಉತ್ತರ ಬರೆದವರಿಗೆ 5 ಅಂಕಗಳನ್ನು ಖಡಿತಗೊಳಿಲಾಗುವುದು. ಹೆಚ್ಚಿನ ಅಂಕ ಗಳಿಸಿದ ಮೊದಲ ಮೂವರಿಗೆ ಬಹುಮಾನ ನೀಡುವುದು. ಪ್ರವೇಶ ದರ- 25 ರೂ.ಗಳು. ಭಾಗವಹಿಸುವವರು ದಿ: 30-12-06ರ ಒಳಗಾಗಿ ಕೆಳಗಿನ ವಿಳಾಸಕ್ಕೆ ತಮ್ಮ ಹೆಸರು ನೊಂದಾಸ ಬೇಕೆಂದು ಸೂಚಿಸುತ್ತೇವೆ.

ವಿಳಾಸ : ವಚನ ಸಾಹಿತ್ಯ ಲಿಖಿತ ಪರೀಕ್ಷೆ
ಬಸವ ಮಂಟಪ, 2035, 2ನೇ ಬ್ಲಾಕ್
20ನೇ ಮುಖ್ಯ ರಸ್ತೆ, ರಾಜಾಜಿ ನಗರ, ಬೆಂಗಳೂರು-10

ರಂಭಾಪುರಿ ಶ್ರೀಗಳ ಹೇಳಿಕೆ: ಲಿಂಗಾಯತ ಮುಖಂಡರ ಖಂಡನೆ

ಧಾರವಾಡ:19-11-2006:- ಬಾಳೆಹೊನ್ನೂರು ಶ್ರೀ ರಂಭಾಪುರಿ ಪೀಠದ ಶ್ರೀ ವೀರಸೋಮೇಶ್ವರ ಸ್ವಾಮಿಗಳು ಪತ್ರಿಕಾ ಹೇಳಿಕೆ ನೀಡಿ ಪೂಜ್ಯಶ್ರೀ ಜಗದ್ಗುರು ಮಾತೆ ಮಹಾದೇವಿಯವರ ಬಗ್ಗೆ ಹಗುರವಾಗಿ ಮಾತನಾಡಿರುವುದನ್ನು ರಾಷ್ಟ್ರೀಯ ಬಸವ ದಳ, ಲಿಂಗಾಯತ ಧರ್ಮ ಮಹಾಸಭೆ ಧಾರವಾಡ ಜಿಲ್ಲಾ ಶಾಖೆಗಳು ತೀವ್ರವಾಗಿ ಖಂಡಿಸಿದ್ದಾರೆ.

ಇಂದು ಜೈನ, ಬೌದ್ಧ, ಕ್ರೈಸ್ತ, ಇಸ್ಲಾಂ ಹಾಗೂ ಸಿಖ್ ಧರ್ಮಗಳು ಜಾಗತಿಕ ಧರ್ಮಗಳಾಗಲು ಕಾರಣವೇನೆಂದರೆ, ಆಯಾ ಧರ್ಮೀಯರಲ್ಲಿ ಮೈಗೂಡಿರುವ ಏಕ ಗುರು ಭಕ್ತಿ. ಏಕ ಗ್ರಂಥ ನಿಷ್ಠೆ ಹಾಗೂ ಸಾಮೂಹಿಕ ಪ್ರಾರ್ಥನೆಗಳೇ ಕಾರಣವಾಗಿವೆ. ಅಂತಹ ಶಿಸ್ತನ್ನು ನಮ್ಮ ಧರ್ಮದಲ್ಲಿ ತಂದು ಧರ್ಮಗುರು ಬಸವೇಶ್ವರರು ಧರ್ಮಗ್ರಂಥ ವಚನ ಸಾಹಿತ್ಯ ಎಂಬ ಐತಿಹಾಸಿಕ ಸತ್ಯವನ್ನು ಯಶಸ್ವಿಯಾಗಿ ಪ್ರಚಾರಗೈದು 'ಸಾಮೂಹಿಕ ಪ್ರಾರ್ಥನೆ,' 'ಶರಣ ಮೇಳ' 'ಕಲ್ಯಾಣ ಪರ್ವ'ಗಳಂತಹ ಉದಾತ್ತ ಧಾರ್ಮಿಕ ಕಾರ್ಯಗಳ' ಮೂಲಕ ಇಂದು ಸಮಾಜವನ್ನು ಯಶಸ್ವಿಯಾಗಿ ಸಂಘಟಿಸುತ್ತಿರುವ ಪೂಜ್ಯ ಮಾತಾಜಿಯವರು ಲಿಂಗಾಯತ ಧರ್ಮದ ಅಮೂಲ್ಯ ಆಸ್ತಿಯಾಗಿದ್ದಾರೆ. ಸಮಾಜವನ್ನು ವ್ಯವಸ್ಥಿತವಾಗಿ ಧೃವೀಕರಿಸಿದ ವಿಶೇಷ ಕೀರ್ತಿ ಪೂಜ್ಯ ಮಾತಾಜಿಯವರಿಗೆ ಸಲ್ಲುತ್ತದೆ ಎಂದೂ ಮುಖಂಡರು ಹೇಳಿದ್ದಾರೆ.

ರಂಭಾಪುರಿ ಶ್ರೀ ಗಳು ಹೇಳುವಂತೆ ಪೂಜ್ಯ ಮಾತೆ ಮಹಾದೇವಿಯವರು ಸಮಾಜವನ್ನು ಒಡೆಯುತ್ತಿಲ್ಲ, ಬದಲಾಗಿ ಒಂದುಗೂಡಿಸುತ್ತಿದ್ದಾರೆ. ಲಿಂಗಾಯತ ಧರ್ಮವು ಜಾಗತಿಕ ಧರ್ಮಗಳ ಸಾಲಿನಲ್ಲಿ ತಲೆಯೆತ್ತಿ ನಿಲ್ಲಬೇಕೆಂಬ ಉದಾತ್ತ ಹಂಬಲದಿಂದ ಒಳಪಂಗಡಗಳ ಬೇಧವನ್ನು ಸಂಪೂರ್ಣ ಕಡೆಗಣಿಸಿ, ಪುರೋಹಿತ ಶಾಹಿಗಳ ಕಪಿಮುಷ್ಟಿಯಿಂದ ಧರ್ಮವನ್ನು ವಿಮೋಚನೆಗೊಳಿಸಿ ಅಖಂಡ ಲಿಂಗಾಯತ ಧರ್ಮಕ್ಕೆ ಭಾರತೀಯ ಸಂವಿಧಾನದನ್ವಯ ಸ್ವತಂತ್ರ ಧರ್ಮದ ಮಾನ್ಯತೆ ಪಡೆಯಬೇಕೆಂದು ಅವಿಶ್ರಾಂತವಾಗಿ ಪೂಜ್ಯ ಮಾತಾಜಿಯವರು ಪ್ರಯತ್ನಿಸುತ್ತಿದ್ದಾರೆ, ಸಮಾಜವನ್ನು ಅಖಂಡವಾಗಿ ನೋಡದೇ ಒಳ ಪಂಗಡವೊಂದಕ್ಕೆ ಮೀಸಲಾತಿ ನೀಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸಿರುವ ರಂಭಾಪುರಿ ಶ್ರೀಗಳಂಥವರಿಂದ ಪೂಜ್ಯ ಮತಾಜಿಯವರು ಪಾಠ ಕಲಿಯಬೇಕಾಗಿಲ್ಲ ಎಂದೂ ಸ್ಪಷ್ಟವಾಗಿ ಹೇಳಿದ್ದಾರೆ.

ಪೂಜ್ಯ ಮಾತಾಜಿಯವರು ಚುನಾವಣೆಗೆ ಸ್ಪರ್ಧಿಸಿದ್ದು ರಾಜಕೀಯ ರಂಗದ ಶುದ್ಧೀಕರಣಕ್ಕಾಗಿ ಮತ್ತು ಆದರ್ಶ ಆಡಳಿತ ವ್ಯವಸ್ಥೆಯ ನಿರ್ಮಾಣಕ್ಕಾಗಿಯೇ ವಿನಾ ಅಧಿಕಾರದ ಲಾಲಸೆಗಾಗಿ ಖಂಡಿತ ಅಲ್ಲ. ಅವರು ಅಧಿಕಾರದ ಲಾಲಸೆ ಹೊಂದಿದ್ದರೆ ವಾಮ ಮಾರ್ಗಗಳಿಂದ ಚುನಾವಣೆ ಗೆಲ್ಲಬಹುದಾಗಿತ್ತು. ಆದರೆ ಆದರ್ಶ ತತ್ವ ಉತ್ತಮ ಉದ್ದೇಶ ಹೊಂದಿ ಪಕ್ಷ ಸ್ಥಾಪಿಸಿದ್ದ ಕಾಯಕ ಜೀವಿಯಾದ ಶ್ರೀ ವಿಜಯ ಸಂಕೇಶ್ವರ ಅವರಂತ ಆದರ್ಶ ವ್ಯಕ್ತಿಯ ನೇತೃತ್ವವಿದ್ದರೆ ನಾಡಿಗೆ ಒಳಿತಾಗುವುದೆಂಬ ಕಾರಣಕ್ಕೆ ಮಾತ್ರ ಅವರು ಕನ್ನಡ ನಾಡು ಪಕ್ಷ ಬೆಳೆಸಲು ಶ್ರಮಿಸಿದ್ದರೇ ವಿನಃ ಬೇರೆ ಕಾರಣಗಳಿಂದ ಅಲ್ಲ. ಡಾ|| ಶಿವರಾಮ ಕಾರಂತರು ಸೋಲುವಂತಹ ಫೂಲನ್ ದೇವಿ ಗೆಲ್ಲುವಂತ ಈ ಪ್ರಜಾಪ್ರಭುತ್ವದಲ್ಲಿ ಚುನಾವಣೆಯ ಸೋಲು-ಗೆಲುವುಗಳೇ ವ್ಯಕ್ತಿತ್ವವನ್ನು ನಿರ್ಧರಿಸುವುದಿಲ್ಲ. ಪೂಜ್ಯ ಮಾತಾಜಿಯವರ ಚುನಾವಣೆಯ ಸೋಲನ್ನೇ ನೆಪ ಮಾಡಿಕೊಂಡು ಜನರು ಮಾತೆ ಮಹಾದೇವಿಯುವರನ್ನು ತಿರಸ್ಕರಿಸಿದ್ದಾರೆ. ಎನ್ನುವ ಶ್ರೀ ಗಳ ಹೇಳಿಕೆ ತೀರಾ ಸಣ್ಣತನದ್ದು. ಅವರ ಈ ಮಾತಿನ ಜಾಡು ಹಿಡಿದು ಹೊರಟರೆ ಅವರ ಹೇಳಿಕೆ ಸ್ವತಃ ವಿಜಯ ಸಂಕೇಶ್ವರರಿಗೆ, ಕನ್ನಡ ನಾಡು ಪಕ್ಷಕ್ಕೆ ಹಾಗೂ ಪರಾಭವಗೊಂಡಿರುವ ಎಲ್ಲಾ ಪಕ್ಷಗಳ ಎಲ್ಲಾ ಅಭ್ಯರ್ಥಿಗಳಿಗೆ ಅನ್ವಯಿಸುತ್ತದೆ. ಹಾಗೆಂದರೆ ಸೋತವರನ್ನೆಲ್ಲಾ ಜನ ತಿರಸ್ಕರಿಸಿದ್ದಾರೆ ಎಂದು ಅರ್ಥವಲ್ಲ ಬದಲಾಗಿ ಇವು ಪ್ರಜಾಪ್ರಭುತ್ವ ವ್ಯವಸ್ಥೆಯ ಅನಿವಾರ್ಯ ಘಟ್ಟಗಳಷ್ಟೆ. ಇವೆಲ್ಲ ಗೊತ್ತಿದ್ದೂ ರಂಭಾಪುರಿ ಶ್ರೀಗಳು ನೀಡಿರುವ ಹೇಳಿಕೆ ಅವರ ವ್ಯಕ್ತಿತ್ವಕ್ಕೆ ಶೋಭಾಯಾಮಾನವಂತೂ ಅಲ್ಲ. ಅವರು ಪದೇ ಪದೇ ಈ ರೀತಿ ಪತ್ರಿಕಾ ಹೇಳಿಕೆ

ಕೊಡುವುದನ್ನು ಬಿಟ್ಟು ಪೂಜ್ಯ ಮಾತಾಜಿಯವರು ಈಗಾಗಲೇ ನೀಡಿರುವ ಬಹಿರಂಗ ಪಂಥಾಹ್ವಾನನ್ನು ಸವಾಲಾಗಿ ಸ್ವೀಕರಿಸಿ ತಮ್ಮ ವಿಚಾರಗಳಿಗೆ ಐತಿಹಾಸಿಕ ದಾಖಲೆಗಳು ಏನಾದರೂ ಇದ್ದರೆ ಬಹಿರಂಗವಾಗಿ ವಿದ್ವತ್ ಚರ್ಚೆಗೆ ಬರಲಿ, ವಿದ್ವತ್ ಸಭೆಯಲ್ಲಿ ಚರ್ಚೆಯಾಗಲಿ ಅದನ್ನೆಲ್ಲ ಬಿಟ್ಟು ಕೇವಲ ಪತ್ರಿಕಾ ಹೇಳಿಕೆ ನೀಡುವ ಅವರ ಜಾಯಾಮಾನ ಬದಲಿಸಿಕೊಳ್ಳಲಿ ಎಂದಿರುವ ರಾಷ್ಟ್ರೀಯ ಬಸವ ದಳ, ಲಿಂಗಾಯತ ಮಹಾಸಭೆ ಮುಖಂಡರು ಪೂಜ್ಯ ಮಾತಾಜಿಯವರ ವಿಚಾರಧಾರೆಗಳಿಂದಲೇ ಲಿಂಗಾಯತ ಸಮಾಜ ಬಲಗೊಳ್ಳತ್ತಲಿದೆ. ಅದನ್ನು ಪ್ರಾಜ್ಞರು ಅರ್ಥ ಮಾಡಿಕೊಳ್ಳಬೇಕು ಎಂದು ನುಡಿದಿದ್ದಾರೆ. ಸಭೆಯಲ್ಲಿ ರಾಷ್ಟ್ರೀಯ ಬಸವ ದಳದ ಮುಖಂಡರು ಉಪಸ್ಥಿತರಿದ್ದರು.

ವರದಿ - ಶರಣ ಕರಿಬಸಪ್ಪ ಕೋರಿಶೆಟ್ಟರು,
ನ್ಯಾಯವಾದಿ

ಮಾತಾಜಿ ಸ್ತುತಿ

ಈ ಪರಿಯ ನಿಲುವ ಇನ್ನಾವ ಸಂತರಲಿ ಕಾಣೆ
ಭಕ್ತ ಜನ ಪೂಜಿತ ಮಾತೆ ಮಹಾದೇವಿಯಲ್ಲದೆ || ಪ ||

ನಡೆ ನುಡಿಯು ಶುಚಿಯಾಗಿ ತನು ಮನವು ಶುದ್ಧಿಯಾಗಿ
ಭಾವದಲ್ಲಿ ಬ್ರಹ್ಮವನು ತುಂಬಿಕೊಂಡಿರುವ ತಾಯಿ
ಹಗುಲಿರುಳು ಬಸವ ತತ್ವಪ್ರಚಾರಕೆ ದುಡಿಯುತ್ತಿರುವ
ಸಚ್ಚಿದಾನಂದ ಸತಿ ಪೂಜ್ಯ ಮಾತಾಜಿ || 1 ||

ಮೆಟ್ಟಿದ ಧರೆಯೆಲ್ಲ ಅವಿಮುಕ್ತ ಕ್ಷೇತ್ರ
ಸೋಂಕಿದ ಜಲವೆಲ್ಲ ಪುಣ್ಯದಾ ತೀರ್ಥ
ಪರಮ ಪರುಷದ ಖಣಿ ವೈರಾಗ್ಯದ ಮೂರ್ತಿ
ಸಚ್ಚಿದಾನಂದ ಸತಿ ಪೂಜ್ಯ ಮಾತಾಜಿ || 2 ||

ಶರಣ ಮೇಳದ ಶಿಲ್ಪಿ ತಾವಾಗಿ ಬಂದಿರಿ
ಕಲ್ಯಾಣ ಪರ್ವದ ಘನ ಕಾರ್ಯವ ಗೈದಿರಿ
ಲಿಂಗಾಯತ ಧರ್ಮದ ಮಹಾಜಗದ್ಗುರುವಾದಿರಿ
ಸಚ್ಚಿದಾನಂದ ಸತಿ ಪೂಜ್ಯ ಮಾತಾಜಿ || 3 ||

ಜಗದಗಲ ಮುಗಿಲಗಲ ನಿಮ್ಮಹೃನ್ಮಂದಿರ
ಅದರೊಳಗೆ ತುಂಬಿದೆ ಬಸವ ತತ್ವದ ಸಾರ
ಅಭಿನವ ಅಕ್ಕ ಮಹಾದೇವಿಯ ಅವತಾರ
ವಿಶ್ವೇಶ್ವರನ ಸತಿ ಪೂಜ್ಯ ಮಾತಾಜಿ || 4 ||

- ಪೂಜ್ಯ ಸಿದ್ದೇಶ್ವರಾನಂದ ಸ್ವಾಮೀಜಿ
ಅಲ್ಲಮ ಪ್ರಭು ಮಠ, ಚಟ್ನಳ್ಳಿ

ವಚನಗಳಲ್ಲಿ ಕಾಯಕದ ಮಹತ್ವ

- ಮಾತೆ ಕಸ್ತೂರಿ ದೇವಿ

1. ನಾನು ಆರಂಭವ ಮಾಡುವೆನಯ್ಯ ಗುರು ಪೂಜೆಗೆಂದು
ನಾನು ಬೆವಹಾರವ ಮಾಡುವೆನುನಯ್ಯಾ ಲಿಂಗಾರ್ಚನೆಗೆಂದು
ನಾನು ಪರಸೇವೆಯ ಮಾಡುವೆನುನಯ್ಯಾ ಜಂಗಮ ದಾಸೋಹಕ್ಕೆಂದು
ನಾನಾವಾವ ಕರ್ಮಂಗಳ ಮಾಡಿದಡೆಯೂ ಆ ಕರ್ಮ
ಫಲಭೋಗವ ನೀ ಕೊಡುವೆ ಎಂಬುದ ನಾ ಬಲ್ಲೆನು
ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರೀಯ ಮಾಡೆನು
ನಿಮ್ಮ ಸೊಮ್ಮಂಗೆ ಸಲಿಸುವೆನು ನಿಮ್ಮಾಣೆ ಲಿಂಗದೇವ.

-ವಿಶ್ವ ಗುರು ಬಸವಣ್ಣನವರು.

ಬಸವ ಮಾರ್ಗದಲ್ಲಿ ಸಾಗಬೇಕೆನ್ನುವ ಭಕ್ತನು ತನ್ನ ಅಭಿರುಚುಗೆ ತಕ್ಕಂತೆ ಕೈಗೊಳ್ಳುವ ಪ್ರತಿಯೊಂದು ಕಾಯಕದಲ್ಲಿ ಬಹಿರಂಗದ ಶ್ರೇಯಸ್ಸಿನೊಂದಿಗೆ ಅಂತರಂಗದಲ್ಲಿ ಒಂದು ಸತ್ಸಂಕಲ್ಪವಿರಬೇಕು ಎನ್ನುತ್ತಾರೆ ಧರ್ಮಪಿತರು ತಮ್ಮ ವಚನದಲ್ಲಿ. ರೈತನಾಗಿ ಕೃಷಿಕನಾಗಿ ಆರಂಭ, ಒಕ್ಕಲುತನವನ್ನು ಮಾಡಬೇಕು. ಏಕೆಂದರೆ ಅದರಿಂದ ಬರುವ ಲಾಭದಲ್ಲಿ ಜೀವನ ನಿರ್ವಹಣೆಗೆ ಅಗತ್ಯವಾದಷ್ಟು ಇರಿಸಿಕೊಂಡು ಉಳಿದುದರಲ್ಲಿ ಗುರು ಪೂಜೆಗೆ ಸಂದಾಯ ಮಾಡಬೇಕು. ಅಂದರೆ ಇಹಪರಕ್ಕೆ ಸಲ್ಲುವಂತೆ ಬಾಳಲು ಕಲಿಸಿದ ಗುರುವಿನ ಧ್ಯೇಯೋದ್ದೇಶಗಳು ಪೂರೈಕೆಗಾಗಿ ಸಲ್ಲಿಸಬೇಕು. ವ್ಯಾಪಾರಿಯಾಗಿ ವ್ಯವಹಾರ ಮಾಡುವ ಮೂಲಕ ಸ್ವಾವಲಂಬಿಯಾಗಿ ಸಂಪಾದಿಸಿ, ಅದರಿಂದ ಬರುವ ಲಾಭಂಶದಲ್ಲಿ ಒಂದು ಪಾಲನ್ನು ಲಿಂಗದೇವನ ಪೂಜೆಗೆ ವಿನಿಯೋಗಿಸಬೇಕು. ಇಹಲೋಕದಲ್ಲಿ ಬದುಕಲು ಬೇಕಾದ ಗಾಳಿ, ನೀರು, ವಾಯು, ಆಹಾರ ಎಲ್ಲವನ್ನು ಉಚಿತವಾಗಿ ದಯಪಾಲಿಸಿರುವ ಮಹಾದಾನಿಯ ಋಣ ತೀರಿಸಲೆಂದು, ಅರ್ಚಿಸಲು, ಪೂಜಿಸಲು ಬಳಸಬೇಕು. ಪರಸೇವೆ ಅಂದರೆ ಬೇರೆಯವರ ಬಳಿ ಅಥವ ಕೈಕೆಳಗೆ ಉದ್ಯೋಗ ಮಾಡಿದಾಗ ಬರುವ ಸಂಬಳದಿಂದ ಜಂಗಮ ದಾಸೋಹ ಮಾಡಬೇಕು. ಘನೋದ್ದೇಶವನ್ನು ಹೊತ್ತು ಬರುವ ತ್ಯಾಗಿಗಳು, ನಿಸ್ವಾರ್ಥಿಗಳು ಆದ ಜಂಗಮರಿಗೆ ಸಮಾಜದಲ್ಲಿರುವ ದೀನ ದುರ್ಬಲರಿಗೆ ಕೈಲಾದ ನೆರವು ನೀಡಲೂ ಪರಮ ಪವಿತ್ರವಾದ ಸ್ವತಂತ್ರ ಬೇಕಾದ ಕಾರಣ ಸದ್ಭಕ್ತನು ಕಾಯಕ ಮಾಡಬೇಕು. ಭಕ್ತನು ತನ್ನ ಅಭಿರುಚಿ, ಶಕ್ತಿ, ಸಾಮರ್ಥ್ಯಕ್ಕೆ ತಕ್ಕಂತೆ ಯಾವುದೇ ಕಾಯಕ ಆಯ್ಕೆ ಮಾಡಿಕೊಳ್ಳಲಿ ಅದಕ್ಕೆ ತಕ್ಕ ಪ್ರತಿಫಲವನ್ನು ಪರಮಾತ್ಮನು ತಪ್ಪದೆ ಕರುಣಿಸುತಾನೆ ಎಂಬ ನಂಬಿಕೆಯಿಂದ ನಿಶ್ಚಿಂತನಾಗಿ ಕಾಯಕದಲ್ಲಿ ಮಗ್ನನಾಗಬೇಕು. ಮಾತ್ರವಲ್ಲ ಲಿಂಗದೇವನ ಅಪೇಕ್ಷೆಯಂತೆ ಸತ್ಸಂಕಲ್ಪದಿಂದ ಮಾಡುವ ಕಾಯಕದಿಂದ ಬರುವ ಪವಿತ್ರ ಸಂಪಾದನೆಯನ್ನು ಗುರು-ಲಿಂಗ-ಜಂಗಮ ಸತ್ಪಾತ್ರಕ್ಕೆ ಸಲ್ಲಿಸಬೇಕೆ ಹೊರತು ಅನ್ಯ ಮಾರ್ಗದಲ್ಲಿ ಬಳಸಬಾರದು. ಈ ರೀತಿ ಸವೆಸುವಂತೆ ದೇವ ಸಾಕ್ಷಿಯಾಗಿ ಪ್ರತಿಜ್ಞೆ ಮಾಡಬೇಕು. ದೇವರಿಗೆ ಮಾತು ಕೊಡಬೇಕು.

ಹೀಗೆ ವಚನದಲ್ಲಿ ಧರ್ಮಪಿತ ಬಸವಣ್ಣನವರು ಕಾಯಕ ನಿರತನಾದ ಭಕ್ತನಿಗೆ ಇಮ್ಮಡಿಯಾದ ಆತ್ಮ ವಿಶ್ವಾಸವನ್ನು ತುಂಬುವ ಮೂಲಕ ದೇವರು ಮತ್ತು ಭಕ್ತ ಇಬ್ಬರಲ್ಲಿಯೂ ಪರಸ್ಪರ ನಂಬಿಕೆಯನ್ನು ಬಿತ್ತಿ ಬೆಳೆಸುತ್ತಿದ್ದಾರೆ!! ಮಾತ್ರವಲ್ಲ ಗುರು ಲಿಂಗ ಜಂಗಮ ಸೇವೆಗೆ ಪ್ರಾಮಾಣಿಕವಾಗಿ, ಪರಿಶ್ರಮದಿಂದ ಹರಿದ ಬೆವರ ಹನಿಗಳೇ ಆಗಬೇಕು ಎಂದು ಆದೇಶಿಸುತಿದಾರೆ.

2. ಕೃತ್ಯ ಕಾಯಕವಿಲ್ಲದವರು ಭಕ್ತರಲ್ಲ
ಸತ್ಯ ಶುದ್ಧವಿಲ್ಲದುದು ಕಾಯಕವಲ್ಲ
ಆಸೆಯೆಂಬುದು ಭವದ ಬೀಜ; ನಿರಾಶೆಯೆಂಬುದು
ನಿತ್ಯ ಮುಕ್ತಿ ; ಉರಿಲಿಂಗ ಪೆದ್ದಿಗಳರಸನಲ್ಲಿ
ಸದರವಲ್ಲ ಕಾಣವ್ವಾ.

ವಚನಕಾರರಾಗಿದ್ದ ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಕಾಳವ್ವೆ ಎಂಬ ಹೆಸರಿನ ಶರಣೆ ಕಾಯಕದ ಬಗ್ಗೆ ತನ್ನ ಸದೃಢ ವಿಚಾರ- ಆಚಾರಗಳನ್ನು ಈ ವಚನದಲ್ಲಿ ಎತ್ತಿ ಹಿಡಿದಿದ್ದಾರೆ. ಮರ್ತ್ಯಲೋಕದಲ್ಲಿ ಜೀವಾತ್ಮನು ಸಾರ್ಥಕವಾಗಿ ಇಹ ಪರಕ್ಕೆ ಹೊರೆಯಾಗದಂತೆ ಬದುಕಲು ಬೇಕಾದ ಯಾವುದಾದರೊಂದು ಉದ್ಯೋಗ ದುಡಿಮೆಯನ್ನು ಅವಲಂಬಿಸದೆ ಕೇವಲ ಕುಳಿತು ಉಣ್ಣುವವರು ಭಕ್ತರೆನಿಸಿಕೊಳ್ಳಲು ಯೋಗ್ಯರಲ್ಲ. ತನು - ಮನ- ಮತಿಗಳನ್ನು ಬಳಲಿಸಿ ದುಡಿಯಲು ಸಿದ್ಧವಿಲ್ಲದವರು ಶರಣರೆನಿಸಿಕೊಳ್ಳಲು ಅರ್ಹರಲ್ಲ. ಇಲ್ಲಿ ಕಾಯಕ ಮಾಡಲೇಬೇಕಾದುದು ಭಕ್ತನ ಒಂದು ಲಕ್ಷಣ. ಹಾಗೆಂದು ಭಕ್ತ ತನ್ನ ಹೊರೆತನವನ್ನು ನೀಗಿಕೊಳ್ಳಲು ಯಾವುದಾದರು ಕಾಯಕ ಮಾಡಿದ ಮಾತ್ರಕ್ಕೆ ಶರಣೆ ಕಾಳವ್ವೆಯವರು ಹೆಚ್ಚಿನ ಅಂಕಗಳನ್ನು ಕೊಡಲು ಸಿದ್ಧರಿಲ್ಲ. ಏಕೆಂದರೆ ಆ ಕಾಯಕ ಸತ್ಯ ಶುದ್ಧವಾಗಿರಬೇಕು ಎಂದು ಆಗ್ರಹಿಸುತ್ತಿದ್ದಾರೆ. ಅಂದರೆ ಕಾಯಕದಲ್ಲಿ ನೀತಿವಂತಿಕೆ, ಶೀಲವಂತಿಕೆ ತುಂಬಿರಬೇಕು. ಮೋಸ, ವಂಚನೆ, ಆರಂಭ ಶೂರತ್ವ ಮುಂತಾದ ದೌರ್ಬಲ್ಯಗಳಿಂದ ಕೂಡಿರಬಾರದು. ಇಂಥ ನೈತಿಕತೆಯನ್ನು ಅಳಡಿಸಲು ಅಸಮರ್ಥನಾದರೆ, ಆ ವ್ಯಕ್ತಿ ಕೈಗೊಂಡಿರುವ ಕೆಲಸ <u>ಕಾಯಕ</u> ಎಂದು ಕರೆಸಿಕೊಳ್ಳಲು ಅರ್ಹತೆ ಪಡೆಯುವುದಿಲ್ಲ! ಬದಲಿಗೆ ಅದು ಕೇವಲ ತನಗೆ ಮಾತ್ರ ಹಿತವನ್ನುಂಟು ಮಾಡುವ ಕರ್ಮವಾಗಿಯೇ ಪರಿವರ್ತನೆ ಹೊಂದುತ್ತದೆ ! ಪರಿಣಾಮ ಬೀರುತ್ತದೆ!!.

ಇನ್ನೂ ಕಾಯಕ ಮಾಡುವಾಗ ಒಂದೇ ದಿನದಲ್ಲಿ ಶ್ರೀಮಂತನಾಗಬೇಕೆಂಬ ಅತಿಯಾದ, ಅವಸರದಿಂದ ಕೂಡಿದ ಲಾಭದ ಆಸೆ ಇಟ್ಟುಕೊಂಡು ಮಾಡಿದರೆ, ಆಸೆಗೆ ಕೊನೆಯೆಂಬುದಿಲ್ಲದೆ ಮತ್ತೆ ಮತ್ತೆ ಭವದ ಕೂಪಕ್ಕೆ ತಳ್ಳುತ್ತದೆ; ಅನ್ಯಾಯ, ಅಸತ್ಯಗಳನ್ನು ಪ್ರಚೋದಿಸುತ್ತದೆ. ಆದ್ದರಿಂದ ಕಾಯಕಕ್ಕೆ ತಕ್ಕ ಪ್ರತಿಫಲವನ್ನು ಪ್ರಾಮಾಣಿಕವಾಗಿ ಬಯಸಿದರೆ ಮಾತ್ರ ದೇವರು ಮೆಚ್ಚುತ್ತಾನೆ; ಇಹದಲ್ಲಿ ಶ್ರೇಯಸು ಸಿದ್ಧಿಸುತದೆ. ಅದೇ ನಿತ್ಯ ಮುಕ್ತಿ; ಕಟ್ಟಿಟ್ಟ ಬುತ್ತಿ. ಎನ್ನುತಾರೆ ಶರಣರು. ಇಲ್ಲಿ ಭಕ್ತ-ಕಾಯಕ-ಸತ್ಯತೆ- ಶುದ್ಧತೆ- ಮುಕ್ತಿ ಈ ಎಲ್ಲಾ ಮೌಲ್ಯಗಳು ಒಂದುಕ್ಕೊಂದು ಪೋಷಕವಾಗಿ ಸೇರಿದಾಗ ಮಾತ್ರ ವ್ಯಕ್ತಿಯು ಬೆಳೆಯುತ್ತಾನೆ, ಸಮಾಜವೂ ಸುಸ್ಥಿತಿಯಲ್ಲಿರುತ್ತದೆ, ರಾಷ್ಟ್ರವೂ ಮುನ್ನಡೆ ಸಾಧಿಸುತ್ತದೆ ಎಂಬುದರಲಿ ಸಂದೇಹವಿಲ್ಲ ಎಂಬುದನ್ನು ಮನಗಾಣಬೇಕು.

3. ಮಾಡಿ ನೀಡಿ ಹೋದಹನೆಂಬಾಗ ಕೈಲಾಸವೇನು ಕೈಕೂಲಿಯೇ ?
ಮುಂದೊಂದ ಕಲಿಸದೆ ಹಿಂದೊಂದ ಭಾವಿಸದೆ ಸಲೆ ಸಂದಿದ್ದಾಗವೆ?
ಮಾರಯ್ಯ ಪ್ರಿಯ ಅಮರೇಶ್ವರ ಲಿಂಗವಿದ್ದ ಠಾವೇ ಕೈಲಾಸ

- ಆಯ್ದಕ್ಕಿ ಲಕ್ಕಮ್ಮನವರು

ಭಕ್ತನು, ಕಾಯಕ ಜೀವಿಯು, ತಾನು ಮಾಡುತ್ತಿರುವ ಕಾಯಕದಲ್ಲೇ ಕೈಲಾಸದ ಆನಂದವನ್ನು ಅನುಭವಿಸಬೇಕೆಂದು ಪ್ರತಿಪಾದಿಸಿದ ಬಸವಾದಿ ಪ್ರಮಥರು ಈ ಜಗತ್ತಿಗೆ ಬರುವ ಮೊದಲು, ಮರ್ತ್ಯಲೋಕದಲ್ಲಿ ದಾನ ಧರ್ಮ ಪುಣ್ಯ ಕಾರ್ಯ ಮಾಡಿದರೆ ಮಾತ್ರ, ಅದು ಸತ್ತ ನಂತರ ಕೈಲಾಸ ಪ್ರಾಪ್ತಿಯಾಗುತ್ತದೆ ಎಂಬ ಕಲ್ಪನೆ,ನಿರೀಕ್ಷೆ, ನಂಬಿಕೆ ರೂಢಿಯಲ್ಲಿತ್ತು. ಆದರೆ ಅನುಭವಕ್ಕೆ ಸಿಗದ, ದಾಖಲೆಗೆ ನಿಲುಕದ ಅಗೋಚರವಾದ ಕೈಲಾಸ ಸತ್ತ ನಂತರ ಸಿಗುತ್ತದೆ ಎಂದು ನಂಬಿಸಿ, ಆಮಿಷವಾಗಿ ತೋರಿಸಿ ಜನರನ್ನು ಸತ್ಕಾರ್ಯಕ್ಕೆ ಪ್ರಚೋದಿಸುವ ವಂಚನೆಯ ಮಾರ್ಗವನ್ನು ಶರಣರು ತುಳಿಯಲಿಲ್ಲ. ಇಂಥ ಕಲ್ಪನೆಯನ್ನು ಹುಸಿಗೊಳಿಸುವ, ದುರ್ಬಲಗೊಳಿಸಲು, ಸತ್ಯವನ್ನು ಪ್ರಕಾಶಿಸುವ ಮಹದುದ್ದೇಶದಿಂದ ಅನುಭವ ಮಂಟಪದ ಪ್ರಸಿದ್ಧ ಶರಣೆ ಆಯ್ದಕ್ಕಿ ಲಕ್ಕಮ್ಮನವರು ತಮ್ಮ ವಚನದಲ್ಲಿ ನಮ್ಮನ್ನು ಚಿಂತನೆಯೊಂದಿಗೆ ಅನುಷ್ಠಾನಕ್ಕೂ ಪ್ರೇರೆಪಿಸುತ್ತಿದ್ದಾರೆ.

ಈ ಲೋಕದಲ್ಲಿ ಕಷ್ಟಪಟ್ಟು ದುಡಿದು, ಸಂಪಾದಿಸಿ, ದಾನ ಮಾಡಿ ಪುಣ್ಯ ಸಂಚಯವಾದರೆ ಸತ್ತ ನಂತರ ಕೈಲಾಸ ಸಿಗುವುದೇ ?! ಹಾಗಿದ್ದರೆ ಕೈಲಾಸವೇನು ಸ್ಥಾನ ವಿಶೇಷವೆ ? ವ್ಯಾಪಾರವೇ ? ಒಪ್ಪಂದವೇ? ಪೂರ್ವ ನಿಯೋಜಿತವೇ ? ಅಥವ ಕೈ ಕೂಲಿಯೆ?! ಎಂದು ಕೇಳುವ ಮೂಲಕ ಕೈಲಾಸದ

ಭ್ರಮೆಯನ್ನು ಹುಸಿ ಗೊಳಿಸುತಿದ್ದಾರೆ! ಮುಂದೆ ಏನೋ ಸಿಗಬಹುದು, ಸಿಗುತ್ತದೆ ಎಂಬ ಹುಸಿ ಕಲ್ಪನೆ ಮಾಡಿಕೊಳ್ಳದೆ, ಹಿಂದೆ ಏನೋ ಇತ್ತು, ಅದು ನಮ್ಮ ಪೂರ್ವಜರಿಗೆ ಸಿಕ್ಕಿದೆ, ಅವರಂತೆ ಮುಂದೆ ನಮಗೂ ಸಿಗುತ್ತದೆ, ಸಿಗಲಿದೆ ಎಂಬ ಹುಸಿ ನಿರೀಕ್ಷೆಗಳನ್ನು ಇಟ್ಟುಕೊಂಡು ಬದುಕ ಬಾರದು. ಬದುಕಿರುವಾಗಲೇ, ನಮ್ಮ ಜೀವಿತ ಕಾಲದಲ್ಲಿಯೇ ಶರಣರು ಹಾಕಿಕೊಟ್ಟಿರುವ ಸತ್ಪಥದಲ್ಲಿ ಸಾಗುತ್ತಾ ಉತ್ತಮ ಬಾಳನ್ನು ಬಾಳಿದಾಗ ಮಾತ್ರ ಪ್ರತಿಯೊಬ್ಬರ ಜೀವನವು ಕೈಲಾಸವಾಗುತ್ತದೆ; ಆಗಲು ಸಾಧ್ಯ ಎಂದು ತಮ್ಮ ಸ್ವಾನುಭಾವವನ್ನು ಬಿತ್ತರಿಸಿದ್ದಾರೆ.

4. ವ್ರತ ತಪ್ಪಲು ಸೈರಿಸಬಹುದು
ಕಾಯಕ ತಪ್ಪಲು ಎಂದೂ ಸೈರಿಸಬಾರದು
ಕರ್ಮಹರ ಕಾಳೇಶ್ವರ!

(ಬಾಚಿ ಕಾಯಕದ ಬಸವಯ್ಯಗಳ ಧರ್ಮ ಪತ್ನಿ ಕಾಳವ್ವೆ)

ಸಾಮಾನ್ಯ ಶರಣೆ ಕಾಳವ್ವನವರು ತಮ್ಮ ವಚನದಲ್ಲಿ ಅಸಾಮಾನ್ಯವಾದ ರಾಷ್ಟ್ರ ಪ್ರಜ್ಞೆಯನ್ನು ಕಾಯಕ ನಿಷ್ಠೆಯನ್ನು ಎತ್ತಿ ಹಿಡಿದಿರುವುದು ಆಶ್ಚರ್ಯದೊಂದಿಗೆ ಆನಂದವನ್ನು ನೀಡುತ್ತಿದೆ. ಆಧ್ಯಾತ್ಮಿಕ ಮತ್ತು ಧಾರ್ಮಿಕ ಕ್ರಿಯೆಗಳಾದ ಆತ್ಮೋದ್ಧರಕ್ಕೆ ಪೋಷಕವಾದ ಪೂಜೆ, ಜಪ, ಧ್ಯನೆ, ವ್ರತಗಳನ್ನು ಭಕ್ತನು ತನ್ನ ದೈನಂದಿನ ಜೀವನದಲ್ಲಿ ಒತ್ತಡಗಳ ಬದುಕಿನಲ್ಲಿ ಅಕಸ್ಮಾತ್ ತಪ್ಪಿದರೂ ಸಹಿಸಿಕೊಳ್ಳಬಹುದಂತೆ?! ಕ್ಷಮಿಸ ಬಹುದಂತೆ!? ಆದರೆ ನಿತ್ಯವೂ ಮಾಡಲೇಬೇಕಾದ ಕಾಯಕದಿಂದ ಕರ್ತವ್ಯಗಳಿಂದ, ಜವಾಬ್ದಾರಿಗಳಿಂದ ತಪ್ಪಿಸಿಕೊಂಡಾಗ ಮಾತ್ರ ಎಂದೂ ಸೈರಿಸಬಾರದಂತೆ ?! ಕ್ಷಮಿಸಬಾರದಂತೆ?! ಏಕೆ ಹೀಗೆ?!

ಭಕ್ತರು, ಆಧ್ಯಾತ್ಮ ಜೀವಿಗಳು ಮುಂತಾದವರು ಲೋಕದ ಉಪಾಧಿಯನ್ನು ಕಟ್ಟಿಕೊಳ್ಳಬಾರದು, ಸಮಾಜ ರಾಷ್ಟ್ರಗಳ ಬಗ್ಗೆ ಚಿಂತಿಸಬಾರದು. ಆಗು ಹೋಗುಗಳ ಬಗ್ಗೆ ವಿಚಾರ ಮಾಡಬಾರದು. ಏಕೆಂದರೆ ಇವು ಪರಮಾತ್ಮನೆಲ್ಲಿಗೆ ಹೋಗಲು, ಪರಮಾನಂದವನ್ನು ಅನುಭವಿಸಲು ಅಡ್ಡಿಯನ್ನುಂಟು ಮಾಡುತ್ತವೆ. ಆದ್ದರಿಂದ ಸದಾ ಪೂಜೆ, ಜಪ, ಧ್ಯಾನ, ಮೌನ, ಭಜನೆಗಳಲ್ಲಿ ಕಾಲ ಹಾಕಬೇಕು ಎಂಬುದನ್ನು ಶರಣರು ಅಲ್ಲಗಳೆದರು. ಬದಲಿಗೆ ಅವನೇ ಹೆಚ್ಚು ಚಿಂತಿಸಬೇಕೆಂದು ಆತ್ಮ ಕಲ್ಯಾಣದೊಂದಿಗೆ ಲೋಕ ಕಲ್ಯಾಣವನ್ನು ಸಾಧಿಸಬೇಕೆಂದು ಪ್ರತಿಪಾದಿಸಿದರು. ಏಕೆಂದರೆ ಕಾಯಕವು ಸಮಷ್ಠಿಯುದ್ಧಾರದ ಸೂತ್ರ; ಆಧ್ಯಾತ್ಮಿಕ ಸಾಧಕನ ಲಕ್ಷಣ. ವ್ಯಕ್ತಿತ್ವದ ವಿಕಾಸಕ್ಕೆ, ಪರಿಪೂರ್ಣತೆಗೆ ಕಾಯಕವು ದಿವ್ಯ ಸಾಧನ ಎಂಬುದನ್ನು ಬಲವಾಗಿ ವ್ಯಾಖ್ಯನಿಸಿದರು. ಏಕೆಂದರೆ ಕಾಯಕ ನಿಂತರೆ ರಾಷ್ಟ್ರಾದಾಯದ ಸಮತೋಲನದಲ್ಲಿ ಏರುಪೇರಾಗುತ್ತದೆ. ಜನಜೀಬವನ ಅಸ್ತವ್ಯಸ್ತವಾಗುತ್ತದೆ. ಅಲ್ಲದೆ ಸಮಾಜಕ್ಕೆ ದೇಶಕ್ಕೆ ನಿರಂತರವಾಗಿ ಸೇವೆ ಸಲ್ಲಿಸುವ ಸದಾ ಎಚ್ಚರಿಕೆಯಿಂದಿರಬೇಕಾದ ಕಾಯಕಗಳಾದ ಸಾರಿಗೆ ವ್ಯವಸ್ಥೆ, ಸೈನ್ಯ, ವೈದ್ಯ ವೃತ್ತಿ, ಪೋಲಿಸ್, ಗುಪ್ತಚಾರ ದಳ, ಹಾಲು, ನೀರು, ಹಣ್ಣು, ತರಕಾರಿ ಸರಬರಾಜು ಮುಂತಾದ ವೃತ್ತಿಗಳಲ್ಲಿ ನಿರತರಾದವರು ತಮ್ಮ ಕರ್ತವ್ಯಗಳಲ್ಲಿ ಕೊಂಚ ಅಲಕ್ಷ್ಯ ತೋರಿದರು ಸಾಕು. ನಿಮಿಷ ಉದಾಸೀನಕ್ಕೆ ಕೆಡಿಸಿತ್ತು ಎಂಬಂತೆ ಅದರ ದುಷ್ಪರಿಣಾಮ ದೇಶ, ಸಮಾಜದ ಮೇಲಾಗುವುದು. ಇಂಥವರು ಪೂಜೆ, ವ್ರತಗಳನ್ನು ಕೆಲಸಗಳ ಒತ್ತಡದಲ್ಲಿ ತಾತ್ಕಾಲಿಕವಾಗಿ ಮರೆತರೆ ಕ್ಷಮಿಸಬಹುದು. ಇಲ್ಲಿ ವ್ಯಕ್ತಿ ಮತ್ತು ಧರ್ಮಕ್ಕಿಂತ ದೇಶ, ಸಮಾಜ ದೊಡ್ಡದು ಎಂಬ ಕಿಂಕರ ಭಾವ, ಸಮಷ್ಠಿ ಪ್ರಜ್ಞೆಯೊಂದಿಗೆ ಸದೃಢವಾದ ರಾಷ್ಟ್ರ ನಿಷ್ಠೆಯು ವ್ಯಕ್ತವಾಗುತ್ತಿದೆ. ಈ ವಚನಕ್ಕೆ ಹೆಗಲು ಕೊಡಲು ಸಿದ್ಧವಾಗಿರುವ ಆಯ್ದಕ್ಕಿ ಮಾರಯ್ಯನವರ ವಚನವನ್ನು ನೋಡೋಣ.

ಬಸವಾದಿ ಪ್ರಮಥರು ಕಾಯಕಕ್ಕಿಂತಲೂ ಗುರು ಲಿಂಗ ಜಂಗಮ ನಿಷ್ಠೆಗೆ ಅತಿ ಹೆಚ್ಚಿನ ಮಹತ್ವವನ್ನು ಕೊಟ್ಟಿದ್ದಾರೆ ಎಂಬ ತಪ್ಪು ತಿಳುವಳಿಕೆಯನ್ನು, ಆರೋಪವನ್ನು ಈ ವಚನ ನಿವಾರಿಸುತ್ತದೆ; ದೂರ ಮಾಡುತ್ತಿದೆ ಎಂಬುದನ್ನು ಅರಿಯೋಣ.

(ಮುಂದುವರಿಯುವುದು.)



ಓಂ ಶ್ರೀ ಗುರುಬಸವಲಿಂಗಾಯ ನಮಃ

866666



ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 2007 ರ ಜನವರಿ 11, 12, 13, 14, 15ರಂದು ನಡೆಯಲಿರುವ

ಇಪ್ಪತ್ತನೆಯ ಶರಣಮೇಳದ ಅಂಗವಾಗಿ

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2007ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 20ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾ ಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.


ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂ ಬಹುದು. 2007 ನೆಯ ಇಸವಿಯ 20 ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.

ಕ್ರ.ಸಂ.	ದಿನಾಂಕ	ವಾರ	ಊರಿನ ಹೆಸರು
32.	02-12-2006	ಶರಣ (ಶನಿ)ವಾರ	ಹುಬ್ಬಳ್ಳಿ
33.	03-12-2006	ದೇವ (ರವಿ)ವಾರ	ಧಾರವಾಡ
34.	04-12-2006	ಸೋಮ (ಶಿವ)ವಾರ	ಸವದತ್ತಿ
35.	05-12-2006	ಬಸವ (ಮಂಗಳ)ವಾರ	ಬೈಲಹೊಂಗಲ
36.	06-12-2006	ಚನ್ನ (ಬುಧ)ವಾರ	ಬೈಲಹೊಂಗಲ
37.	07-12-2006	ಪ್ರಭು (ಗುರು)ವಾರ	ನೇಸರಗಿ
38.	08-12-2006	ಮಾತೃ (ಶುಕ್ರ)ವಾರ	ಬೆಳಗಾವಿ

39.	09-12-2006	ಶರಣ (ಶನಿ)ವಾರ	ಬೆಳಗಾವಿ
40.	10-12-2006	ದೇವ (ರವಿ)ವಾರ	"
40.	11-12-2006	ಶಿವ (ಸೋಮ)ವಾರ	"
40.	12-12-2006	ಬಸವ (ಮಂಗಳ)ವಾರ	ಸಂಕೇಶ್ವರ
41.	13-12-2006	ಚನ್ನ (ಬುಧ)ವಾರ	ಗಡಿಹಿಂಗ್ಲಾಜ್
42.	14-12-2006	ಪ್ರಭು (ಗುರು)ವಾರ	ಗಡಿಹಿಂಗ್ಲಾಜ್
43	15-12-2006	ಮಾತೃ (ಶುಕ್ರ)ವಾರ	ಗೋಕಾಕ್
44.	16-12-2006	ಶರಣ (ಶನಿ)ವಾರ	"
45.	17-12-2006	ದೇವ (ರವಿ)ವಾರ	"
46.	18-12-2006	ಶಿವ (ಸೋಮ)ವಾರ	"
47.	19-12-2006	ಬಸವ (ಮಂಗಳ)ವಾರ	ಶೇಗುಣಸಿ
48.	20-12-2006	ಚನ್ನ (ಬುಧ)ವಾರ	ಅಡಹಳ್ಳ ಹಟ್ಟಿ
49.	21-12-2006	ಪ್ರಭು (ಗುರು)ವಾರ	ಕನಮಡಿ
50.	22-12-2006	ಮಾತೃ (ಶುಕ್ರ)ವಾರ	ಬಿಜಾಪುರ
51.	23-12-2006	ಶರಣ (ಶನಿ)ವಾರ	ಸಿಂಧಗಿ
52.	24-12-2006	ದೇವ (ರವಿ)ವಾರ	ಗುಲಬರ್ಗಾ
52.	25-12-2006	ಶಿವ (ಸೋಮ)ವಾರ	ಭೀಮರಾಯನಗುಡಿ
53.	26-12-2006	ಬಸವ (ಮಂಗಳ)ವಾರ	ಯಾದಗಿರಿ
54.	27-12-2006	ಚನ್ನ (ಬುಧ)ವಾರ	ಹುಮನಾಬಾದ್
55.	28-12-2006	ಪ್ರಭು (ಗುರು)ವಾರ	ಉದಗೀರ್
56.	29-12-2006	ಮಾತೃ (ಶುಕ್ರ)ವಾರ	ಬೀದರ್
57.	30-12-2006	ಶರಣ (ಶನಿ)ವಾರ	"
58.	31-12-2006	ದೇವ (ರವಿ)ವಾರ	"
59.	01-01-2007	ಶಿವ (ಸೋಮ)ವಾರ	ಜಹೀರಾಬಾದ್
60.	02-01-2007	ಬಸವ (ಮಂಗಳ)ವಾರ	ತಾಂಡೂರು
61.	03-01-2007	ಚನ್ನ (ಬುಧ)ವಾರ	ಹೈದ್ರಾಬಾದ್
62.	04-01-2007	ಪ್ರಭು (ಗುರು)ವಾರ	"
63.	05-01-2007	ಮಾತೃ (ಶುಕ್ರ)ವಾರ	"
64.	06-01-2007	ಶರಣ (ಶನಿ)ವಾರ	"
65.	07-01-2007	ದೇವ (ರವಿ)ವಾರ	"
66.	08-01-2007	ಶಿವ (ಸೋಮ) ವಾರ	"
67.	09-01-2007	ಬಸವ (ಮಂಗಳ)ವಾರ	"
68.	10-01-2007	ಚನ್ನ (ಬುಧ)ವಾರ	ಕೂಡಲ ಸಂಗಮಕ್ಕೆ ಪ್ರಯಾಣ



ಚಿತ್ರದುರ್ಗ ಬಸವ ಮಂಟಪದಲ್ಲಿ ದಿ:18-11-06ರಂದ ನಡೆದ 20ನೇ ಶರಣ ಮೇಳದ ಪ್ರಚಾರಾರ್ಥ ಪಾಲ್ಗೊಂಡ ಪೂಜ್ಯರು ಮತ್ತು ಗಣ್ಯರು.
ಎಡದಿಂದ ಬಲಕ್ಕೆ :ಪೂಜ್ಯ ಜಗದ್ಗುರು ಗಂಗಾ ಮಾತಾಜಿ, ಪೂಜ್ಯ ಸದ್ಗುರು ಶಿವಲಿಂಗಾನಂದ ಸ್ವಾಮೀಜಿ, ಸನ್ಮಾನ್ಯ ಜಸ್ಟೀಸ್,ವೈ.ಎಸ್. ಹನುಮಂತಪ್ಪ.ಎಂ.ಪಿ, ಸನ್ಮಾನ್ಯ ಜಿ.ಎಸ್.ತಿಪ್ಪಾರೆಡ್ಡಿ. ಎಂ.ಎಲ್.ಎ, ಸನ್ಮಾನ್ಯ ಡಿ.ಬೋರಪ್ಪನವರು, ಸ್ಥಾಪಕರು ಮದಕರಿನಾಯಕ ವಿದ್ಯಾಸಂಸ್ಥೆ, ಮತ್ತು ರಾ.ಬ.ದ.ಗಣ್ಯರು ಭಾಗವಹಿಸಿದ್ದರು



CPMG/KA/BGW-50/2006-2008 WPP(W)-17 R.No. 19980/70

ಶಿವಶರಣ ಗಾಣದ ಕನ್ನಪಯ್ಯ